

ಕಲ್ಯಾಣ ಕಿರಣ


ಮೇ - 2001

ಬೆಲೆ: ರೂ. 5-0





ದಿ. 8-4-2001, ಜಗನ್ಮಾತಾ ಅಕ್ಕಮಹಾದೇವಿ ಪೀಠಾರೋಹಣಕ್ಕೆ ಮೊದಲು
ಬಸವ ಧ್ವಜಕ್ಕೆ ಗೌರವ



ಪೀಠಾರೋಹಣ ಮಾಡಲಿರುವ
[illegible]

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ
ಸಂಚಿಕೆ -5 | ಮೇ-2001 | ವಾರ್ಷಿಕ ಚಂದಾ 50/- ರೂ

ಕೃಪಾನಂದ

ನಿಮ್ಮ ಕಾರುಣ್ಯವೆನ್ನ
ಮನದೊಳಗೆ ಸಂಬಂಧಿಸಿ,
ಭಿನ್ನ ಭಾವವರಿಯದೆ ನಿಮ್ಮೊಳಡಗಿ
ನಾನೇನೆಂದರಿಯೆನಯ್ಯ ॥ ಪಲ್ಲವಿ ॥

ದಶವಾಯುಗಳ ಸಂಚವನಳಿದು
ದಶನಾಳಂಗಳ ಪಥವಡಗಿ
ದಶ ಇಂದ್ರಿಯಂಗಳ ಸಂಚಲವಳಿದು
ಪ್ರಾಣರತಿಯೊಳು ನಿಮ್ಮ ಸಂಗವ ಕಂಡೆನಯ್ಯಾ ॥ 1 ॥

ಚಿತ್ತದ ಕಳೆ ಬುದ್ಧಿಯೊಳಡಗಿ
ಬುದ್ಧಿಯಹಂಕಾರದೊಳಳಿದು
ಅಹಂಕಾರ ಮನದೊಳು ; ಮನ ನಿಮ್ಮ ಕರುಣದ
ಸಂಗವಾಗಿ ಕಣ್ದೆರೆದೆನಯ್ಯಾ ॥ 2 ॥

ಷಡುಚಕ್ರದ ಕಮಳದಲ್ಲಿ ಸುಳಿದಾಡುವ
ಪ್ರಾಣಹಂಸನ ತಿಳುಹಿ
ಮಹಾನುಭಾವದೊಳಗೆ ನಿಲಿಸುತ
ನಿರ್ಮಳ ಲಿಂಗ ಪ್ರಾಣಿಯಾದೆನಯ್ಯ ॥ 3 ॥

ಚೈತನ್ಯನೆ ನೀನೆಂದರಿದು
ಸಾತ್ವಿಕಭಾವವೆಂಧರಿಯದೆ
ಸೂಕ್ಷ್ಮ ತನುವಿನೊಳಗೆ ನಿಮ್ಮ
ಜ್ಞಾನ ಜ್ಯೋತಿಯ ಬೆಳಗನು ಕಂಡೆನಯ್ಯ ॥ 4 ॥

ನೀನೆನ್ನ ಪ್ರಾಣದೊಳಗೆ ಪ್ರಾಣವೇ ಆಗಿ
ನಾ ನಿನ್ನ ಪ್ರಾಣದೊಳಗೆ ಪ್ರಾಣವೇ ಆಗಿ
ನೀ ನಾನೆಂಬುಭಯವನರಿಯದೆ ; ನಿಮ್ಮ
ಕೃಪಾನಂದದೊಳಗಿರ್ದೆನು ಲಿಂಗದೇವಾ ॥ 5 ॥ -ವಿಶ್ವಗುರು ಬಸವಣ್ಣನವರು

(ಶಿವದಾಸ ಗೀತಾಂಜಲಿ, ಪುಟ 208. ಪದ್ಯಗಳು 430-435)"ಶರಣ ವೀಣೆ" ಎಂಬ ಧ್ವನಿ ಸುರುಳಿಯಲ್ಲಿ ಈ ಹಾಡನ್ನು ಧ್ವನಿ ಮುದ್ರಿಸಲಾಗಿದೆ. ತುಂಬಾ ಮಧುರವಾಗಿ ಬಂದಿದೆ.

Web site : www.**Lingayathism**.com
Web site : www.**Basavamission**.com

ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ 31 ಬಸವ ಶಕೆ 868 ಆಜೀವ ಸದಸ್ಯತ್ವ 500 ರೂ
ಸಂಚಿಕೆ 5 ಮೇ-2001 ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಮೇ 1 - ಕಾಯಕ ದಿನಾಚರಣೆ

ಮಡಿವಾಳ ಮಾಚಿದೇವರ ಜಯಂತಿ ಆಚರಿಸಿರಿ

ಕಲ್ಯಾಣ ಕಿರಣದ ಓದುಗರಿಗೆ ಸೂಚನೆ

1. ಪತ್ರಿಕೆ ಬರುತ್ತಿದ್ದಂತೆಯೇ ಅದರ ಕವಚದ ಮೇಲಿರುವ ನಿಮ್ಮ ಕ್ರಮಸಂಖ್ಯೆ ಗುರುತಿಸಿಕೊಳ್ಳಿರಿ. ಪತ್ರ ವ್ಯವಹಾರ ಮಾಡುವಾಗ ಅದನ್ನು ಕಾಣಿಸಿರಿ.
2. ಒಂದಕ್ಕಿಂತ ಹೆಚ್ಚು ಪತ್ರಿಕೆ ಬರುತ್ತಿದ್ದರೆ ನಿಮ್ಮ ಕ್ರಮ ಸಂಖ್ಯೆ ತಿಳಿಸಿ ಹೆಚ್ಚುವರಿ ಪತ್ರಿಕೆ ಕಳಿಸದಿರಲು ತಿಳಿಸಿರಿ.

E-mail : vishwakalyana@lingayathism.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ

ವ್ಯಾಖ್ಯಾನ :

ದೇವ ಕಾರುಣ್ಯದ ಮಹತಿ

-ಮಾತಾಜಿ

ಮೈಸೂರಿನ ಶರಣ. ಡಾ|| ಎಲ್.ಬಸವರಾಜು ಅವರು ಬಹುದೊಡ್ಡ ಉಪಕಾರವನ್ನು ಮಾಡಿದ್ದಾರೆ, ಅವರು ಸಂಗ್ರಹಿಸಿದ ಶಿವದಾಸ ಗೀತಾಂಜಲಿ ಎಂಬ ಕೃತಿಯ ಮೂಲಕ ! 1963ರಲ್ಲಿ ಪ್ರಥಮ ಮುದ್ರಣ ಕಂಡ ಈ ಕೃತಿ ಪುನಃ 1990ರಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ಇದರಲ್ಲಿ ಮುದ್ರಣಗೊಂಡಿದೆ. ಪುಸ್ತಕದ ಬೆಲೆ ಕೇವಲ 40 ರೂ. ಸುಮಾರು 586 ಪುಟದ ಪುಸ್ತಕ. ''ಶರಣರು ಕೇವಲ ವಚನಗಳನ್ನು ಮಾತ್ರ ಬರೆದಿದ್ದಾರೆ. ಅವು ದಾಸರ ಪದಗಳಂತೆ ಹಾಡಲು ಬರುವುದಿಲ್ಲ'' ಎಂದು ಬಹಳ ಜನ ಬಹಳ ಕಾಲ ಭಾವಿಸಿದ್ದರು. ಶಾಸ್ತ್ರೀಯ ಸಂಗೀತಗಾರರು, ''ತಾಳಕ್ಕೆ ಬರುವುದಿಲ್ಲ, ಗದ್ಯ ರೂಪದಲ್ಲಿ ವಚನಗಳು ಸಡಿಲವಾಗಿ ಹರಿದಿವೆ'' ಎಂದೆಲ್ಲ ಮೂಗೆಳೆದು ಮಾತನಾಡುತ್ತಿದ್ದರು. ಈ ಮೂದಲಿಕೆಗಳನ್ನು ಹುಸಿಗೊಳಿಸುವಂತೆ ಇಂದು ವಚನಗಳು ಸಂಗೀತ, ನೃತ್ಯ ಎಲ್ಲಕ್ಕೂ ಹೊಂದಿಕೊಂಡು ಜನರ ನಾಲಿಗೆಯ ಮೇಲೆ, ಮನದಲ್ಲಿ ನಲಿದಾಡತೊಡಗಿವೆ.

''ಶರಣರು ವಚನಗಳನ್ನಷ್ಟೆ ಬರೆದಿಲ್ಲ. ರಾಗಬದ್ಧವಾಗಿ ತಾಳ, ಲಯಕ್ಕನುಸಾರವಾಗಿ ಹಾಡಬಹುದಾದ ಗೀತೆಗಳನ್ನು ಬರೆದಿದ್ದಾರೆ'' ಎಂಬುದನ್ನು ಜಗತ್ತಿಗೆ ಮನಗಾಣಿಸಿದವರು ಪಂಪ ಪ್ರಶಸ್ತಿ ವಿಜೇತ ಶರಣ.ಎಲ್.ಬಸವರಾಜು ಅವರು. ಇಂಥದೊಂದು ಉತ್ಕೃಷ್ಟ ಗ್ರಂಥವನ್ನು 1963ರಲ್ಲಿ ಸುತ್ತೂರಿನ ಲಿಂಗೈಕ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಪ್ರಕಟಿಸಿದರು. ಹೀಗಾಗಿ ಶರಣರ ಗೀತೆಗಳನ್ನು ಸಂಗ್ರಹಿಸಿ ಸಂಪಾದನೆ ಮಾಡಿದ ಶರಣ ಡಾ|| ಎಲ್.ಬಸವರಾಜು ಅವರಿಗೆ ಮತ್ತು ಇಂಥ ಮಹತ್ವಪೂರ್ಣ ಕೃತಿಯನ್ನು ಪ್ರಕಟಿಸಿದ ಲಿಂಗೈಕ್ಯ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಗೆ ಅಭಿನಂದಿಸಿ ಮತ್ತು 1990ರಲ್ಲಿ ಪುನರ್ ಮುದ್ರಣ ಮಾಡಿದ ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ಇದಕ್ಕೆ ಕೃತಜ್ಞತೆ ಸಲ್ಲಿಸಿ ಮುಂದೆ ಸಾಗೋಣ.

ಶಿವದಾಸ ಗೀತಾಂಜಲಿ

ಪುಸ್ತಕಕ್ಕೆ ಇಟ್ಟ ಹೆಸರು ಮಾತ್ರ ದೋಷಪೂರಿತ. ಏಕೆಂದರೆ ವಚನಕಾರರಾದ ನಮ್ಮ ಬಸವಾದಿ ಪ್ರಮಥರು ''ಶಿವದಾಸ''ರಲ್ಲ, ಲಿಂಗಭಕ್ತರು, ಸೃಷ್ಟಿಕರ್ತ ಲಿಂಗದೇವನ ಆರಾಧಕರು, ಶರಣರು. ''ಶರಣ'' ಪದಕ್ಕೆ ಸರಿಸಾಟಿಯಾದ ಹೆಸರು ಮತ್ತೊಂದಿಲ್ಲ; ''ಶರಣ' ಪದವನ್ನು ''ಶಿವದಾಸ'' ಎಂಬ ಪದವು ಖಂಡಿತವಾಗಿ ಪ್ರತಿಪಾದಿಸಲಾರದು. ಆದ್ದರಿಂದ ''ಶರಣ ಗೀತಾಂಜಲಿ'' ಎಂದೇ ಇಟ್ಟು ಬಿಟ್ಟಿದ್ದರೆ ಅದು ಕಲಂಕವಿಲ್ಲದ ಹೆಸರಾಗುತ್ತಿತ್ತು.

ದಾಸ ಮತ್ತು ಶರಣ ಪದಗಳ ವಿಶ್ಲೇಷಣೆ

ಕನ್ನಡ ನಾಡಿನಲ್ಲಿ ಮಾತ್ರವಲ್ಲ ತಮಿಳುನಾಡಿನಲ್ಲಿ ಸಹ ಶಿವದಾಸ ಮತ್ತು 'ವಿಷ್ಣುದಾಸ ಎಂಬ ಎರಡು ಭಕ್ತಿ ಪರಂಪರೆಗಳ ವಾಹಿನಿಗಳನ್ನು ಗುರುತಿಸಬಹುದು. ತಮಿಳುನಾಡಿನಲ್ಲಿ ಆಳ್ವಾರ್‌ಗಳು, ನಾಯನಾರರು ಎಂದು ಗುರುತಿಸಿದಂತೆ, ಕರ್ನಾಟಕದಲ್ಲಿ ವಿಷ್ಣುದಾಸ, ಶಿವದಾಸರನ್ನು ಗುರುತಿಸಬಹುದು. ಈ ಭಕ್ತರುಗಳು ತಮ್ಮನ್ನು ತಾನು ನಂಬಿದ ದೇವತೆಗೆ ಅರ್ಪಿಸಿಕೊಂಡವರು. ಹಾಗೆ ಅರ್ಪಿಸಿಕೊಂಡ ಬಳಿಕ ''ದಾಸ'' ಎಂಬ ವಿಶೇಷಣವನ್ನು ತಮ್ಮ ಹೆಸರಿನ ಜೊತೆಗೆ ಸೇರಿಸಿಕೊಳ್ಳುತ್ತಿದ್ದರು. ಪುರಂದರ ದಾಸರು, ಕನಕದಾಸರು, ವಿಜಯದಾಸರು, ರೋಹಿದಾಸ, ಕಬೀರದಾಸ ಎಂಬ ಹೆಸರುಗಳೇ ಸಾಕ್ಷಿ. ಅದೇ ರೀತಿ ಶಿವದಾಸರು ಸಹ ತಮ್ಮ ಹೆಸರಿನೊಡನೆ ದಾಸ ಪದವನ್ನು ಸೇರಿಸಿಕೊಳ್ಳುತ್ತಿದ್ದರು. ಉದಾಹರಣೆಗೆ ದೇವರದಾಸಿಮಯ್ಯ, ಶಂಕರ ದಾಸಿಮಯ್ಯ, ಜೇಡರ ದಾಸಿಮಯ್ಯ. ಆದರೆ ಶರಣರು ದಾಸ ಎಂಬ ಪದವನ್ನು ಹಾಗೆ ಸೇರಿಸಿಕೊಂಡುದನ್ನು ನಾವು ಗಮನಿಸುವುದಿಲ್ಲ. ಒಂದೇ ಒಂದು ಕಡೆ

ಶಿವಯೋಗಿ ಸಿದ್ದರಾಮೇಶ್ವರರು ಧರ್ಮಪಿತ ಬಸವಣ್ಣನವರನ್ನು ಹೀಗೆ ಸ್ತೋತ್ರ ಮಾಡಿದ್ದಾರೆ.

ಬಸವಣ್ಣನ ಮನೆಯ ಸ್ವಾನಂದ ನೋಡಿದಡೆ
ಎನ್ನ ಮನ ಬೇಸರವಾಗದೆ
ಶಿವದಾಸನೆಂದು, ಜೀವನ್ಮುಕ್ತನೆಂದು ಹೊಗಳುವೆನಯ್ಯಾ
ಎಲೆ ಕಪಿಲಸಿದ್ಧಮಲ್ಲಿಕಾರ್ಜುನ ಪ್ರಭುವೆ - ಸಿ.ವ. 865

ಇಲ್ಲಿ "ಶಿವದಾಸ" ಎಂಬ ಪದವನ್ನು ಬಳಕೆ ಮಾಡಲಾಗಿದೆ. ದಿವ್ಯಮೂರ್ತಿ ಎಂಬ ಅರ್ಥದಲ್ಲೇ ವಿನಾ ದಾಸ ಪರಂಪರೆಯವರಂತೆ ದಾಸದೀಕ್ಷೆ ಪಡೆದುದಕ್ಕಾಗಿ ಅಲ್ಲ.

ದಾಸಭಾವ - ಶರಣಭಾವ

ಷಟಸ್ಥಲ ಮಾರ್ಗದಲ್ಲಿ ದಾಸಭಾವ ಇದೆ. ದೇವನು ಒಡೆಯ-ಜೀವನು ಸೇವಕ ಎಂಬ ಭಾವ ಈ ದಾಸಭಾವದ ಮುಖ್ಯ ಸಾರ. ಆದರೆ ಇಲ್ಲಿಯ ದಾಸಭಾವ ಕೀಳರಿಮೆಯಿಂದ, ದೈನ್ಯದಿಂದ ಕೂಡಿದ್ದಲ್ಲ ಮತ್ತು ಮೊದಲಿನಿಂದ ಕಡೆಯವರೆಗೂ ಹಾಗೆಯೇ ಉಳಿಯುವಂಥದಲ್ಲ. ಷಟಸ್ಥಲವನ್ನು ಮನೋವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಿಸಿದರೆ ಒಡೆಯ-ದಾಸ ಎಂಬ ಭಾವ ಮೊದಲಲ್ಲಿ, ತಂದೆ-ಮಗ ಎಂಬ ಭಾವ ನಂತರದಲ್ಲಿ ಬೆಳೆದು ಲಿಂಗಪತಿ-ಶರಣಸತಿ ಎಂಬ ಭಾವ ಅಂತಿಮವಾಗಿ ನೆಲೆಗೊಳ್ಳುವುದನ್ನು ಕಾಣುತ್ತೇವೆ.

ಆರಂಭದಲ್ಲಿ ಕಾಣುವ ದೈನ್ಯತೆ, ದಾಸ್ಯ ಕರಗಿ ಹೋಗಿ ದೇವನೊಡನೆ ಸಂಬಂಧ ಆತ್ಮೀಯವೂ ಪ್ರೌಢವೂ ಆಗಿ, ಕಡೆಯಲ್ಲಿ ಶರಣನು ದೇವನ ಪತ್ನಿ, ಅರ್ಧಾಂಗಿನಿಯಾಗಿ ಒಡೆತನವನ್ನೇ ಸಂಪಾದಿಸಿಕೊಳ್ಳುತ್ತಾನೆ. ಇಲ್ಲಿ ಇರುವ ಒಡೆತನ, ಸ್ವಾಮಿನಿಭಾವ ಅದ್ಭುತವಾದವು. ಒಂದು ಮನೆಯನ್ನೇ ತೆಗೆದುಕೊಂಡರೆ ಒಡೆಯನ ಮೇಲೆ ಭಕ್ತಿ ಇದ್ದರೂ ಸೇವಕ ದೂರವಾಗಿಯೇ ಇರುವನು. ಪುತ್ರನು ತಂದೆಯೊಡನೆ ಹೆಚ್ಚಿನ ಆತ್ಮೀಯತೆ, ಹಕ್ಕು ಹೊಂದಿರುವನು. ಪತ್ನಿಯು ಪತಿಯೊಡನೆ ಅತಿ ಹೆಚ್ಚಿನ ಆತ್ಮೀಯತೆ ಮತ್ತು ಹಕ್ಕು ಹೊಂದಿರುವಳು. ಅದೇ ರೀತಿ ಶರಣಸತಿ, ಲಿಂಗಪತಿಯ ನಡುವಿನ ಸಂಬಂಧ. ಆದ್ದರಿಂದ ದಾಸ ಭಕ್ತಿ-ಶರಣ ಭಕ್ತಿಯ ಅಜಗಜಾಂತರ ವ್ಯತ್ಯಾಸ ಅರಿತು ಶರಣ. ಡಾ|| ಎಲ್.ಬಸವರಾಜು ಅವರು ಮುಂದಿನ ಆವೃತ್ತಿಗಾದರೂ ಶಿವದಾಸ ಗೀತಾಂಜಲಿ ಎಂಬ ಶೀರ್ಷಿಕೆ ತೆಗೆದು "ಶರಣ ಗೀತಾಂಜಲಿ" ಎಂದು ಇಟ್ಟರೆ ಸೂಕ್ತವಾಗುವುದು.

ಶರಣರನ್ನು "ಶಿವದಾಸ"ರೆಂದು ಡಾ|| ಎಲ್.ಬಸವರಾಜು ಅವರು ಕರೆದಿರುವುದಕ್ಕೆ ಮುಖ್ಯ ಕಾರಣ ಶೈವ-ವೀರಶೈವ- ಲಿಂಗಾಯತಗಳ ವ್ಯತ್ಯಾಸವನ್ನು ಅವರು ತಿಳಿಯದೆ ಇರುವುದು ಎಂದು ನಾನು ಊಹಿಸುತ್ತೇನೆ. ಪುಸ್ತಕ ಪೀಠಿಕೆಯ ಭಾಗದಲ್ಲಿ ಆ ಗೊಂದಲ ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ. ಡಾ|| ಹಿರೇಮಲ್ಲೂರ ಈಶ್ವರನ್ ಅವರು ಲಿಂಗಾಯತ ಧರ್ಮ ಕುರಿತು 3 ಪುಸ್ತಕಗನ್ನು ಬರೆಯುವ ಮೊದಲು ಎರಡು ದಿವಸಗಳ ಕಾಲ ಧಾರವಾಡದಲ್ಲಿ ಚರ್ಚಿಸಿದಾಗ ಹೇಗೆ ಶೈವ-ವೀರಶೈವ-ಲಿಂಗಾಯತ ಬೇರೆ ಬೇರೆ ಎಂಬುದನ್ನು ನಾನು ವಿವರಿಸಿದೆ. ಈ ಬಗ್ಗೆ ಸರಿಯಾಗಿ ತಿಳಿದು ಮೊಟ್ಟ ಮೊದಲು ಪ್ರತಿಪಾದಿಸಿದವರು ಪ್ರೊ. ಎಂ.ಆರ್.ಸಾಖರೆ. ಇವರ ಖಚಿತತೆಗೆ ಇವರು ಆಂಗ್ಲದೇಶಕ್ಕೆ ಹೋಗಿ ಶಿಕ್ಷಣ ಪಡೆದಿರುವುದೂ ಒಂದು ಕಾರಣವಿರಬಹುದು. ನಂತರ ಡಾ|| ಹಿರೇಮಲ್ಲೂರು ಈಶ್ವರನ್ ಅವರು. ಇನ್ನುಳಿದ ಬರಹಗಾರರಾದ ಲಿಂ|| ಡಾ|| ತಿಪ್ಪೇರುದ್ರಸ್ವಾಮಿಗಳು, ಲಿಂ|| ಡಾ. ಆರ್.ಸಿ. ಹಿರೇಮಠ, ಡಾ|| ಚಿದಾನಂದ ಮೂರ್ತಿ, ಡಾ|| ಎಲ್.ಬಸವರಾಜು ಇವರು ಶೈವ-ವೀರಶೈವ-ಲಿಂಗಾಯತಗಳ ತಾತ್ವಿಕ ವ್ಯತ್ಯಾಸ ಅರಿಯಲು ಅಸಮರ್ಥರಾಗಿದ್ದಾರೆ. ಮೊದಲನೆಯ ಮೂವರಲ್ಲಿ ಇಬ್ಬರು ಗತಿಸಿಹೋಗಿದ್ದಾರೆ. ಅವರಿಗೆ ಸತ್ಯವನ್ನು ತಿಳಿದುಕೊಳ್ಳಲು ಅವಕಾಶ ಇತ್ತಾದರೂ ಅವರ ಹುಟ್ಟು ಜಂಗಮತ್ವ ಸತ್ಯವನ್ನು

ಪ್ರತಿಪಾದಿಸಲು ಅಡ್ಡಿಯನ್ನು ಉಂಟು ಮಾಡಿರಲೂ ಸಾಕು. ಇದೇ ಸಮಸ್ಯೆ ಡಾ|| ಚಿದಾನಂದಮೂರ್ತಿ, ಡಾ|| ವೃಷಭೇಂದ್ರ ಸ್ವಾಮಿ, ಡಾ|| ಪಂಚಾಕ್ಷರಿ ಹಿರೇಮಠ ಮುಂತಾದವರಿಗೆ ಹುಟ್ಟಿನಿಂದಲೇ ಬಂದಿರುವ ಸಮಸ್ಯೆಯಾಗಿರುವ ಕಾರಣ ಅವರಿಂದ ಪ್ರಾಮಾಣಿಕ ಇತಿಹಾಸ ರಚನೆ ಸಾಧ್ಯವಿಲ್ಲ. ಆದರೆ ಡಾ|| ಎಲ್.ಬಸವರಾಜು ಅವರಿಗೆ ಈ ಸಮಸ್ಯೆ ಇರಲಿಕ್ಕಿಲ್ಲ. ಈಗಾದರೂ ಅವರು ಮನಸ್ಸು ಮಾಡಿ, ಬೌದ್ಧಿಕ ಪ್ರಾಮಾಣಿಕತೆಯಿಂದ ಸತ್ಯವನ್ನು ಅರಿಯಲು ಯತ್ನಿಸಿ ಶೈವ-ವೀರಶೈವಗಳಿಂದ ಬೇರೆಯೇ ಆದ ಲಿಂಗಾಯತ ಧರ್ಮದ ಪರಂಪರೆ ಶರಣ ಪರಂಪರೆ ಎಂದು ತಿಳಿದು, ಇದರ ದರ್ಶನ ಶಾಸ್ತ್ರದ ವೈಶಿಷ್ಟ್ಯವೇ ಬೇರೆ ಎಂದು ಇನ್ನು ಮುಂದಾದರೂ ಬರೆದರೆ ಹೆಚ್ಚಿನ ಉಪಕಾರವಾಗುವುದು.

ಕೃಪಾನಂದ / ಆತ್ಮಲಿಂಗ ಸಾಕ್ಷಾತ್ಕಾರ

ಕೃಪಾನಂದ ಎಂಬ ಶೀರ್ಷಿಕೆಯಡಿಯಲ್ಲಿ ಧರ್ಮಪಿತ ಬಸವಣ್ಣನವರ ಒಂದು ಭಕ್ತಿಗೀತೆಯನ್ನು ಮೊದಲನೆಯ ಪುಟದಲ್ಲಿ ಪ್ರಕಟಿಸಲಾಗಿದೆ. ಈ ಗೀತೆಯಲ್ಲಿ ದೇವ ಕಾರುಣ್ಯ [God's grace] ಕುರಿತು ಧರ್ಮಪಿತರು ಮಾರ್ಮಿಕವಾಗಿ ಬಣ್ಣಿಸಿದ್ದಾರೆ.

ಕ್ರೈಸ್ತ ಧರ್ಮ ಹಾಗೂ ಲಿಂಗಾಯತ ಧರ್ಮಗಳು ದೇವರ ಕರುಣೆಯ ಮಹತ್ವವನ್ನು ಒತ್ತಿ ಒತ್ತಿ ಹೇಳುವ ಧರ್ಮಗಳು. ಪರಮಾತ್ಮನು ತಮ್ಮ ಕರುಣೆಯ ಕಿರಣಗಳನ್ನು ಸಾಧಕ ಜೀವಿಯ ಮೇಲೆ ಹರಿಸಿ ತನ್ನತ್ತ ನಿಧಾನವಾಗಿ ಸೆಳೆದುಕೊಳ್ಳುವನು. ಇದನ್ನು ಬಸವಣ್ಣನವರು ಹೃದಯ ಸ್ಪರ್ಶಿಯಾಗಿ ಹೇಳಿದ್ದಾರೆ. ದೇವನಲ್ಲಿ ಮುಖ್ಯವಾದ ಅಂಶ- ಕಾರುಣ್ಯ. ಜೀವನಲ್ಲಿ ಮುಖ್ಯವಾದ ಅಂಗ-ಮನಸ್ಸು. ದೇವನ ಕಾರಣ್ಯದ ಧಾರೆ ಹರಿಯುತ್ತಲೇ ಜೀವನ ಮನಸ್ಸು ದೇವನೆಡೆಗೆ ಸಾಗುತ್ತ, ಅವನಲ್ಲಿ ಅಡಗಿ ಭಿನ್ನತೆಯ ಭಾವವನ್ನೇ ಕಳೆದುಕೊಂಡು, ಏನೆಂದು ಅರಿಯದ ಶಬ್ದಮುಗ್ಧ. ತೂರ್ಯಸ್ಥಿತಿಯನ್ನು ಪಡೆಯುತ್ತದೆ.

ದಶವಾಯುಗಳು : ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ ಎಂಬ 5 ಮುಖ್ಯ ಪ್ರಾಣಗಳು, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜನ ಎಂಬ 5 ಉಪಪ್ರಾಣಗಳು ಸೇರಿ ದಶವಾಯುಗಳು ಎನ್ನಿಸಿಕೊಳ್ಳುವುವು.

ದಶನಾಳಂಗಳು :ಈಡಾ, ಪಿಂಗಳಾ, ಸುಷುಮ್ನಾ, ಗಾಂಧಾರಿ, ಹಸ್ತಿ, ಜಿಹ್ವಾ, ಪೂಷಾ, ಪಯಸ್ವಿನಿ, ಲಕುಹ, ಅಲಂಬು ಮತ್ತು ಶಂಖಿನೀ ಎಂಬುವು 10 ನಾಡಿಗಳು.

ದಶ ಇಂದ್ರಿಯಗಳು : ಪಂಚ ಜ್ಞಾನೇಂದ್ರಿಯ : ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ
ಪಂಚ ಕರ್ಮೇಂದ್ರಿಯ : ನಾಲಿಗೆ (ವಾಕ್) ಹಸ್ತ, ಪಾದ, ಗುದ, ಗುಹ್ಯ

ದಶವಾಯುಗಳ ಸ್ವಾಭಾವಿಕ ಚಲನೆ ನಿಂತು ದಶ ನಾಡಿಗಳು ಸಹ ಸ್ತಬ್ಧವಾಗಿ, ಪಂಚಜ್ಞಾನೇಂದ್ರಿಯ-ಪಂಚ ಕರ್ಮೇಂದ್ರೀಯ ಸ್ವಾಭಾವಿಕ ಚಟುವಟಿಕೆ ನಿಲ್ಲಿಸಿದಾಗ, ಆಗ ಮನಸ್ಸು ಪರಮಾತ್ಮನ ಸಂಗದಲ್ಲಿ ರತಿಯನ್ನಾಡುತ್ತವೆ. ಹೀಗಾಗಿ ನಾನೇನು ಎಂಬುದನ್ನು ಮರೆತಿದ್ದೇನೆ. ||1||

ಅನೇಕ ಅನುಭವಗಳ, ನೆನಪುಗಳ ಆಗರವಾದ ಚಿತ್ತವು [sub-conscious mind] ಬುದ್ಧಿಯಲ್ಲಿ [intellect] ಅಡಗುತ್ತದೆ. ನಂತರ ಬುದ್ಧಿಯು ಅಹಂಕಾರ [ego]ದಲ್ಲಿ ಅಡಗುತ್ತದೆ. ಆ ಅಹಂಕಾರವು ಮನಸ್ಸಿನಲ್ಲಿ ಹುದುಗುತ್ತದೆ. ಇಂಥ ಮನಸ್ಸು ಪರಮಾತ್ಮನ ಕಾರಣ್ಯದ [grace] ಕಿರಣಗಳಿಂದ ಪರುಷ ಸ್ಪರ್ಶಿತವಾಗಿ ದೈವೀಕರಣಗೊಂಡು ಅಪೂರ್ವ ಜ್ಞಾನದಿಂದ ಬೆಳಗುತ್ತದೆ. ಇದನ್ನೇ ಕಣ್ತೆರೆದೆನಯ್ಯಾ ಎಂದು ಧರ್ಮಪಿತರು ವರ್ಣಿಸಿರುವುದು. || 2 ||

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರುಚಕ್ರಗಳಲ್ಲಿ ಪ್ರಾಣ ಎಂಬ ಹಂಸೆಯು ಸುಳಿದಾಡುತ್ತಿರುತ್ತದೆ. ಅಂಥ ಪ್ರಾಣವನ್ನು ದೇವನ ದಿವ್ಯಾನುಭವದ ಸ್ಪರ್ಶಕ್ಕೆ

ಈಡು ಮಾಡುತ್ತಲೇ ಪ್ರಾಣವು ಲಿಂಗವಾಗಿ, ಲಿಂಗ ಪ್ರಾಣಿಯೇ ನಾನಾದೆನು ॥3॥

ಚೈತನ್ಯ ಸ್ವರೂಪನೇ ನೀನೆಂದು ತಿಳಿದು, ಸೂಕ್ಷ್ಮ ಶರೀರದಲ್ಲಿ ಹಾಸುಹೊಕ್ಕಾಗಿ ಇರುವ ಲೀಲೆಯನ್ನು ಅರಿತು, ಜ್ಞಾನ ಜ್ಯೋತಿಯೇ ಆಗಿ ಸರ್ವಾಂಗದಲ್ಲಿ ಬೆಳಗುತ್ತಿರುವುದನ್ನು ನಾನು ಕಂಡು, ಏನನ್ನೂ ಹೇಳಲಾರದ ಶಬ್ದಮುಗ್ಧನಾಗಿದ್ದೇನೆ ॥4॥

ಲಿಂಗದೇವಾ, ನಿನ್ನ-ನನ್ನ ಸಂಬಂಧ ಅವಿನಾಭಾವ. ನೀನು ನನ್ನ ಪ್ರಾಣ ಪ್ರಾಣವೇ ಆಗಿದ್ದೀಯ. ನಾನು ಸಹ ನಿನ್ನ ಪ್ರಾಣದೊಳಗೆ ಪ್ರಾಣವಾಗಿದ್ದೇನೆ. ಲಿಂಗ-ಅಂಗ ಬಿಚ್ಚಿ ಬೇರಾಗದಂತೆ ಸಂಯೋಗಗೊಂಡಿವೆ. ನೀನು ತೋರಿದ ಕೃಪೆ ; ಅದನ್ನು ಬೆನ್ನು ಹತ್ತಿಯೇ ಅವತೀರ್ಣಗೊಂಡ ಆನಂದ ಇವುಗಳಲ್ಲಿ ಕರಗಿ ಹೋಗಿರುವ ನಾನು ಏನೊಂದನ್ನೂ ನುಡಿಯಲಾರದ ಸ್ಥಿತಿಯಲ್ಲಿದ್ದೇನೆ ॥5॥

ಹೀಗೆ ಈ ಗೀತೆಯು ಅಪೂರ್ವವಾಗಿ ಪ್ರಾಣಲಿಂಗ ಸಾಕ್ಷಾತ್ಕಾರದ ದಿವ್ಯಾನುಭವವನ್ನು ಬಣ್ಣಿಸುತ್ತಿದೆ.

ಕಲ್ಯಾಣ ಕಿರಣದ ಮಹತ್ವ

ಬಸವಣ್ಣನವರಿಂದ ಉದಿಸಿದಾ ಕಿರಣ
ಬಸವಾದಿ ಪ್ರಮಥರಿಗೆ ಮೆಚ್ಚುಗೆಯ ಕಿರಣ
ಬಸವ ಕಲ್ಯಾಣದಲ್ಲಿ ಬೆಳಗಿದಾ ಕಿರಣ
ಹಸನಾದ ತತ್ತ್ವ ಕೆಚ್ಚುನುಡಿ ಕಿರಣ
ಹನ್ನೆರಡನೆ ಶತಕದಲ್ಲಿ ಹುಟ್ಟಿತ್ತು ಕಿರಣ
ಮುನ್ನೆಂಟು ಶತಕದಲಿ ಮರೆಯಾದ ಕಿರಣ
ಅಂದಿಂದ ಈವರೆಗೂ ಮುಸುಕಿದ್ದ ಕಿರಣ
ಇಂದು ಬಂದಿತು ಮತ್ತೆ ಪಸರಿಸಿತು ಕಿರಣ
ಬಸವೇಶ ನೀಡಿದಾ 'ಲಿಂಗದೇವ'ನ ಕಿರಣ
ಅಸಮತೆಯ ತೊಡೆದ ಸಮಾನತೆಯ ಕಿರಣ
ಅಪ್ಪ ನೀಡಿದ ಅಮರ ಸಂದೇಶ ಕಿರಣ
ತಪ್ಪು ದಾರಿಗೆ ಬಿಡದ ಸಾಹಿತ್ಯ ಕಿರಣ
'ಅಪ್ಪ ಸದ್ಗುರು ಲಿಂಗಾನಂದರಿಂದಲೀ ಕಿರಣ
ಇಪ್ಪತ್ತು ಶತಕದಲಿ ಬೆಳಗಿದಾ ಕಿರಣ
ಗೊತ್ತೆ ? ಇದು ಎಲ್ಲರಿಗೂ ಸಲುವಾ ಕಿರಣ
ವಿಶ್ವ ಮಾನವಗಿದು ಜ್ಞಾನ ಬೀರುವ ಕಿರಣ
ವಿಶ್ವಗುರು ಸಕಲರಿಗೂ ಲೇಸ ಬಯಸಿದ ಕಿರಣ
ಜನ ಮನಕೆ ಜ್ಞಾನ ವಾಹಿನಿಯಾದ ಕಿರಣ
ಸುಮದಂತೆ ಮಾತಾಜಿ ಜ್ಞಾನ ಬೀರಿದ ಕಿರಣ
ಬರೆದು ನಾಡಿನಲೆಲ್ಲ ಹೆಸರಾದ ಕಿರಣ.
ಸುರಿದು ಸವಿಜೇನಿನ ಹನಿಯಾದ ಕಿರಣ
ಬಸವಾತ್ಮಜೆ ಮಾತಾಜಿಯ ಕಾರುಣ್ಯ ಕಿರಣ
ಸುಜನರಿಗೆ ಮನ ತಣಿಸೋ 'ಕಲ್ಯಾಣ ಕಿರಣ'

- ಎಸ್.ಜಿ. ಬಸವರಾಜು, ಎಸ್.ಕೊಪ್ಪಲು

ವಚನ ವಾಙ್ಮಯದ ಪುನರುತ್ಥಾನಕ್ಕಾಗಿ ಷಟ್‌ಕ್ರಿಯೆಗಳು

-ಬಸವಾತ್ಮಜೆ

ಹುಬ್ಬಳ್ಳಿಯಲ್ಲಿ ಒಮ್ಮೆ ಒಂದು ಪತ್ರಿಕಾಗೋಷ್ಠಿ ಕರೆದಿದ್ದೆ. ಆಗ ಇಬ್ಬರು ಪತ್ರಿಕಾ ಪ್ರತಿನಿಧಿಗಳು ತೀಕ್ಷ್ಣವಾದ ಒಂದು ಪ್ರಶ್ನೆಯನ್ನು ಕೇಳಿದರು. ಅವರು ಪ್ರಶ್ನೆ ಕೇಳಲಿಕ್ಕೆ ನಾನು ಹೇಳಿದ ಒಂದು ಮಾತು ಪ್ರೇರಣೆ ನೀಡಿತು.

''ವಚನ ವಾಙ್ಮಯವು ಕೇವಲ ಸಾಹಿತ್ಯವಲ್ಲ. ಕೇವಲ ಸಾಹಿತ್ಯಿಕ ಮೌಲ್ಯಗಳ ದೃಷ್ಟಿಯಿಂದ ಅದನ್ನು ಅಧ್ಯಯನ ಮಾಡಬಾರದು. ಸಾಹಿತ್ಯವು ಮಾನವನ ಸರ್ವಾಂಗೀಣವಾದ ವ್ಯಕ್ತಿತ್ವ ವಿಕಾಸಕ್ಕೆ ಇರುವ ಹಲವಾರು ಸಾಧನಗಳಲ್ಲಿ ಒಂದು. ಧರ್ಮವು ಜೀವನದ ಸರ್ವಾಂಗೀಣ ವಿಕಾಸಕ್ಕೆ ಬೇಕಾದ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ವಚನ ಸಾಹಿತ್ಯವನ್ನು ಸೈದ್ಧಾಂತಿಕ [metaphysical] ತಾತ್ತ್ವಿಕ[philosophical] ಸಾಮಾಜಿಕ[Social] ದಾರ್ಶನಿಕ[mystical] ಎಲ್ಲಾ ದಿಕ್ಕಿನಿಂದಲೂ ಅಧ್ಯಯನ ಮಾಡಬೇಕಾಗಿದೆ ಮತ್ತು ಇದೇ ಸಂದರ್ಭದಲ್ಲಿ ವಚನ ಸಾಹಿತ್ಯದ ಶುದ್ಧೀಕರಣ [purification] ಮತ್ತು ಸೂತ್ರೀಕರಣ [Codification] ಸಹ ಆಗಬೇಕಾಗಿದೆ. ಈ ವರೆಗೂ ಆಗಿರುವುದು ಸಂಗ್ರಹಣಾಕಾರ್ಯ ಮಾತ್ರ. ಅಲ್ಪ ಸ್ವಲ್ಪ ಸಾಹಿತ್ಯಿಕ ವಿಶ್ಲೇಷಣೆ ಆಗಿದೆ. ವಚನ ವಾಙ್ಮಯವು ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನ'' ಎಂದು ಹೇಳಿದೆ.

ಈ ನನ್ನ ಪ್ರತಿಪಾದನೆಯಿಂದ ಪ್ರೇರಿತ (ಪ್ರಚೋದಿತ)ರಾದ ಆ ಪ್ರತಿನಿಧಿಗಳು ಕೇಳಿದರು. ''ವಚನ ಸಾಹಿತ್ಯವು ಲಿಂಗಾಯತ ಧರ್ಮದ ಸಂವಿಧಾನ ಎಂದು ಹೇಳುವ ಮೂಲಕ ಅದನ್ನು ಸೀಮಿತಗೊಳಿಸಿದಂತಾಗಲಿಲ್ಲವೆ ? ಇದು ನಮಗೆ ಸಂಬಂಧವಿಲ್ಲ, ಲಿಂಗಾಯತರಿಗೆ ಸಂಬಂಧಿಸಿದ್ದು ಎಂದು ಲಿಂಗಾಯತೇತರರು ಓದುವುದನ್ನೇ ಬಿಡುತ್ತಾರೆ. ಬೈಬಲ್ ಕ್ರೈಸ್ತರದು, ಕುರಾನ್ ಮುಸಲ್ಮಾನರದು ಎಂದು ತಿಳಿದು ಬೇರೆಯವರು ಓದದಿರುವಂತೆ ವಚನ ಸಾಹಿತ್ಯದ ಪಾಡೂ ಆಗುತ್ತದೆಯಲ್ಲವೆ ?'' ಎಂದು ಕೇಳಿದರು.

''ಇಲ್ಲ ಆಸಕ್ತರಾದ ಧಾರ್ಮಿಕರು ಆಯಾ ಧರ್ಮಗಳ ಸಾರವೇನು ಎಂದು ತಿಳಿಯಲು ಈ ಎಲ್ಲ ಗ್ರಂಥಗಳನ್ನು ಓದುವುದಿಲ್ಲವೆ ? ಸ್ವತಃ ನಾನೇ ಜ್ಞಾನದ ದೃಷ್ಟಿಯಿಂದ ಎಲ್ಲರ ಧರ್ಮಗ್ರಂಥಗಳನ್ನು ಓದುತ್ತೇನೆ. ಲಿಂಗಾಯತ ಸಮಾಜವು ಇಷ್ಟು ವಿಕೃತಗೊಂಡಿರುವುದಕ್ಕೆ ಕಾರಣವೇನೆಂದರೆ ವಚನ ಸಾಹಿತ್ಯವು ಹೇಳಿದಂತೆ ನಡೆಯಬೇಕಾದುದು ನಮ್ಮ ಧರ್ಮ ಎಂಬುದನ್ನು ಮರೆತಿರುವುದರಿಂದ. ಇದರ ಅರಿವಾದರೆ ಲಿಂಗಾಯತರು ಜಾತ್ಯತೀತವಾದಿಗಳು, ಪ್ರಗತಿಪರ ಚಿಂತನಶೀಲರು ಆಗುತ್ತಾರೆ. ಆದ್ದರಿಂದ ವಚನ ಸಾಹಿತ್ಯ ಸೀಮಿತ ಮತೀಯ ಸಾಹಿತ್ಯವಲ್ಲ ; ಜಾಗತಿಕ ಧರ್ಮದ ಪರಿಕಲ್ಪನೆ ಹೊಂದಿರುವಂಥದು ಎಂಬುದನ್ನು ಪ್ರತಿಪಾದಿಸಲೆಂದೇ ನಾವು ಹೀಗೆ ಪ್ರತಿಪಾದಿಸುತ್ತಿರುವುದು.'' ಎಂದು ಹೇಳಿದೆ.

ವಚನ ಸಾಹಿತ್ಯ ಮತ್ತು ವಚನಕಾರರು ಬಂಜೆಯಂಥಲ್ಲ. ಒಂದು ಪರಂಪರೆಯನ್ನು ಹೆತ್ತವರು. ಆ ಪರಂಪರೆಯ ರಕ್ಷಣೆ ಶರಣರ ಕರುಳ ಕುಡಿಗಳಾದ ನಮ್ಮೆಲ್ಲರ ಕರ್ತವ್ಯ. ಸರ್ಕಾರಿ ಗೋಮಾಳ ಎಲ್ಲರ ಸೊತ್ತು. ಅಲ್ಲಿ ಬೆಳೆದ ಹುಲ್ಲನ್ನು ತಿನ್ನಲು ಎಲ್ಲರೂ ದನಗಳನ್ನು ಬಿಡಬಹುದೇ ಹೊರತು ಯಾರೂ ಅಲ್ಲಿ ಲಕ್ಷ್ಯಕೊಟ್ಟು ಬೆಳೆ ಬೆಳೆಸರು. ವಚನ ಸಾಹಿತ್ಯದ ಪಾಡೂ ಅಂತೆಯೇ ಆಗಿತ್ತು. ಅನೇಕ ಲೇಖಕರು ವಚನ ಸಾಹಿತ್ಯದ ಹೊಲದಲ್ಲಿ ಬೇಕಾದಷ್ಟು ಬೆಳೆ ತೆಗೆದುಕೊಂಡರು. ಆದರೆ ಅದರ ರಕ್ಷಣೆಗೆ ಮುಂದಾಗಲಿಲ್ಲ. ಪ್ರತಿಫಲವಾಗಿ ಮುಕ್ತಿ ಕಂಠಾಭರಣ, ಸಂಕ್ರಾಂತಿ, ಮಹಾಚೈತ್ರ, ಬಸವರ ನೋಟ,

ವಚನ-ನಿರ್ವಚನದಂತಹ ಕೀಳುಮಟ್ಟದ, ಶರಣರ ಅವಹೇಳನ ಮಾಡುವ ಕೃತಿಗಳು ಹೊರಬಂದವು. ಲಿಂಗಾಯತರಿಗೆ ಜವಾಬ್ದಾರಿ ಇಲ್ಲ ; ಲಿಂಗಾಯತೇತರರು ವಚನ ಸಾಹಿತ್ಯಕ್ಕೂ ತಮಗೂ ಏನು ಸಂಬಂಧ ಎಂದ ಉದಾಸೀನ ತಾಳಿದರು. ಕೆಲವು ಪ್ರೌಢ ಸಾಹಿತಿಗಳು ಶ್ರೀ ಡಾ॥ ದೇ. ಜವರೇಗೌಡರಂತಹವರು ವಚನ ಸಾಹಿತ್ಯ ಕುರಿತು ಉತ್ತಮ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದರಾದರೂ ಶರಣರ ನಿಂದೆಯಾದಾಗ ಆ ವಿವಾದಗಳಲ್ಲಿ ತಲೆ ಹಾಕಲಿಲ್ಲ. ಮಹಾಚೈತ್ರ, ವಚನ ನಿರ್ವಚನ ಎರಡೂ ಶರಣರನ್ನು ಹಿಗ್ಗಾ ಮುಗ್ಗಾ ನಿಂದಿಸಿರುವ ಕೃತಿಗಳಾಗಿದ್ದರೂ ಲಿಂಗಾಯತ ಮತ್ತು ಲಿಂಗಾಯತೇತರ ಉಭಯ ಸಾಹಿತಿಗಳು ಆ ಬಗ್ಗೆ ತಲೆ ಕೆಡಿಸಿಕೊಳ್ಳಲು ಹೋಗಲಿಲ್ಲ. ಏಕೆಂದರೆ ಸಾಹಿತಿಗಳಾಗಿ ಸಹೋದ್ಯೋಗಿಗಳನ್ನು ರಕ್ಷಿಸಿಕೊಳ್ಳುವುದು ತಮ್ಮ ಧರ್ಮ ಎಂದು ಅನೇಕರು ತಿಳಿದರೇ ವಿನಾ ನಿರ್ಮಲಾತ್ಮಕರಾದ ಶರಣರನ್ನು ರಕ್ಷಿಸುವುದು ತಮ್ಮ ಕರ್ತವ್ಯ ಎಂದು ಭಾವಿಸಲಿಲ್ಲ. (ವಿರೋಧಿಸಿದರೆ ಭವಿಷ್ಯದಲ್ಲಿ ಬರಬಹುದಾದ ಪ್ರಶಸ್ತಿಗಳು ತಪ್ಪಿಹೋಗುವ ಆತಂಕ ಕೆಲವು ಸಾಹಿತಿಗಳಲ್ಲಿ ಇದ್ದರೂ ಇರಬಹುದು) ಇದನ್ನೆಲ್ಲ ಚಿಂತಿಸಿಯೇ ಒಂದು ಜವಾಬ್ದಾರಿಯನ್ನು ಬಸವ ತತ್ತ್ವಾನುಯಾಯಿಗಳಿಗೆ ಹೊರಿಸಿ, ನಾವೂ ಹೊರಬೇಕಾದ ಅಗತ್ಯವನ್ನು ಮನಗಂಡೆವು.

ವಚನ ಸಾಹಿತ್ಯವನ್ನು ಸಂರಕ್ಷಿಸುವುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯ. ಇಂದು ಪ್ರಜ್ಞಾಶೂನ್ಯ ಸ್ಥಿತಿಯಲ್ಲಿರುವ ಲಿಂಗಾಯತ ಸಮಾಜದ ದೇಹದೊಳಕ್ಕೆ ವಚನ ಸಾಹಿತ್ಯದ ಔಷಧಿಯನ್ನು ತೂರಿಸಬೇಕಾಗಿದೆ. ಈ ದಿಶೆಯಲ್ಲಿ ಷಟ್‌ಕ್ರಿಯೆಗಳನ್ನು ಎಲ್ಲರೂ ಅಳವಡಿಸಿಕೊಳ್ಳುವುದು ಅಗತ್ಯವಿದೆ. ಆ ಷಟ್‌ಕ್ರಿಯೆಗಳನ್ನು ಹೀಗೆ ಪಟ್ಟಿ ಮಾಡುತ್ತೇನೆ.

1. ಅಧ್ಯಯನ
2. ಪಾರಾಯಣ /ಪಠಣ
3. ಲೇಖನ
4. ಚಿಂತನ
5. ಅನುಷ್ಠಾನ
6. ಪ್ರಸರಣ

1. ಅಧ್ಯಯನ : ಪ್ರತಿಯೊಬ್ಬ ಜ್ಞಾನಾಕಾಂಕ್ಷಿಯೂ ಪ್ರತಿನಿತ್ಯ ವಚನ ವಾಙ್ಮಯದ ಅಧ್ಯಯನ ಮಾಡಬೇಕು. ಕನಿಷ್ಟ ಇಂತಿಷ್ಟು ಪುಟಗಳನ್ನು ಓದುತ್ತೇನೆ. ಎಂಬ ನಿಯಮವನ್ನು ಹಾಕಿಕೊಳ್ಳಬೇಕು.

2. ಪಾರಾಯಣ : ಸಹಜವಾಗಿ ಜ್ಞಾನಾಕಾಂಕ್ಷೆಯಿಂದ ಬೇರೆ ಬೇರೆ ಗ್ರಂಥಗಳನ್ನು ಓದುವುದು ಅಧ್ಯಯನವಾದರೆ ಒಂದು ಧಾರ್ಮಿಕ ವಿಧಿಯನ್ನಾಗಿ ಪಾರಾಯಣ/ಪಠಣವನ್ನು ರೂಢಿಸಿಕೊಳ್ಳಬೇಕು. ಅಧ್ಯಯನವು ವಚನ ವಾಙ್ಮಯದ ವಿಸ್ತಾರ ತಿಳಿಯಲು ಸಹಾಯಕವಾದರೆ ಪಾರಾಯಣ/ಪಠಣ ಎಂಬ ನಿತ್ಯ ವಿಧಿಯು ಆಳಕ್ಕೆ ಇಳಿಯಲು ನೆರವಾಗುತ್ತದೆ. ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಗುರು ಬಸವಾರ್ಚನೆ ಪೂರೈಸಿ ಕನಿಷ್ಠಪಕ್ಷ 10 ಅಥವಾ 5 ವಚನಗಳನ್ನು, ಸಮಯಾವಕಾಶವಿದ್ದರೆ ಹೆಚ್ಚಿನ ಸಂಖ್ಯೆಯಲ್ಲಿ ಪಠಣ ಮಾಡುವ ನಿಯಮವನ್ನು ಹಾಕಿಕೊಳ್ಳಬೇಕು. ಈ ಪಠಣಕ್ಕೆ ಸದ್ಯದಲ್ಲಿ ಸೂಚಿಸಬಹುದಾದ ಶ್ರೇಷ್ಠ ಗ್ರಂಥಗಳೆಂದರೆ, ಬಸವ ದರ್ಶನ, ಬಸವ ವಚನ ದೀಪ್ತಿ, ಲಿಂ॥ ಹ. ದೇ. ಚಂದನಗೌಡರ್ ಅವರು ಸಂಪಾದಿಸಿದ ಶರಣರು ಕಂಡ ಬಸವಣ್ಣ, ಲಿಂ॥ ಭೂಸನೂರುಮಠರು ಸಂಪಾದಿಸಿದ ವಚನ ಸಾಹಿತ್ಯ ಸಂಗ್ರಹ, ಕರ್ನಾಟಕ ಸರಕಾರ ಪ್ರಕಟಿಸಿರುವ ವಚನ ಸಂಪುಟ.

2. ಲೇಖನ : ಪ್ರತಿನಿತ್ಯ ಎಷ್ಟಾದರೂ ವಚನಗಳನ್ನು ಬರೆಯುತ್ತೇನೆ ಎಂಬ ಸಂಕಲ್ಪ ತೊಟ್ಟು ವಚನ ಲೇಖನ ವ್ರತ ಕೈಗೊಳ್ಳಬೇಕು. ಶಾಲಾ ಪಠ್ಯ ಓದುವ, ಕೆಲಸದ ಒತ್ತಡ ಬಹಳ ಇರುವವರು ಐದು

ವಚನಗಳನ್ನು ಬರೆಯುವ ನೇಮ ಹಾಕಿಕೊಳ್ಳಬಹುದು. ಬಿಡುವು ಸಿಕ್ಕಾಗಲೆಲ್ಲ ಅರ್ಥ ಮಾಡಿಕೊಳ್ಳುತ್ತ ನಿಧಾನವಾಗಿ ಬರೆಯುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಹೀಗೆ ಬರೆದ ವಚನ ಲೇಖನ ಪುಸ್ತಕಗಳನ್ನು ಶರಣ ಮೇಳದಲ್ಲಿ ತಂದು ಒಪ್ಪಿಸಿ, ಶರಣ ಮೇಳ ಮುಗಿಸಿಕೊಂಡು ಹೋಗಿ ಪುನಃ ಬರೆಯಲು ಆರಂಭಿಸಬೇಕು. ಕೆಲವರು ದಿನ ನಿತ್ಯ ನೂರೆಂಟು ಮಂತ್ರ, ಸಾವಿರ ಮಂತ್ರ ಬರೆಯುವ ನೇಮ ಹಾಕಿಕೊಳ್ಳುವುದುಂಟು. ಮಂತ್ರ ಲೇಖನಕ್ಕಿಂತಲೂ ವಚನ ಲೇಖನ ಶ್ರೇಷ್ಠವಾದುದು. ಏಕೆಂದರೆ ಮಂತ್ರ ಲೇಖನದಲ್ಲಿ ಕೇವಲ ಭಕ್ತಿ-ಶ್ರದ್ಧೆಗಳಿವೆ. ವಚನ ಲೇಖನದಲ್ಲಿ ಭಕ್ತಿ-ಶ್ರದ್ಧೆಗಳ ಜೊತೆಗೆ ಜ್ಞಾನದ ಪ್ರಭೆ ಇದೆ. ವಚನ ಲೇಖನ ವ್ರತದಿಂದ ಬರಹವು ಶುದ್ಧವಾಗತೊಡಗುತ್ತದೆ.

4. ಚಿಂತನ : ನಮ್ಮ ಆದಿ ಶರಣರ ಒಂದೊಂದು ವಚನದ ಒಂದೊಂದು ವಾಕ್ಯವೂ ಅಮೂಲ್ಯವಾದ ಜ್ಞಾನನಿಧಿ, ಅವುಗಳ ಬಗ್ಗೆ ಸತತವಾಗಿ ಚಿಂತನೆ ಮಾಡಬೇಕು. ಅದರಲ್ಲಿರುವ ತತ್ತ್ವಜ್ಞಾನ, ಅರ್ಥ, ಸಂದೇಶ, ಸಂವೇದನೆಯನ್ನು ಅರಿತು ಆನಂದಿಸಲು ಪ್ರಯತ್ನಿಸಬೇಕು. ವಚನಗಳಿಗೆ ಅರ್ಥಬರೆದಿರುವ ಸಾಕಷ್ಟು ಪುಸ್ತಕಗಳು ಇವೆ. ದಿನಕ್ಕೆ ಕನಿಷ್ಠ ಒಂದು ವಚನವನ್ನಾದರೂ ಅರ್ಥಮಾಡಿಕೊಳ್ಳಲು ಯತ್ನಿಸಬೇಕು. ಅದನ್ನು ಬಾಯಿ ಪಾಠ ಮಾಡಿದರೆ ಇನ್ನೂ ಉತ್ತಮ. ಆದ್ದರಿಂದ ಚಿಂತನೆಗಾಗಿ ಆಯ್ದುಕೊಂಡ ಒಂದು ವಚನವನ್ನು ಅಂದು ಬಾಯಿಪಾಠ ಮಾಡಿಕೊಳ್ಳುವ ಪರಿಪಾಠ ಇಟ್ಟುಕೊಳ್ಳಬೇಕು.

5. ಅನುಷ್ಠಾನ :

ನುಡಿದರೆ ಮುತ್ತಿನ ಹಾರದಂತಿರೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು:
ನುಡಿಯೊಳಗಾಗಿ ನಡೆಯದಿದ್ದಡೆ,
ಲಿಂಗದೇವಯ್ಯನೆಂತೊಲಿವನಯ್ಯ ?

ವಚನ ಸಾಹಿತ್ಯ-ಕೇವಲ ಸಾಹಿತ್ಯವಲ್ಲ, ನುಡಿದು, ಬಿಟ್ಟು ಬಿಡುವಂಥಹುದಲ್ಲ ನಡೆಯಲ್ಲಿ ಅಳವಡಿಸಿಕೊಳ್ಳಬೇಕಾದುದು ; ಸೃಷ್ಟಿಕರ್ತ ಲಿಂಗದೇವನ ಒಲುಮೆ ಗಳಿಸಿಕೊಡುವಂಥದ್ದು.

ಭಕ್ತಿ ಸುಭಾಷೆಯ ನುಡಿವೆ ; ನುಡಿದಂತೆ ನಡೆವೆ
ನಡೆಯೊಳಗೆ ನುಡಿಯ ಪೂರೈಸುವೆ
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ ;
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, ಲಿಂಗದೇವಾ

ಎಂದು ಲಿಂಗದೇವನಿಗೆ ಧರ್ಮಪಿತರು ಪಂಥಾಹ್ವಾನ ನೀಡುತ್ತಾರೆ.

6. ಪ್ರಸರಣ. ಸುಮಾರು 3 ಶತಮಾನಗಳವರೆಗೆ ಅಂದರೆ 15-16ನೇ ಶತಮಾನದವರೆಗೆ ವನವಾಸವನ್ನು, ನಂತರ 20ನೆಯ ಶತಮಾನದ ಆರಂಭದ ದಶಕದವರೆಗೆ ಶೈವದ ಮುಸುಕಿನಲ್ಲಿ ಅಜ್ಞಾತವಾಸವನ್ನು ವಚನ ಧರ್ಮವು ಅನುಭವಿಸಿ ಈಗ ಹೊರಬಿದ್ದಿದೆ. ಶರಣರು ತಮ್ಮ ಜೀವದ ಹಂಗು ತೊರೆದು ಸಂರಕ್ಷಿಸಿದ ವಚನ ಸಾಹಿತ್ಯವನ್ನು ಇಂದು ನಾವು ಉಳಿಸಿ, ಬೆಳೆಸಿ, ಜನಜೀವನದಲ್ಲಿ ಬಿತ್ತಿ ಬೆಳೆಯಬೇಕಾಗಿದೆ. ಇದಕ್ಕಾಗಿ ನಾವು ಶಕ್ತಿ ಮೀರಿ ಪ್ರಯತ್ನ ಮಾಡಬೇಕಾಗಿದೆ.

1. ಜನರು ತಮ್ಮ ತಮ್ಮ ಆದಾಯದ ಒಂದು ಪಾಲನ್ನು ವಚನ ಸಾಹಿತ್ಯ ಪ್ರಚಾರಕ್ಕಾಗಿ ವಿನಿಯೋಗಿಸಬೇಕು.

2. ಬಂಗಾರ, ಬಟ್ಟೆ, ಸಿಂಗಾರ ಮುಂತಾದ ಲೌಕಿಕ ವಸ್ತುಗಳಿಗೆ ಖರ್ಚು ಮಾಡುವ ಹಣವನ್ನು ಸಾಹಿತ್ಯ ಕೊಳ್ಳುವುದರಲ್ಲಿ, ಅದನ್ನು ಪ್ರಚಾರ ಮಾಡುವುದರಲ್ಲಿ ತೊಡಗಿಸಬೇಕು.

3. ಗೃಹಿಣಿಯರು ಅಗತ್ಯವಿದ್ದಷ್ಟು ಹಣವನ್ನು ಮಾತ್ರ ಮನೆ ಬಳಕೆಗೆ ವಿನಿಯೋಗಿಸಿ, ಉಳಿತಾಯ ಮಾಡುತ್ತ ವಚನ ಸಾಹಿತ್ಯ ಪ್ರಚಾರಕ್ಕೆ ನೀಡಬೇಕು.

4. ಶಕ್ತ್ಯಾನುಸಾರ ಪುಸ್ತಕಗಳನ್ನು ಮುದ್ರಿಸಿ ಮದುವೆ , ನಾಮಕರಣ, ಗೃಹ ಪ್ರವೇಶ, ಲಿಂಗೈಕ್ಯ ಸಂಸ್ಮರಣೆ ಮುಂತಾದ ಸನ್ನಿವೇಶಗಳಲ್ಲಿ ಸಮಾವೇಶವಾದ ಜನರಿಗೆ ನೆನಪಿನ ಕಾಣಿಕೆಯಾಗಿ ಕೊಡಬೇಕು. ತಾವೇ ಮುದ್ರಿಸಲು ಆಗದೆ ಇದ್ದರೆ ಇನ್ನಿತರ ಸಂಘ-ಸಂಸ್ಥೆಗಳು ಮುದ್ರಿಸಿದ ಸಾಹಿತ್ಯ ಕೊಂಡು ಹಂಚಬೇಕು. ವಿಸಿಟಿಂಗ್ ಕಾರ್ಡ್ ಹಿಂಬದಿಯಲ್ಲಿ ಚಿಕ್ಕ ವಚನಗಳನ್ನು ಮುದ್ರಿಸಬಹುದು.

5. ತುಂಬಾ ಬಡವರಿದ್ದು ಹಣ ತೊಡಗಿಸಲು ಸಾಧ್ಯವಿಲ್ಲದವರು ಈ ಕೆಳಗೆ ಮಾದರಿಯಾಗಿ ಕೊಟ್ಟಂತೆ ಚಿಕ್ಕ ಚಿಕ್ಕ ಕಾಗದದ ತುಂಡುಗಳನ್ನು ಮಾಡಿ ಅದರಲ್ಲಿ ಸ್ವಂತ ಬರಹದಲ್ಲಿ ವಚನವನ್ನು ಬರೆದು, ಕೆಳಗೆ ವಚನಕಾರರ ಹೆಸರು ಬರೆದು, ಅದರ ಕೆಳಗೆ ನೆನಪಿನ ಕಾಣಿಕೆಯಾಗಿ ನೀಡಿದ ಅವರ ಹೆಸರು ಬರೆದು ವಿತರಿಸಬಹುದು.

ವಚನಾಮೃತ

ಗುರುವಿಂಗಾದೊಡೆಯು ಬಸವಣ್ಣನೇ ಬೇಕು
ಲಿಂಗಕ್ಕಾದೊಡೆಯು ಬಸವಣ್ಣನೇ ಬೇಕು
ಜಂಗಮಕ್ಕಾದಡೆಯೂ ಬಸವಣ್ಣನೇ ಬೇಕು
ಕಪಿಲಸಿದ್ಧಮಲ್ಲಿಕಾರ್ಜುನಯ್ಯ
ನಿಮಗೂ ಎನಗೂ ನಿಮ್ಮ ಶರಣರಿಗೂ
ಬಸವಣ್ಣನೇ ಬೇಕು.

- ಬಸವಯೋಗಿ ಸಿದ್ಧರಾಮೇಶ್ವರ

ಕೊಡುಗೆ : ಪ್ರಭುರಾಜ ಪಾಟೀಲ, ಹುಬ್ಬಳ್ಳಿ

ವಚನಾಮೃತ

ಕೋಲ ತುದಿಯ ಕೋಡಗದಂತೆ,
ನೇಣ ತುದಿಯ ಬೊಂಬೆಯಂತೆ, ಆಡಿದೆನಯ್ಯ
ನೀನಾಡಿಸಿದಂತೆ, ಆನು ನುಡಿದೆನಯ್ಯ ನೀ
ನುಡಿಸಿದಂತೆ, ಆನು ಇದ್ದೆನಯ್ಯ
ನೀನು ಇರಿಸಿದಂತೆ, ಜಗದಯಂತ್ರ ವಾಹಕ
ಚೆನ್ನಮಲ್ಲಿಕಾರ್ಜುನ ನೀ ಸಾಕೆಂಬನ್ನಕ್ಕ

- ಜಗನ್ಮಾತಾ ಅಕ್ಕಮಹಾದೇವಿ

ಕೊಡುಗೆ :ಬಸವ ಚಂದ್ರಿಕೆ, ಧಾರವಾಡ

ಸದಾ ಜೇಬಿನಲ್ಲಿ ಅಥವಾ ಪರ್ಸಿನಲ್ಲಿ ಇಂಥ ವಚನಗಳ ತುಣುಕುಗಳನ್ನು ಇಟ್ಟುಕೊಂಡು ಆತ್ಮೀಯರು, ಪರಿಚಿತರು ಸಿಕ್ಕಾಗ ಒಂದು ವಚನದ ಚೀಟಿ ಕೊಟ್ಟರೆ ಅವರು ಚಿಂತನೆ ಮಾಡಲು ಅನುಕೂಲವಾಗುವುದು. ಹೀಗೆ ಪರಸ್ಪರ ವಚನಗಳನ್ನು ವಿನಿಮಯ ಮಾಡಿಕೊಳ್ಳುವುದು ಒಂದು ಆನಂದಕರ ಆಚರಣೆಯಾಗುವುದು.

ಆದ್ದರಿಂದ ವಚನ ವಾಙ್ಮಯದ ಷಟ್‌ಕ್ರಿಯೆಗಳಿಂದ ವ್ಯಕ್ತಿಯ ವೈಯಕ್ತಿಕ ಜೀವನ ಶುದ್ಧವೂ, ಆನಂದಮಯವೂ ಆಗುವುದರೊಡನೆ ಧಾರ್ಮಿಕತೆ, ದೇವಶ್ರದ್ಧೆ, ಜಾತ್ಯತೀತತೆ, ವೈಚಾರಿಕತೆ, ಸಮಾನತೆ, ಸಾಮರಸ್ಯಗಳು ಸಾಮಾಜಿಕವಾಗಿ ನೆಲೆಗೊಳ್ಳುವುದರೊಡನೆ ಒಂದು ಜೀವಂತ ಸಮಾಜವು ನಿರ್ಮಾಣವಾಗುತ್ತದೆ. ಈ ದಿಶೆಯಲ್ಲಿ ಎಲ್ಲ ಶರಣ ಬಂಧುಗಳು ಚಿಂತಿಸಿ ಷಟ್‌ಕ್ರಿಯೆಗಳನ್ನು ಅಳವಡಿಸಿಕೊಳ್ಳಬೇಕೆಂದು ಆಶಿಸುತ್ತೇನೆ.

-ಮಾತಾಜಿ

ಬರಡಾದ ಬಾಳಿಗೆ ಜೀವ ಜಲವಾಗಿ
ಸಮತೆ ಸಹೋದರತ್ವಗಳ ದಿವ್ಯ ಮಂತ್ರವ ಸಾರಿ
ವಚನ ಜ್ಯೋತಿಯ ಬೆಳಗಿನಿಂದ ಜಗದ ಕ
ಣ್ಣ ತೆರೆಸಿದ ಅಪ್ಪ ಬಸವಣ್ಣನಿಗಿದೋ ಭಕ್ತಿಪೂರ್ವಕ ನಮನ. -ಸುಜ್ಞಾನಪ್ರಭು. ತುಮಕೂರು.

ಲಿಂಗದೇವನ 108 ಸ್ತುತಿ

ಪ್ರೇರಣೆ : ಮಾತಾಜಿಯವರಿಂದ ರಚನೆಯಾದ 'ಬಸವ-ಲಿಂಗ ಸ್ತವನ' ಧ್ವನಿಸುರುಳಿ

ವಿ. ಸೂ :- ಪ್ರತಿ ಸಾಲಿನ ನಂತರ 'ಓಂ ಲಿಂಗಾಯ ನಮಃ' ಎಂದು ಹೇಳಬೇಕು.

ಲಿಂಗದೇವಾ ನೀನು ಸರ್ವವ್ಯಾಪಿಯಾಗಿರುವೆ.
ಲಿಂಗದೇವಾ ನೀನು ಸರ್ವಶಕ್ತನಾಗಿರುವೆ.
ಲಿಂಗದೇವಾ ನೀನು ಸರ್ವಕಾರಣ ಕರ್ತನಾಗಿರುವೆ.
ಲಿಂಗದೇವಾ ನೀನು ಸರ್ವಜ್ಞನಾಗಿರುವೆ.
ಲಿಂಗದೇವಾ ನೀನು ಸರ್ವತೋಮುಖನಾಗಿರುವೆ.
ಲಿಂಗದೇವಾ ನೀನು ಮಂಗಲಮಯನಾಗಿರುವೆ.
ಲಿಂಗದೇವಾ ನೀನು ಮಹಾದಾನಿಯಾಗಿರುವೆ.
ಲಿಂಗದೇವಾ ನೀನು ಕಾರುಣ್ಯನಿಧಿಯಾಗಿರುವೆ.
ಲಿಂಗದೇವಾ ನೀನು ಪ್ರೇಮಮಯಿಯಾಗಿರುವೆ
ಲಿಂಗದೇವಾ ನೀನು ಪ್ರಕಾಶಮಯನಾಗಿರುವೆ.
ಲಿಂಗದೇವಾ ನೀನು ಚೈತನ್ಯಾತ್ಮಕನಾಗಿರುವೆ
ಲಿಂಗದೇವಾ ನೀನು ನಿತ್ಯ ನಿರಂಜನನಾಗಿರುವೆ
ಲಿಂಗದೇವಾ ನೀನು ಜಗದಗಲನಾಗಿರುವೆ
ಲಿಂಗದೇವಾ ನೀನು ಮುಗಿಲಗಲನಾಗಿರುವೆ
ಲಿಂಗದೇವಾ ನೀನು ಪರಮ ಪವಿತ್ರನಾಗಿರುವೆ
ಲಿಂಗದೇವಾ ನೀನು ಭಕ್ತ ಬಂಧುವಾಗಿರುವೆ
ಲಿಂಗದೇವಾ ನೀನು ಅಮೂಲ್ಯನಾಗಿರುವೆ
ಲಿಂಗದೇವಾ ನೀನು ಅಪ್ರಮಾಣನಾಗಿರುವೆ
ಲಿಂಗದೇವಾ ನೀನು ಅಗೋಚರನಾಗಿರುವೆ
ಲಿಂಗದೇವಾ ನೀನು ಸ್ವತಂತ್ರನಾಗಿರುವೆ
ಲಿಂಗದೇವಾ ನೀನು ನಿತ್ಯ ನಿರ್ಮಲನಾಗಿರುವೆ
ಲಿಂಗದೇವಾ ನೀನು ಅಯೋನಿ ಸಂಭವನಾಗಿರುವೆ
ಲಿಂಗದೇವಾ ನೀನು ಪ್ರಣವಾರೂಢನಾಗಿರುವೆ
ಲಿಂಗದೇವಾ ನೀನು ಪ್ರಣವ ಸ್ವರೂಪನಾಗಿರುವೆ
ಲಿಂಗದೇವಾ ನೀನು ಪ್ರಣವ ಪ್ರಕೃತಿ ಸೌಂಜ್ಞನಾಗಿರುವೆ
ಲಿಂಗದೇವಾ ನೀನು ಪ್ರಣವ ಷಡಂಗ ಸಮರಸನಾಗಿರುವೆ
ಲಿಂಗದೇವಾ ನೀನು ಸ್ವಾಮಿಯಾಗಿರುವೆ
ಲಿಂಗದೇವಾ ನೀನು ಶಾಶ್ವತನಾಗಿರುವೆ
ಲಿಂಗದೇವಾ ನೀನು ಸ್ವರ್ಗ ಮರ್ತ್ಯಪಾತಾಳಕ್ಕಧಿಪತಿಯಾಗಿರುವೆ
ಲಿಂಗದೇವಾ ನೀನು ವಿಶ್ವತೋಮುಖನಾಗಿರುವೆ
ಲಿಂಗದೇವಾ ನೀನು ವಿಶ್ವತೋಬಾಹುವಾಗಿರುವೆ
ಲಿಂಗದೇವಾ ನೀನು ವಿಶ್ವತಸ್ ಚಕ್ಷುವಾಗಿರುವೆ
ಲಿಂಗದೇವಾ ನೀನು ವಿಶ್ವತಃಪಾದವಾಗಿರುವೆ

ಲಿಂಗದೇವಾ ನೀನು ಮುಕ್ತಿದಾತನಾಗಿರುವೆ
ಲಿಂಗದೇವಾ ನೀನು ನಿತ್ಯಮುಕ್ತನಾಗಿರುವೆ
ಲಿಂಗದೇವಾ ನೀನು ಕರ್ಮಾಧ್ಯಕ್ಷನಾಗಿರುವೆ
ಲಿಂಗದೇವಾ ನೀನು ಕರ್ಮಾತೀತನಾಗಿರುವೆ
ಲಿಂಗದೇವಾ ನೀನು ಮಾತೃಸ್ವರೂಪನಾಗಿರುವೆ
ಲಿಂಗದೇವಾ ನೀನು ಪಿತೃಸ್ವರೂಪನಾಗಿರುವೆ
ಲಿಂಗದೇವಾ ನೀನು ಬಂಧುಸ್ವರೂಪನಾಗಿರುವೆ 40
ಲಿಂಗದೇವಾ ನೀನು ಅಗಮ್ಯ ಅಗೋಚರನಾಗಿರುವೆ
ಲಿಂಗದೇವಾ ನೀನು ಉಪಮಾತೀತನಾಗಿರುವೆ
ಲಿಂಗದೇವಾ ನೀನು ಉನ್ನತ ಮಹಿಮನಾಗಿರುವೆ
ಲಿಂಗದೇವಾ ನೀನು ಜಗದಾದಿ ಮೂಲನಾಗಿರುವೆ
ಲಿಂಗದೇವಾ ನೀನು ಸೃಷ್ಟಿ ಪಾಲಕನಾಗಿರುವೆ
ಲಿಂಗದೇವಾ ನೀನು ಮಹಾದಾತನಾಗಿರುವೆ
ಲಿಂಗದೇವಾ ನೀನು ಸರ್ವಾಂತರ್ಯಾಮಿಯಾಗಿರುವೆ
ಲಿಂಗದೇವಾ ನೀನು ಸರ್ವಾತೀತನಾಗಿರುವೆ
ಲಿಂಗದೇವಾ ನೀನು ಸಕಲಾಧಾರನಾಗಿರುವೆ
ಲಿಂಗದೇವಾ ನೀನು ಪರಿಪೂರ್ಣನಾಗಿರುವೆ 50
ಲಿಂಗದೇವಾ ನೀನು ವಿಶ್ವ ಚೇತನನಾಗಿರುವೆ
ಲಿಂಗದೇವಾ ನೀನು ವಿಶ್ವೋತ್ತೀರ್ಣನಾಗಿರುವೆ
ಲಿಂಗದೇವಾ ನೀನು ನಿತ್ಯಸ್ವರೂಪನಾಗಿರುವೆ
ಲಿಂಗದೇವಾ ನೀನು ಶಾಂತಿ ಸ್ವರೂಪನಾಗಿರುವೆ
ಲಿಂಗದೇವಾ ನೀನು ಕಾಂತಿ ಸ್ವರೂಪನಾಗಿರುವೆ
ಲಿಂಗದೇವಾ ನೀನು ಪ್ರೇಮ ಸ್ವರೂಪನಾಗಿರುವೆ
ಲಿಂಗದೇವಾ ನೀನು ಮಂಗಲ ಮೂರ್ತಿಯಾಗಿರುವೆ
ಲಿಂಗದೇವಾ ನೀನು ಆಕಾರ ರಹಿತನಾಗಿರುವೆ
ಲಿಂಗದೇವಾ ನೀನು ನಿರ್ಮಲ ಆತ್ಮನಾಗಿರುವೆ
ಲಿಂಗದೇವಾ ನೀನು ಸಗುಣ ಸ್ವರೂಪನಾಗಿರುವೆ 60
ಲಿಂಗದೇವಾ ನೀನು ನಿರ್ಗುಣ ಚೇತನನಾಗಿರುವೆ
ಲಿಂಗದೇವಾ ನೀನು ವ್ಯಕ್ತ ಸ್ವರೂಪನಾಗಿರುವೆ
ಲಿಂಗದೇವಾ ನೀನು ಅವ್ಯಕ್ತ ರೂಪನಾಗಿರುವೆ
ಲಿಂಗದೇವಾ ನೀನು ಇಷ್ಟ ಪ್ರದಾಯಕನಾಗಿರುವೆ
ಲಿಂಗದೇವಾ ನೀನು ಪರಮ ಪ್ರಭುವಾಗಿರುವೆ
ಲಿಂಗದೇವಾ ನೀನು ನಾಮರಹಿತ ನಾಗಿರುವೆ
ಲಿಂಗದೇವಾ ನೀನು ಅನಂತನಾಮನಾಗಿರುವೆ
ಲಿಂಶದೇವಾ ನೀನು ಪರಂಜ್ಯೋತಿಯಾಗಿರುವೆ
ಲಿಂಗದೇವಾ ನೀನು ಪರಮೋನ್ನತನಾಗಿರುವೆ

ಲಿಂಗದೇವಾ ನೀನು ಶೂನ್ಯ ಸ್ವರೂಪನಾಗಿರುವೆ 70
ಲಿಂಗದೇವಾ ನೀನು ನಿಮಿತ್ತ ಕಾರಣನಾಗಿರುವೆ
ಲಿಂಗದೇವಾ ನೀನು ಉಪಾದಾನ ಕಾರಣನಾಗಿರುವೆ
ಲಿಂಗದೇವಾ ನೀನು ಶಕ್ತಿ ವಿಶಿಷ್ಟನಾಗಿರುವೆ
ಲಿಂಗದೇವಾ ನೀನು ನಿಷ್ಕಲ ಲಿಂಗನಾಗಿರುವೆ
ಲಿಂಗದೇವಾ ನೀನು ಮಹಾಲಿಂಗ ರೂಪನಾಗಿರುವೆ
ಲಿಂಗದೇವಾ ನೀನು ಚಿಲ್ಲಿಂಗ ರೂಪನಾಗಿರುವೆ
ಲಿಂಗದೇವಾ ನೀನು ಇಷ್ಟಲಿಂಗ ರೂಪನಾಗಿರುವೆ
ಲಿಂಗದೇವಾ ನೀನು ಪ್ರಾಣಲಿಂಗ ರೂಪನಾಗಿರುವೆ
ಲಿಂಗದೇವಾ ನೀನು ಭಾವಲಿಂಗ ರೂಪನಾಗಿರುವೆ
ಲಿಂಗದೇವಾ ನೀನು ಸ್ವಯಂಭು ಸ್ವರೂಪನಾಗಿರುವೆ 80
ಲಿಂಗದೇವಾ ನೀನು ಜನನ ವಿರಹಿತನಾಗಿರುವೆ
ಲಿಂಗದೇವಾ ನೀನು ಮರಣವಿರಹಿತನಾಗಿರುವೆ
ಲಿಂಗದೇವಾ ನೀನು ಮನಃ ಪ್ರೇರಕನಾಗಿರುವೆ
ಲಿಂಗದೇವಾ ನೀನು ಗುರುಬಸವಪ್ರಿಯನಾಗಿರುವೆ
ಲಿಂಗದೇವಾ ನೀನು ಸೂತ್ರಧಾರನಾಗಿರುವೆ
ಲಿಂಗದೇವಾ ನೀನು ಲೋಕನಿರ್ವಾಹಕನಾಗಿರುವೆ
ಲಿಂಗದೇವಾ ನೀನು ಲೋಕನಿಯಂತ್ರಕನಾಗಿರುವೆ
ಲಿಂಗದೇವಾ ನೀನು ಶರಣ ಜನ ಪ್ರಿಯನಾಗಿರುವೆ
ಲಿಂಗದೇವಾ ನೀನು ವಿದ್ಯಾದಾತನಾಗಿರುವೆ
ಲಿಂಗದೇವಾ ನೀನು ಸಂಪತ್ ದಾತನಾಗಿರುವೆ 90
ಲಿಂಗದೇವಾ ನೀನು ಶಕ್ತಿದಾತನಾಗಿರುವೆ
ಲಿಂಗದೇವಾ ನೀನು ಜ್ಞಾನದಾತನಾಗಿರುವೆ
ಲಿಂಗದೇವಾ ನೀನು ಭಕ್ತಿದಾತನಾಗಿರುವೆ
ಲಿಂಗದೇವಾ ನೀನು ಯುಕ್ತಿದಾತನಾಗಿರುವೆ
ಲಿಂಗದೇವಾ ನೀನು ನ್ಯಾಯದಾತನಾಗಿರುವೆ
ಲಿಂಗದೇವಾ ನೀನು ಬ್ರಹ್ಮಾಂಡ ವಿಭುವಾಗಿರುವೆ
ಲಿಂಗದೇವಾ ನೀನು ಸೃಷ್ಟಿಕರ್ತನಾಗಿರುವೆ
ಲಿಂಗದೇವಾ ನೀನು ಘನಲಿಂಗ ರೂಪನಾಗಿರುವೆ
ಲಿಂಗದೇವಾ ನೀನು ಗಣಲಿಂಗ ರೂಪನಾಗಿರುವೆ
ಲಿಂಗದೇವಾ ನೀನು ನಾದ ಸ್ವರೂಪನಾಗಿರುವೆ 100
ಲಿಂಗದೇವಾ ನೀನು ಬಿಂದು ಸ್ವರೂಪನಾಗಿರುವೆ
ಲಿಂಗದೇವಾ ನೀನು ಕಳಾಸ್ವರೂಪನಾಗಿರುವೆ
ಲಿಂಗದೇವಾ ನೀನು ಜ್ಯೋತಿ ಸ್ವರೂಪನಾಗಿರುವೆ
ಲಿಂಗದೇವಾ ನೀನು ಸತ್ಯ ಸ್ವರೂಪನಾಗಿರುವೆ
ಲಿಂಗದೇವಾ ನೀನು ಲಯಕರ್ತನಾಗಿರುವೆ

ಲಿಂಗದೇವಾ ನೀನು ಭವ ಭಯ ಹಾರಕನಾಗಿರುವೆ
ಲಿಂಗದೇವಾ ನೀನು ಹೃದಯಕಮಲದಲ್ಲಿ ವಾಸವಾಗಿರುವೆ
ಲಿಂಗದೇವಾ ನೀನು ಸಚ್ಚಿದಾನಂದನಾಗಿರುವೆ. 108

ಲಿಂಗದೇವನ ನಾಮಾಮೃತವು ನಿತ್ಯದಿ
ಒಸೆದು ನಾಲಿಗೆಯ ಮೇಲೆ ನೆಲೆಸಿರೆ
ಯಶದಿ ಹರಿವವು ಕರ್ಮ ಬಂಧನ ಭೀತಿ ಮೃತ್ಯುಗಳು
ನಾಶವಪ್ಪನು ಭವದ ಶತ್ರುವು
ದೇವನೊಲಿಮೆಯು ಹರಿದು ಬಪ್ಪುದು
ಶಾಶ್ವತದ ಸುಖ ಸಿದ್ಧಿಯಹುದ್ಯೆ ಲಿಂಗದೇವನೆನಲು.

ಸಂಗ್ರಹ : ಮಲ್ಲಿಕಾರ್ಜುನ .ಎಸ್. ಡೊಣಗಾಪುರೆ. ರಾ. ಬ. ದಳ, ಬೀದರ

ತ್ರಿ ತತ್ತ್ವಕ್ಕೆ ನಮಸ್ಕಾರ

ಗುರುವಿಗೆ ನಮಸ್ಕಾರ, ಲಿಂಗಕ್ಕೆ(ದೇವರಿಗೆ) ಪೂಜೆ, ಜಂಗಮಕ್ಕೆ(ಸಮಾಜಕ್ಕೆ) ಸೇವೆ

ಹಿಂದುಗಳಿಗೆ ತಟ್ಟಿದೆ ದೇವ ಶಾಪ

ಹಿಂದುಗಳಿಗೆ (ವೀರಶೈವರೂ ಸೇರಿ) ತಟ್ಟಿದೆ ದೇವಶಾಪ
ಜಾತಿ, ಮತ, ಪಂಥ, ಪಂಗಡಗಳ ಸೃಷ್ಟಿಸಿದ ಶಾಪ
ಒಬ್ಬ ದೇವರನ್ನು ನಂಬದೆ ಹಲವು ದೈವಂಗಳ ಸೃಷ್ಟಿಸಿದ ಪಾಪ
ದೇವರೆಂದರೆ ಯಾರು ಅವನ ಸ್ವರೂಪವ ತಿಳಿಯದ ಪಾಪ
ದೇವರು ನಿರಾಕಾರ, ನಿರ್ಗುಣ, ನಿರಂಜನನೆಂದು
ತತ್ತ್ವಗಳು ಘೋಷಿಸುತ್ತವೆ ದೇವನೊಬ್ಬನೆಂದು
ತತ್ತ್ವಗಳ ದೇವನಿಗೆ ಹುಟ್ಟು-ಸಾವುಗಳಿಲ್ಲವೆಂದು
ಹುಟ್ಟುಸಾವುಗಳ ಹೊಂದಿದವರು ದೇವರಲ್ಲವೆಂದು
ಹುಟ್ಟು ಸಾವುಗಳಿಗತೀತನಾದ ಎಲ್ಲಕ್ಕೂ ಕಾರಣ ಕರ್ತನೆ ದೇವರೆಂದು
ಬಸವಣ್ಣ ರೂಪಿಸಿದರು ನಿರಾಕಾರ ನಿರಂಜನ
ನಿರ್ಗುಣನಾದ ಸೃಷ್ಟಿಯ ಹೋಲಿಕೆಯಲ್ಲಿರುವ
ದೇವನನ್ನು ಲಿಂಗವೆಂಬಭಿಧಾನದಿಂದಿರುವ ದೇವರನ್ನು ;
ಲಿಂಗದೇವರನ್ನು ಮುಂದಿಟ್ಟು ಲಿಂಗಾಯತ ಧರ್ಮವನ್ನು ಕೊಟ್ಟರು
ಬೌದ್ಧ ಧರ್ಮವ ಬೋಧಿಸಿದ ಬುದ್ಧನು ಬೌದ್ಧರಿಗೆ ಗುರುವಾದ
ಕ್ರೈಸ್ತ ಧರ್ಮವ ಬೋಧಿಸಿದ ಏಸುವು ಕ್ರೈಸ್ತರಿಗೆ ಗುರುವಾದ
ಜಿನ ಧರ್ಮವ (ಅಹಿಂಸಾಧರ್ಮವ)ಬೋಧಿಸಿದ ಮಹಾವೀರನು ಜೈನರಿಗೆ ಗುರುವಾದ
ಸಿಖ್ ಧರ್ಮವ ಬೋಧಿಸಿದ ಗುರುನಾನಕ ಸಿಖ್ಖರಿಗೆ ಗುರುವಾದ
ಲಿಂಗಾಯತ ಧರ್ಮವ (ವಚನಗಳ ಮೂಲಕ) ಬೋಧಿಸಿದ
ಬಸವಣ್ಣನು ಲಿಂಗವಂತರಿಗೆ ಗುರುವಾಗಿ, ಜಗದ್ಗುರುವೆನಿಸಿಕೊಂಡ
ಇಂತಪ್ಪ ಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆ

-ಹಿಂಡಿಸಗೆರಿ, ವೀರಭದ್ರಪ್ಪ ಶಿವಣ್ಣ. ಬೆಂಗಳೂರು

★ ಸಮಸ್ಯೆ ? - ಸಮಾಧಾನ ! ★

ಜಗದೀಶ ಕೋಳಾರು, ಹುಬ್ಬಳ್ಳಿ.- ಬಸವ ಕಲ್ಯಾಣದಲ್ಲಿ ಅಷ್ಟಶತಮಾನೋತ್ಸವ ನಡೆದಾಗ ಅದೇ ವೇದಿಕೆಯಿಂದ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸುವ ಘೋಷಣೆ ಮಾಡಿದಿರಿ. 1970ರಲ್ಲಿ ಸ್ಥಾಪಿಸಿದಿರಿ ; ತಾವೇ ಪ್ರಥಮ ಮಹಿಳಾ ಜಗದ್ಗುರುವಾದಿರಿ. ಇದರಲ್ಲಿ ಲಿಂಗೈಕ್ಯ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳ ಪಾತ್ರವೇನಿದೆ ? ಅಂದಾಗ ಅವರನ್ನು ಹೇಗೆ ಮಹಿಳಾಗುರು ಪೀಠ ಸ್ಥಾಪಕರು ಎನ್ನಲು ಬರುತ್ತದೆ ? ಎಲ್ಲ ಕೀರ್ತಿಯೂ ನಿಮಗೇ ಸೇರಬೇಕಲ್ಲವೆ ?

★ಬಸವ ಪ್ರೇರಣೆಯಿಂದ ನಾನು ಘೋಷಿಸಿದ್ದು ನಿಜ. ಆದರೆ ಪೂಜ್ಯ ಗುರುಗಳ ಸಹಕಾರ-ಬೆಂಬಲ ಇಲ್ಲದಿದ್ದರೆ ಆ ಘೋಷಣೆಯನ್ನು ಕಾರ್ಯರೂಪಕ್ಕೆ ತರಬಹುದಿತ್ತೆ ? ಬೇರೆ ಯಾರಾದರೂ ಪುಕ್ಕಲು ಗುರುಗಳಾಗಿದ್ದರೆ ಎಂಥಾ ಧಾರ್ಷ್ಟ್ಯದ ಘೋಷಣೆ ಮಾಡಿ ಬಿಟ್ಟು ಮಠಾಧೀಶರ ವೃಂದವನ್ನೇ ಎದುರು ಹಾಕಿಕೊಳ್ಳುವಂತಾಯಿತು ಎಂದು ನನ್ನನ್ನು ಮಠದಿಂದ ಹೊರಹಾಕಬಹುದಿತ್ತು. ಆಗ ನಾನು ಏನು ತಾನೆ ಮಾಡಲು ಸಾಧ್ಯವಿತ್ತು ? ಪೂರ್ವ ನಿರ್ಧಾರಿತವಲ್ಲದ ಘೋಷಣೆಯನ್ನು ನಾನು ಮಾಡಿದಾಗ ಪೂಜ್ಯರು ಅಚ್ಚರಿಗೊಂಡರಾದರೂ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಹೊರಹೊಮ್ಮಿದ ಮಾತುಗಳು ಬಸವ ಸಂಕಲ್ಪಿತವೇ ಇರಬಹುದು. ಅದನ್ನು ಆಚರಣೆಗೆ ತರೋಣ ಎಂದು ಧೈರ್ಯದಿಂದ ಮುಂದಡಿ ಇಟ್ಟರು. ಹಕ್ಕಬುಕ್ಕರು ರಾಜ್ಯ ಕಟ್ಟಿದರೂ ಸಹ ಅವರ ಹಿಂದಿನ ಶಕ್ತಿಯಾಗಿ ವಿದ್ಯಾರಣ್ಯರು (ಕ್ರಿಯಾ ಶಕ್ತಿ ಮುನಿ ಎಂದು ಕೆಲವರು ಹೇಳುತ್ತಾರೆ.) ನಿಲ್ಲಲಿಲ್ಲವೆ ಹಾಗೆ. ಅದಕ್ಕೆಂದೇ ಪೂಜ್ಯ ಗುರುಗಳನ್ನೇ ಮಹಿಳಾಗುರು ಪೀಠದ ಸ್ಥಾಪಕರೆಂದು ಬಸವ ಭಕ್ತರು ಗೌರವಿಸುವುದು.

ಮೃತ್ಯುಂಜಯ ಹಳ್ಳಳ್ಳಿ, ದಾವಣಗೆರೆ.- ದಾವಣಗೆರೆಯಲ್ಲಿ ಒಂದು ಜಂಗಮ ಸಮಾವೇಶ ನಡೆಯಿತು. ಜಂಗಮ (ಮಾಹೇಶ್ವರ) ಸಂಘದವರು ಸಂಯೋಜಿಸಿದ್ದರು. ಲೀಲಾದೇವಿ ಪ್ರಸಾದ, ಮಳೀಮಠ ಮುಂತಾದ ಜಂಗಮರು (?) ಸಮಾವೇಶವಾಗಿದ್ದರು. ಆದರೆ ಲೋಕಸಭಾ ಸದಸ್ಯರಾದ ಶ್ಯಾಮನೂರು ಶಿವಶಂಕರಪ್ಪನವರು ಅಲ್ಲಿಗೆ ಹೋಗಿ ಜಾತಿ ಸಂಘಟನೆ ಮಾಡಿಕೊಳ್ಳುವುದನ್ನು ಪ್ರೋತ್ಸಾಹಿಸಿ ಮಾತನಾಡಿದರು. ಈ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು ?

★ ಶ್ರೀ ಶ್ಯಾಮನೂರು ಶಿವಶಂಕರಪ್ಪನವರ ಪ್ರಾಮಾಣಿಕತೆ ಮೆಚ್ಚಿಕೊಳ್ಳಬೇಕು. ಅವರು ನಡೆಯುವಂತೆ ನುಡಿದಿದ್ದಾರೆ. ಏಕೆಂದರೆ ಅವರು ಸಹ ತಮ್ಮ ಉಪಜಾತಿಯ ಸಂಘಟನೆಯಲ್ಲೇ ನಿರತರಾಗಿರುವುದರಿಂದ ಅದೇ ಬಗೆಯ ನೀತಿ ಬೋಧೆ ಮಾಡಿರುವುದರಲ್ಲಿ ತಪ್ಪೇನಿದೆ ? ಆದರೆ ಈಗ ಜಂಗಮೇತರರು ಜಾಗೃತರಾಗುವ ಕಾಲ ಬಂದಿದೆ. ಜಂಗಮನು ಜಾತಿ ವಿರಹಿತನಾಗಿ, ತಾನು ತನ್ನದು ಎಂಬ ಕೌಟುಂಬಿಕ, ಜಾತಿಯ ಮಮಕಾರ ಹರಿದು ಇಡೀ ಸಮಾಜದ ಒಡೆಯನಾಗಿ ಎಲ್ಲರ ತಲೆಯ ಮೇಲೆ ಕೈ ಇಡುವ 'ಶಿವ 'ನಾಗಿದ್ದ. ಇದೀಗ ತಮ್ಮನ್ನು ಒಂದು ಜಾತಿಯನ್ನಾಗಿ ಗುರುತಿಸಿಕೊಂಡು, ಲಿಂಗಾಯತ ಸಮಾಜದಿಂದ ಪಡೆದಿದ್ದ ಒಡೆತನದ ವರವನ್ನು ಮರೆತು, ಸವಲತ್ತುಗಳ ಆಸೆ ಎಂಬ ಮೋಹಿನಿ ತಂತ್ರದಿಂದ ಜಂಗಮರು ತಮ್ಮ ತಲೆ ಮೇಲೆ ತಾವೇ ಕೈಯಿಟ್ಟು ಸುಟ್ಟುಕೊಳ್ಳುವ ಭಸ್ಮಾಸುರ ತಂತ್ರವನ್ನು ಆಶ್ರಯಿಸಿದ್ದಾರೆ. ಇದರಿಂದ ಅವರಿಗೆ ಲಾಭಕ್ಕಿಂತ ಹಾನಿಯೇ ಜಾಸ್ತಿ ಎಂದರಿತು ಬೇಗನೆ ತಪ್ಪು ತಿದ್ದಿಕೊಳ್ಳುವುದು ಒಳ್ಳೆಯದು. ಉಪಜಾತಿ ಸಂಘಟನೆಗಳಿಂದ ಏನೇನೂ ಪ್ರಯೋಜನವಾಗುವುದಿಲ್ಲ.

ಹೊಸ ನೋಟು, ಬೆಂಗಳೂರು.- ಓರ್ವರು ಹಳೇ ನೋಟು ಅಂದರೆ ಹುಟ್ಟು ಲಿಂಗಾಯತರು. ತಾವೇ ಶ್ರೇಷ್ಠರೆಂದು, ಹೊಸ ನೋಟುಗಳಾದ ನಾವು ಅಂದರೆ ಇತ್ತೀಚೆಗೆ ದೀಕ್ಷೆ ಪಡೆದವರು ಅವರಷ್ಟು ಶ್ರೇಷ್ಠರಲ್ಲವೆಂದು ಹೇಳುತ್ತ 24 ಗಂಟೆಯೂ ತಾವು ವಚನ ಸಾಹಿತ್ಯ ಅಭ್ಯಾಸ ಮಾಡುವುದಾಗಿಯೂ, ಏನೇನೋ ಅನುಭವ ಪಡೆಯುವುದಾಗಿಯೂ ಹೇಳುತ್ತಿದ್ದವರು ; ತಮ್ಮ ಮಗನ ಮದುವೆ ಮಾಡಿದಾಗ

ಆಹ್ವಾನ ಪತ್ರದಲ್ಲಿ ಮೇಲೆ ಲಿಂಗಭಕ್ತನ ವಿವಾಹದಲ್ಲಿ ಪ್ರಸಾದವನ್ನು ಮಾಡಿಸುವುದು ಸದಾಚಾರ, ವಾರ ತಿಥಿ ಮೂಹೂರ್ತವೆಂಬ ಲೌಕಿಕ ಕರ್ಮ ಮಾಡಬಾರದು. ಎಂಬ ಚನ್ನ ಬಸವಣ್ಣನವರ ವಚನ ಮುದ್ರಿಸಿ ಅದರ ಕೆಳಗೆ ವರಪೂಜೆ ಎಂದು ಹಾಕಿದ್ದಲ್ಲದೆ ಮುಹೂರ್ತವನ್ನು ಹಾಕಿದ್ದರು. ಇದು ಬಸವ ತತ್ವಾನುಯಾಯಿಗಳಿಗೆ ಹಾಸ್ಯಾಸ್ಪದ ಎನ್ನಿಸಿತು. ಇದಕ್ಕೆ ನೀವೇನಂತೀರಿ ?

★ ಸೈನ್ಯವನ್ನು ಸೇರುತ್ತಾರೆ ನೋಡಿ, ಅವರಿಗೆ ಸೈನಿಕ ಹೋರಾಟದ ತರಬೇತಿ ನೀಡಲಾಗುತ್ತದೆ. ತರಬೇತಿಯ ನಂತರ ಶರೀರವು ಜಡ್ಡುಗಟ್ಟಬಾರದೆಂದು ದಿನಾಲು ಕವಾಯತು ಮಾಡಿಸಲಾಗುತ್ತದೆ. ಎಂದೋ ಒಮ್ಮೆ ಯುದ್ಧವನ್ನೆದುರಿಸುವ ಸನ್ನಿವೇಶ ಬರಬಹುದು, ಯುದ್ಧವು ನಡೆಯದೆ ಇದ್ದರೆ ಸೈನ್ಯಾಧಿಕಾರಿಯ ಜೀವನದಲ್ಲಿ ಯುದ್ಧ ಭೂಮಿಗೆ ಹೋಗುವ ಪ್ರಸಂಗವೇ ಬರಲಿಕ್ಕಿಲ್ಲ. ಯುದ್ಧ ಮಾಡುವ ಸನ್ನಿವೇಶ ಬಂದಾಗ ಹಾಗೆ ತರಬೇತಿ ಪಡೆದವರು ರಣರಂಗದಲ್ಲಿ ಹೇಡಿಯಂತೆ ವರ್ತಿಸಿ, ಯುದ್ಧ ವಿಮುಖರಾಗಲೂಬಹುದು. ಹಾಗೆಯೇ ತಾನು ಓದಿದ, ತಿಳಿದ ತತ್ತ್ವವನ್ನು ಅನುಷ್ಠಾನ ಮಾಡುವ ಒಂದು ಸುವರ್ಣ ಅವಕಾಶ ಬಂದಾಗ ಅನುಷ್ಠಾನ ಮಾಡುವ ಧೈರ್ಯವಿಲ್ಲದೆ ಹೇಡಿಗಳಂತೆ ವರ್ತಿಸಿದರೆ ಅಂಥವರ ಮನೋದೌರ್ಬಲ್ಯದ ಬಗ್ಗೆ ಮರುಕ ತಾಳಿ, ಕ್ಷಮಿಸಬೇಕು ಅಷ್ಟೆ, ಕೋಪಗೊಳ್ಳಬಾರದು.

ರಾಮಲಿಂಗಪ್ಪ ದೇವಣಿ, ಬೀದರ್.- ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ಪ್ರವಚನದ ಮೂಲಕ ಒಂದು ಬಸವ ಸಾಮ್ರಾಜ್ಯವನ್ನೇ ಕಟ್ಟಿದರು. ಇಲ್ಲದಿದ್ದರೆ ಎಲ್ಲಿಯ ಬೀದರ್, ಎಲ್ಲಿಯ ಊಟಿ, ಎಲ್ಲಿಯ ಈಚಲಕರಂಜಿ ಎಲ್ಲರೂ ಎಲ್ಲಿ ಸೇರುತ್ತಿದ್ದೆವು ?. ಅವರ ಕಾರ್ಯಕ್ಕಾಗಿ ಲಿಂಗಾಯತ ಸಮಾಜದ ಸ್ವಾಮಿಗಳು, ರಾಜಕಾರಣಿಗಳು, ಗಣ್ಯರು ಎಷ್ಟು ಗೌರವಿಸಬೇಕಿತ್ತೋ ಅಷ್ಟು ಗೌರವಿಸಲಿಲ್ಲ. ನನಗೆ ತುಂಬಾ ವ್ಯಥೆ ಎನಿಸುತ್ತದೆ.

★ ಕೃತಕ ಭಕ್ತರು ಗೌರವಿಸುವುದಕ್ಕಿಂತ ಇಂದು ನಿಮ್ಮಂತಹ ಶರಣರು ಪೂಜ್ಯರ ಸಾಧನೆಯನ್ನು ಮನೆಮನಗಳಲ್ಲಿ ಕೊಂಡಾಡುತ್ತಿದ್ದೀರಲ್ಲ ಇದಕ್ಕಿಂತ ದೊಡ್ಡದು ಮತ್ತೇನು ! ಲಿಂಗಾಯತ ಸಮಾಜವು ಧರ್ಮಗುರುವಿನ ಸುತ್ತ ಏಕೀಕೃತವಾಗಿ ಸಂಘಟನೆ ಆಗಬಾರದೆಂದೇ ಬಹುಪಾಲು ಮಠಾಧೀಶರು, ರಾಜಕಾರಣಿಗಳು ಎಚ್ಚರಿಕೆ ವಹಿಸಿ ಒಳಗೊಳಗೆ ತಮ್ಮ ತಮ್ಮ ಉಪಜಾತಿಗಳ ಸಂಘಟನೆ ಮಾಡುತ್ತಿದ್ದರು. ಇದಕ್ಕೆ ವಿರುದ್ಧವಾಗಿ ಪೂಜ್ಯ ಲಿಂಗಾನಂದ ಗುರುಗಳು ಅಖಂಡ ಸಮಾಜ ರಚನೆಗೆ ಯತ್ನಿಸಿದುದೇ ಆ ಕುತಂತ್ರಿಗಳ ಅಸಹನೆಗೆ ಮುಖ್ಯ ಕಾರಣ. ಆದರೇನು ನಿಮ್ಮಂತಹವರು. ಮುಂದಿನ ಪೀಳಿಗೆಯವರು ಪೂಜ್ಯ ಗುರುಗಳ ಸಾಧನೆಯನ್ನು ಕೊಂಡಾಡದೆ ಇರುವುದಿಲ್ಲ.

ಶಿವಕುಮಾರ ಗಿರಿಗೌಡರು, ಹುಬ್ಬಳ್ಳಿ- ಕೆಲವು ಮಠಾಧೀಶರಿಗೆ ಪೂಜ್ಯ ಲಿಂಗಾನಂದ ಸ್ವಾಮಿಗಳ ಹೆಸರು ಕೇಳಿದರೆ ಸಿಟ್ಟು, ಅಸಹನೆ, ಧರ್ಮ ಪ್ರಸಾರದ ಮೂಲಕ ಅವರು ಸಾಧಿಸಿದ್ದು ಅಗಾಧವಾಗಿದೆ, ಆದರೂ ಹೀಗೇಕೆ ?

★ ಆದರೆ ಅವರು ಒಂದು ತಪ್ಪು ಮಾಡಿದ್ದು (?) ನಿಮಗೆ ತಿಳಿಯುತ್ತಿಲ್ಲವೆ ? ಹೆಣ್ಣು ಮಕ್ಕಳಿಗೆ ಧಾರ್ಮಿಕ-ಸಾಮಾಜಿಕ ಸ್ಥಾನ ಕೊಡದೆ ಬಂಗಾರ, ಆಭರಣ, ಸೀರೆಗಳ ವ್ಯಾಮೋಹದ ಮಡುವಿನಲ್ಲೇ ಬಿಟ್ಟಿದ್ದಾಗ, ಇವೆಲ್ಲ ನಿರಾಕರಿಸಿ ಬಂದ ಸಾಧಕಿಗೆ ಆಶ್ರಯ ಕೊಟ್ಟು, ಗುರುವನ್ನಾಗಿ ಮಾಡಿದ್ದರಿಂದ ಕ್ರಾಂತಿಯ ಕಹಳೆ ಮೊಳಗ ತೊಡಗಿದೆ. ಇದು ಆಗಬಾರದೆಂದೇ ಬಯಸಿದ್ದ ಮಠಾಧೀಶರಿಗೆ ಆಘಾತವಾದುದರಿಂದ ಸಿಟ್ಟು ಬರದೇ ಇದ್ದೀತೆ ? ಸಾಮಾನ್ಯ ಮಹಿಳೆಯಾಗಿಯೇ ತೋರುತ್ತಿದ್ದ ನನ್ನಲ್ಲಿದ್ದ ಅಧ್ಯಾತ್ಮಿಕ ಹಂಬಲ ವ್ಯಕ್ತಿತ್ವ ಗುರುತಿಸಿ, ಆಸರೆ-ಧೈರ್ಯ-ಜ್ಞಾನ ನೀಡಿ ಆದಿ ಶರಣರ ಸಂಕಲ್ಪ ಪೂರೈಸಲು ಬಂದವರು ನೀವು . ಎಂದು ಗುರುತ್ವ ನೀಡಿದ್ದರಿಂದ ನಿಮ್ಮಂತಹ ಸಹೃದಯರು ಸಂತೋಷಪಟ್ಟರೂ,

ಲಿಂಗಾನಂದ ಸ್ವಾಮಿಗಳು ಎಂಥ ಕೆಲಸ ಮಾಡಿಬಿಟ್ಟರು ?! ಒಬ್ಬ ಈ ಮಹಿಳೆ ಪ್ರತಿಭಾವಂತರಾಗಿ ಮುಂದೆ ಬರದಿದ್ದರೆ ಇಂಥ ಎಲ್ಲಕ್ರಾಂತಿಕಾರಿ ಘಟನೆ ನಡೆಯುತ್ತಿದ್ದವೇ ಎಂದು ಮಠಾಧೀಶರು ಲಿಂ॥ ಲಿಂಗಾನಂದ ಸ್ವಾಮಿಗಳನ್ನು ಬೈಯುವುದರಲ್ಲಿ ಆಶ್ಚರ್ಯಪಡುವಂಥದೇನೂ ಇಲ್ಲ.

ಚಂದ್ರಕಾಂತ ಇಟಗಿ, ಧಾರವಾಡ.- ನೀವು ಬಸವ ತತ್ತ್ವ ತರಬೇತಿ ಶಿಬಿರಗಳನ್ನು ಆಗಾಗ ಏರ್ಪಡಿಸುತ್ತೀರಿ ; ಶಿವಯೋಗವನ್ನೂ ಕಲಿಸುತ್ತೀರಿ. ಚಿತ್ರದುರ್ಗ ಬೃಹನ್ಮಠದವರು ತರಬೇತಿ ಶಿಬಿರ, ಸಹಜ ಶಿವಯೋಗ ತರಗತಿ ನಡೆಸುತ್ತಾರೆ. ಉಭಯ ಶಿಬಿರಗಳಲ್ಲಿ ವ್ಯತ್ಯಾಸವೇನಿದೆ ?

★ ಬೇರೆ ಕಡೆ ನಡೆಸಿದ ಬಗ್ಗೆ ತಿಳಿದಿಲ್ಲ, ಧಾರವಾಡದಲ್ಲಿ ನಡೆದ ಶಿಬಿರದಲ್ಲಿ ಭಾಗವಹಿಸಿದ ಪಳಗಿದ ಶರಣರ ಅಭಿಪ್ರಾಯದ ಪ್ರಕಾರ ನಮ್ಮ ಶಿಬಿರದಲ್ಲಿ ಗುರು ಬಸವಣ್ಣ, ಲಿಂಗದೇವ, ಶರಣರ ವಿಚಾರಗಳ ಹೊರತು ಅನ್ಯ ಚರ್ಚೆ ನಡೆಯದು. ಅವರ ಶಿಬಿರದಲ್ಲಿ ಸದಾ ಇನ್ನೊಬ್ಬರನ್ನು ನಿಂದಿಸುವ ಕೆಲಸವೇ ನಡೆಯುತ್ತದೆ. ಅದವರ ಸಹಜ ಶಿವಯೋಗವಾಗಿದೆಯಂತೆ. ನಮ್ಮಲ್ಲಿ ಅನುಭಾವಿಗಳು, ಶರಣ ತತ್ತ್ವ ಅನುಷ್ಠಾನ ಮಾಡುವ ಶರಣರು ತಮ್ಮ ತಮ್ಮ ಅಧ್ಯಾತ್ಮಿಕ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಅವರಲ್ಲಿ ಅಧ್ಯಾತ್ಮಿಕ ಗಂಧವೇ ಇಲ್ಲದ ಬಸವರಾಜ ಹೊರಟ್ಟಿಯಂಥ ರಾಜಕಾರಣಿಗಳು ವಚನ ಸಾಹಿತ್ಯ ಪ್ರಚಾರಕ್ಕಾಗಿ ಜೀವನ ಮುಡುಪಿಟ್ಟವರನ್ನು ಕೀಳ್ಮಟ್ಟದ ಭಾಷೆಯಲ್ಲಿ ನಿಂದಿಸುತ್ತಾರೆ. ಶಿಬಿರಾರ್ಥಿಗಳಿಗೆ ಎಂಥಾ ತರಬೇತಿ ಸಿಗಬಹುದು ಊಹಿಸಿರಿ.

ರಮೇಶ ಗಾಮನಗಟ್ಟಿ, ಧಾರವಾಡ.- 61 ದಿವಸ್ಗಳ ಕಾಲ ಅತ್ಯಂತ ಯಶಸ್ವಿಯಾಗಿ ನಡೆದ ಗಂಗಾ ಮಾತಾಜಿಯವರ ಪ್ರವಚನದ ಪ್ರಭಾವ ನೋಡಿ, ತಾವೂ ಪ್ರಭಾವ ಬೀರಬೇಕೆಂದೋ ಅಥವಾ ನಿಮ್ಮ ಪ್ರವಚನದ ಪ್ರಭಾವ ಕೆಡಿಸಬೇಕೆಂದೋ ಚಿತ್ರದುರ್ಗ ಬೃಹನ್ಮಠದವರು ಡಿ. 19 ರಿಂದ 5 ದಿವಸ ಕಾಲ ಬಸವ ತತ್ತ್ವ ತರಬೇತಿ ಶಿಬಿರ ಇಟ್ಟಿದ್ದಾರೆ ಎಂದು ನನ್ನೊಬ್ಬ ಮಿತ್ರನ ಅಂಬೋಣ. ನಿಮ್ಮಭಿಪ್ರಾಯವೇನು ?

★ ಅವರಿಗೆ ಆ ಉದ್ದೇಶ ಇರಬಹುದು. ಆದರೆ ಧಾರವಾಡದ ಜನ ಬಹುಪ್ರಾಜ್ಞರು. ಅವರ ಭಕ್ತಿ ಮಳೆಬಿದ್ದ ತಕ್ಷಣ ದಿಢೀರನೆ ಏಳುವ ನಾಯಿಕೊಡೆಯಂತಲ್ಲ. 1969ರಿಂದಲೂ ಬೆಳೆಯುತ್ತ ಬಂದಿರುವ ತೆಂಗಿನಗಿಡದಂತಹ ಬೆಳವಣಿಗೆ. ಹಣ ಪಡೆದು ಭಕ್ತಿ ಮಾಡುವ ಅಲ್ಪಾಕಾಂಕ್ಷಿಗಳಲ್ಲ ; ಹಣ ನೀಡಿ ಭಕ್ತಿ ಮಾಡುವ ನಿಜ ದಾಸೋಹಿಗಳು. ಅವರ ಮನಸ್ಸನ್ನು ಕಲಕುವುದು ಅಷ್ಟು ಸುಲಭವಲ್ಲ.

ಎಲೆಹಳ್ಳಿ ಸಿದ್ಧಬಸಪ್ಪ, ತಿಪಟೂರು. -ನಾವು ಸಿದ್ಧರಾಮೇಶ್ವರರ ಸಂಪ್ರದಾಯದವರು. ನಮ್ಮ ನೊಳಂಬ ಸಮಾಜದ ಪ್ರಮುಖ ಮಠಗಳಲ್ಲಿ ಒಂದು ಚಿಕ್ಕನಾಯಕನಹಳ್ಳಿ ತಾಲ್ಲೋಕಿನ ಗೋಡೇಕೆರೆ ಸಂಸ್ಥಾನ ಮಠ, ಆದರೆ ಆ ಮಠದವರು ಶ್ರೀಮದ್ ರೇಣುಕಾಚಾರ್ಯ ಪರಂಪರಾಗತ ಮಠ ಎಂದು ಬರೆಯುತ್ತಾರಲ್ಲಾ. ಹೀಗೇಕೆ ?

★ ಅಜ್ಞಾನ ಮತ್ತು ಅಧ್ಯಯನದ ಕೊರತೆಯೇ ಕಾರಣ. ಎಲ್ಲ ಲಿಂಗಾಯತರೂ 5 ಪೀಠಗಳಲ್ಲಿ ಒಂದಕ್ಕೆ ಸೇರಿದವರು ಎಂಬ ಭ್ರಾಂತಿಯನ್ನು ಪಂಚಪೀಠದವರು ಹುಟ್ಟಿಸುವ ಕಾರಣ ಈ ಭ್ರಾಂತಿಗೆ ಗೋಡೇಕೆರೆಯವರು ಒಳಗಾಗಿರಬಹುದು. ಷಡುಗಣಾಧೀಶರಲ್ಲಿ ಒಬ್ಬರಾದ ಸಿದ್ಧರಾಮೇಶ್ವರರ ಜೀವನ-ಸಾಧನೆ-ಸಂದೇಶಕ್ಕೆ ಇರುವ ತೂಕ, ಮಹತ್ವ ಪೌರಾಣಿಕ ಕಲ್ಪನೆಯಾದ ರೇಣುಕಾಚಾರ್ಯರಿಗೆ ಇಲ್ಲ. ಆದ್ದರಿಂದ ಇವರು ಭ್ರಾಂತಿಯನ್ನು ಬಿಟ್ಟು ಸಿದ್ಧರಾಮೇಶ್ವರರ ಶರಣ ಪರಂಪರೆ ಎಂದು ಬರೆದುಕೊಳ್ಳುವುದು ವಿವೇಕಯುತವಾದುದು. ಪಂಚಪೀಠದವರು ಎಬ್ಬಿಸುವ ಪೌರಾಣಿಕ ಹುಯಿಲಿಗೆ ಶರಣ ಮಾರ್ಗಿಗಳು ಎಂದೂ ಬಲಿಯಾಗಬಾರದು.

ಮಲ್ಲಿಕಾರ್ಜುನಪ್ಪ ಚಾಮರಾಜಪೇಟೆ, ಬೆಂಗಳೂರು.- ★ ಬರೀ ಪಂಚಪೀಠದ ಭಕ್ತರುಗಳೇ

ಸೇರಿದ ಶ್ರೀ ಬಸವೇಶ್ವರ ಸಂಘ ಎಂಬ ಸಂಸ್ಥೆಯವರು ಸಂಘದ ಸುವರ್ಣ ಮಹೋತ್ಸವ ಇಟ್ಟಿದ್ದಾರೆ. ಬಸವ ಜಯಂತಿಯನ್ನು ಆಚರಿಸುವುದರ ಜೊತೆಗೆ ರೇಣುಕಾದಿ ಪಂಚಾಚಾರ್ಯರ ಯುಗಮಾನೋತ್ಸವ ಆಚರಿಸುವರಂತೆ. ಎಲ್ಲ ತದ್ವಿರುದ್ಧ ವಿಚಾರದ ಕಲಸು ಮೇಲೊಗರ. ಇವರು ರೇಣುಕಾದಿ ಪಂಚಾಚಾರ್ಯರ ಜಯಂತಿ ಆಚರಿಸಿಕೊಂಡರೆ ಸಾಕು; ಬಸವ ಜಯಂತಿ ಇವರಿಗೆ ಏಕೆ ಬೇಕು ?

★ವಿಶ್ವಗುರು ಬಸವಣ್ಣನವರ ವ್ಯಕ್ತಿತ್ವ, ಪ್ರಭಾವ ಎಷ್ಟು ಬೆಳೆದಿದೆ ಎಂದರೆ ಬಸವ ಜಯಂತಿ ಎಂಬ ಹೆಸರು ಸೇರಿಸಿಕೊಳ್ಳದಿದ್ದರೆ ರೇಣುಕರ ಯುಗಮಾನೋತ್ಸವ ನಡೆಯುವುದೇ ಇಲ್ಲ. ಹೀಗಾಗಿ ಬಸವ ತತ್ತ್ವದಲ್ಲಿ ಶ್ರದ್ಧೆ ಇಲ್ಲದೆ ಇದ್ದರೂ ಬಸವಣ್ಣನವರ ಜಯಂತಿ ಆಚರಿಸುವ ನಾಟಕ ಆಡಲಾಗುತ್ತದೆ. ತನ್ನ ಪತ್ನಿಯ ಸಖ್ಯವನ್ನು ತಾನೇ ಮಾಡಬೇಕು, ತನ್ನ ಊಟವನ್ನು ತಾನೇ ಮಾಡಬೇಕು ಇನ್ನೊಬ್ಬರ ಕೈಲಿ ಇವೆರಡನ್ನೂ ಮಾಡಿಸಲು ಬರದು ಎಂದು ಕಠೋರವಾಗಿ ಹೇಳಿ ಇಷ್ಟಲಿಂಗಾರ್ಚನೆಯನ್ನು ನೇರವಾಗಿ ಮಾಡುವುದನ್ನು ಧರ್ಮಗುರು ಬಸವಣ್ಣನವರು ಬೋಧಿಸಿದ್ದಾರೆ. ಆದರೆ ರಂಭಾಪುರಿ ಜಗದ್ಗುರುಗಳ ಇಷ್ಟಲಿಂಗಕ್ಕೆ ಕುಂಭಾಭಿಷೇಕವನ್ನು ಈ ವೀರಶೈವರು ಏರ್ಪಡಿಸಿದ್ದಾರೆ. ಇದಕ್ಕಿಂತ ಹಾಸ್ಯಾಸ್ಪದವಾದುದು ಏನಿದೆ ?

ಫಾಲನೇತ್ರಯ್ಯ, ಬಸವನಗುಡಿ, ಬೆಂಗಳೂರು.- ಸುವರ್ಣಮಹೋತ್ಸವದ ಒಂದು ಆಮಂತ್ರಣ ಪತ್ರಿಕೆಯನ್ನು ಪಂಚಾಚಾರ್ಯವಾದಿಗಳ ಶ್ರೀ ಬಸವೇಶ್ವರ ಸಂಘ (ಬಹುಶಃ ಎತ್ತನ್ನು ಬಸವೇಶ್ವರ ಎನ್ನುವವರಿಬಹುದು) . ಮುದ್ರಿಸಿದೆ. ಅದರಲ್ಲಿ ಸ್ಥಾವರ ಲಿಂಗದಿಂದ ರೇಣುಕಾಚಾರ್ಯರು ಉದ್ಭವವಾಗಿರುವ ಚಿತ್ರ ಮುಂದೆ ಬಸವಣ್ಣನವರು ಎಂದು ಊಹಿಸಬಹುದಾದ ಒಂದು ಕುರೂಪದ ವ್ಯಕ್ತಿಯ ಚಿತ್ರ ಮುದ್ರಣಗೊಂಡಿದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ?

★ಚಿತ್ರ ಬರೆದ ಕಲಾವಿದರ ಅಜ್ಞಾನವನ್ನಷ್ಟೇ ಈ ಚಿತ್ರದಲ್ಲಿ ಕಾಣದೆ ಬರೆಸಿದವರ ಅಜ್ಞಾನದ ಪರಮಾವಧಿಯನ್ನು ಕಾಣಬಹುದು. ಅಂಥ ಅಜ್ಞಾನದ ಮಧ್ಯೆಯೂ ನಮಗೆ ಒಂದೆರಡು ಸತ್ಯದ ಸಂಗತಿಗಳು ಗೋಚರಿಸಿವೆ. ಅವೆಂದರೆ, ರೇಣುಕಾಚಾರ್ಯರ ಕೊರಳಲ್ಲಿ ಇಷ್ಟಲಿಂಗವೇ ಇಲ್ಲದುದು ; ಇದರಿಂದ ಧರ್ಮಗುರು ಬಸವಣ್ಣನವರೇ ಇಷ್ಟಲಿಂಗದ ಆದ್ಯರು ಮತ್ತು ಲಿಂಗಾಯತ ಧರ್ಮ ಸ್ಥಾಪಕರು ಎಂಬುದು ಸಿದ್ಧವಾಗುತ್ತದೆ. ರೇಣುಕಾಚಾರ್ಯರ ಹಣೆಯಲ್ಲಿರುವ ಕಣ್ಣು ಅವರು ಐತಿಹಾಸಿಕ ವ್ಯಕ್ತಿಯಲ್ಲ ಪೌರಾಣಿಕ ಕಲ್ಪನೆ ಎಂಬುದಕ್ಕೆ ಸಾಕ್ಷಿಯಾಗಿದೆ. ಸನ್ಯಾಸಿ ಎಂದು ಇವರು ಹೇಳುವ ರೇಣುಕರಿಗೆ ಹಸಿರು ಮೇಲ್ವಸ್ತ್ರ, ಹಳದಿ ಧೋತ್ರ ಉಡಿಸಲಾಗಿದೆ. ಹೀಗೆ ಸಾಮಾನ್ಯ ವಿಷಯಗಳನ್ನು ಪ್ರತಿಪಾದಿಸಲು ಪಂಚ ಪೀಠಾಧೀಶ ಗುರುಗಳಿಗೆ ಮತ್ತು ಭಕ್ತರಿಗೆ ಬರುತ್ತಿಲ್ಲ. ಲಕ್ಷ್ಮಿ (ದುಡ್ಡು) ಇದ್ದಲ್ಲಿ ಸರಸ್ವತಿ (ಜ್ಞಾನ) ಇರುವುದಿಲ್ಲ ಎಂಬ ನಂಬಿಕೆಯನ್ನು ಈ ಗುರು-ಭಕ್ತರು ಮತ್ತೊಮ್ಮೆ ದೃಢಪಡಿಸಿದ್ದಾರೆ.

ಕಲ್ಲಪ್ಪ ಮಲ್ಲಪ್ಪ ಮೂಗಬಸವ, ಧಾರವಾಡ.- ಸಮಾಜದ; ಸಾರ್ವಜನಿಕ ಹಣವನ್ನು ಪಡೆದು (ಅವರ ಭಾಷೆಯಲ್ಲೇ ಹೇಳುವುದಾದರೆ ಲೂಟಿ ಹೊಡೆದು) ಮಾತೆ ಮಹಾದೇವಿಯವರು ಬಸವಣ್ಣನವರಿಗೆ ಅಪಚಾರ ಮ್ಮಾಡುತ್ತಿದ್ದಾರೆ ಎಂದರು ಲೀಲಾದೇವಿ ಪ್ರಸಾದರು. ಇದಕ್ಕೆ ಶಿವಮೂರ್ತಿ ಶರಣರೂ ದನಿಗೂಡಿಸಿದರು. ಈ ಆರೋಪವನ್ನು ಒಪ್ಪಿಕೊಳ್ಳುವಿರಾ ?

★ ತ್ಯಾಗಿಯೂ ಸನ್ಯಾಸಿಯೂ ಆದವರು ಸಾರ್ವಜನಿಕರಿಂದ ಪಡೆದ ಕಾಣಿಕೆಯಿಂದಲೇ ಕಾರ್ಯಮಾಡಬೇಕು. ಅದು ಬಿಟ್ಟು ಕಾನಿಷ್ಕದಂತಹ ಹೋಟೆಲ್ ನಡೆಸಿ, ಪ್ರಾಚ್ಯವಸ್ತುಗಳನ್ನು ವಿದೇಶಕ್ಕೆ ಮಾರಿ ಹಣ ಗಳಿಸಿ, ಅದನ್ನು ಬರೀ ಗೂಂಡಾಗಿರಿಗೆ ಬಳಸುವಂತಹ ಕಾರ್ಯ ಮಾಡಬೇಕೆ ? ನಾವು ಗಳಿಸುವುದು ಅತ್ಯಂತ ಪರಿಶುದ್ಧವಾದ ಹಣ. ಕಾಯಕ ಸತ್ತು ಹಣ-ಹೊನ್ನ ಬೇಡಿಹೆನೆಂದರೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ . ಎಂಬ ಶರಣ ವಾಣಿಯಂತೆ. ಜಂಗಮನು ಮಾಡಬೇಕಾದ ಪ್ರವಚನ

ಕಾಯಕವನ್ನು ಮಾಡಿ, ಪ್ರವಚನ ಕೇಳಿದ ಶರಣರು ಹೃದಯವರಳಿ ಕೊಡುವಂತಹ ಹಣವನ್ನು ಪಡೆದು ಕಾರ್ಯಮಾಡುತ್ತಿದ್ದೇವೆ. ಜನರಿಂದ ದುಡ್ಡು ಎತ್ತಲು ಯಾವ ಎಂ.ಎಲ್.ಎ, ಎಂ.ಪಿ, ಸಚಿವರನ್ನಾಗಲೀ, ಸರ್ಕಾರಿ ಅಧಿಕಾರಿಗಳನ್ನಾಗಲೀ ನಾವು ಬಳಸಿಕೊಳ್ಳುವುದಿಲ್ಲ. ಅಂತಲೇ ಬರೀ ಜೋಳಿಗೆಯಿಂದ ಇಷ್ಟೆಲ್ಲ ಸಾಧನೆ ಮಾಡಲು ಸಾಧ್ಯವಾಗಿರುವುದು. ನಮ್ಮ ಕಾರ್ಯ ವಿಸ್ತಾರ ಕಂಡು ಶರಣರು ಉದಾರವಾದ ಧನ ದಾಸೋಹ ಮಾಡುತ್ತಲೇ ಇರುತ್ತಾರೆ.

ವಿವೇಕ ಮೃತ್ಯುಂಜಯಪ್ಪ ಸಬರದ, ಧಾರವಾಡ. -ನಿಮಗೆ ತಲೆ ಕೆಟ್ಟಿದೆ ಎಂದು ವೀರಶೈವ ಮಹಾಸಭಾ ಅಧ್ಯಕ್ಷರಾದ ಭೀಮಣ್ಣ ಖಂಡ್ರೆ, ಚಂದ್ರಕಾಂತ ಬೆಲ್ಲದ ಧಾರವಾಡದಲ್ಲಿ ಭಾಷಣ ಮಾಡಿದರು ; ಅಹುದೆ ?

★ ಬಾಯಲ್ಲಿ ಆಡಿದ್ದು ಬೆನ್ನಿಗೆ ಮೂಲ ಎಂಬ ಒಂದು ಕನ್ನಡ ಗಾದೆ ಇದೆ. ಕ್ರಾಂತಿಯೋಗಿ ಬಸವಣ್ಣದಲ್ಲಿ, ಮಧುವರಸನು ತನ್ನ ಮಗಳನ್ನು ಹರಳಯ್ಯನವರ ಮಗನಿಗೆ ವಿವಾಹ ಮಾಡಿ ಕೊಟ್ಟು ಸಮಾನತೆಯನ್ನು ಪ್ರತಿಪಾದಿಸಿದಾಗ ಕೊಂಡೆಯ ಮಂಚಣ್ಣ, 'ನಿನಗೆಲ್ಲೋ ತಲೆ ಕೆಟ್ಟಿದೆ '. ಎಂದು ಅಟ್ಟಹಾಸದಿಂದ ನಗುವನು. ಆದರೆ ತಲೆ ಅಂತಿಮವಾಗಿ ಕೆಡುವುದು ಕೊಂಡೆಯ ಮಂಚಣ್ಣನಿಗೆ. ಆದ್ದರಿಂದ ನಾಲಿಗೆಯನ್ನು ಲಂಗುಲಗಾಮಿಲ್ಲದೆ ಹರಿಯಬಿಡುವುದು ಸೂಕ್ತವಲ್ಲ ಎಂದು ಈ ಆಧುನಿಕ ಮಂಚಣ್ಣ ಮಹಾಶಯರಿಗೆ ನಮ್ಮ ಹಿತೋಪದೇಶ.

ಬಸವಣ್ಣಪ್ಪ ಮಲ್ಲಪ್ಪ ಜಗದಂಪಿ, ಧಾರವಾಡ.- ನೀವು ಜಗದ್ಗುರು ಎಂಬ ಪದವನ್ನು ಬಳಸುವುದು ಹಾಸ್ಯಾಸ್ಪದ ಎಂದು ಭೀಮಣ್ಣ ಖಂಡ್ರೆ ಭಾಷಣ ಮಾಡಿದರು. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ.

★ ಭಾಲ್ಕಿ ಮತಕ್ಷೇತ್ರದಲ್ಲಿ ಒಮ್ಮೆ ಸಾಮಾನ್ಯ ಕಾರ್ಯಕರ್ತರಾಗಿದ್ದ ಕಲ್ಯಾಣರಾವ ಮೋಳಕೇರಿಯವರಿಗೆ ಚುನಾವಣೆಯಲ್ಲಿ ಸೋತ ಭೀಮಣ್ಣ ಖಂಡ್ರೆಯವರು ಲೋಕ ನಾಯಕ ಎಂದು ತಮ್ಮ ಹೆಸರಿನೊಡನೆ ಬಿರುದು ಹಚ್ಚಿಕೊಳ್ಳುತ್ತಿದ್ದರು. ಭಾಲ್ಕಿ, ಬೀದರ್ ಆಚೆ ಪ್ರಭಾವ ಇಲ್ಲದಿದ್ದರೂ (ಈಗಂತೂ ಭಾಲ್ಕಿ, ಬೀದರ್‌ಗಳಲ್ಲೇ ಇಲ್ಲ) ಲೋಕನಾಯಕ ಎಂದು ಬರೆದುಕೊಳ್ಳುವುದು ನೋಡಿ ನಮಗೆ ನಗುಬರುತ್ತಿತ್ತು. ನಾವು ಮಹಿಳಾ ಜಗತ್ತಿನ ಗುರು. ಅಲ್ಲದೆ ಎಷ್ಟೆಲ್ಲ ಸ್ವಾಮಿ, ಗುರು, ಜಗದ್ಗುರುಗಳು ಗಾಬರಿಗೊಂಡು ಒಟ್ಟಾಗಿ ಹೋರಾಡುತ್ತಿರುವುದು, ನಾವು ನಿಜಕ್ಕೂ ಪ್ರಭಾವಶಾಲಿ ಜಗದ್ಗುರು ಎಂಬುದನ್ನು ಸಾಬೀತು ಪಡಿಸುವುದಿಲ್ಲವೆ ?

ಮನೋಹರ ಶಿವಪ್ಪ, ಪಾಟೀಲ, ಧಾರವಾಡ.- ಧಾರವಾಡದಲ್ಲಿ ದಿ.21-4-2001 ಪ್ರತಿಭಟನಾ ಪ್ರದರ್ಶನವನ್ನು ಬಸವ ಕೇಂದ್ರದವರು ಏರ್ಪಡಿಸಿದ್ದರು. ಅದರ ನೇತೃತ್ವವನ್ನು ಚಿತ್ರದುರ್ಗದ ಶಿವಮೂರ್ತಿ ಶರಣರು ವಹಿಸಿದ್ದರು. ಧಾರವಾಡದ ಸ್ಥಳೀಯ ಜನರು ಹೆಚ್ಚು ಇರಲಿಲ್ಲ. ಹೊರಗಿನಿಂದ ಬಂದ ಜನರು ಮತ್ತು ಸಂಸ್ಕಾರವಿಲ್ಲದ ಬಾಡಿಗೆ ಭಂಟರು ಇದ್ದರು. ಅವರು ಕುಡಿದು ಕೇಕೆ ಹಾಕುತ್ತ ಅಸಹ್ಯವಾಗಿ ಕೂಗಾಡುತ್ತಿದ್ದುದನ್ನು ನೋಡಿದಾಗ ಎಂಥಾ ಸಂಸ್ಕೃತಿ ಎನ್ನಿಸಿತು ? ಮನಸ್ಸಿಗೆ ತುಂಬಾ ವ್ಯಥೆಯಾಯಿತು.

★ ನನಗೂ ಅಷ್ಟೇ ವ್ಯಥೆಯಾಗುತ್ತಿದೆ. ಚಿತ್ರದುರ್ಗದಲ್ಲಿ ಎಂಥಾ ಕೀರ್ತಿ ಹೊಂದಿದ್ದ ಬೃಹನ್ಮಠ ! ಲಿಂ|| ಜಯದೇವ ಜಗದ್ಗುರುಗಳ ತೇಜಸ್ಸು. ಆ ಕೀರ್ತಿ ಇಂದಿಗೂ ನಮ್ಮ ಚಿತ್ತ ಪರದೆಯ ಮೇಲೆ ಅಚ್ಚೊತ್ತಿವೆ. ನಂತರ ಬಂದ ಲಿಂ|| ಜಯವಿಭವ ಶ್ರೀಗಳು ಹಿಂದಿನವರ ಕೀರ್ತಿಯನ್ನು ಬೆಳೆಸದಿದ್ದರೂ ಉಳಿಸಿಕೊಂಡು ಬಂದರು. ಲಿಂ|| ಮಲ್ಲಿಕಾರ್ಜುನ ಶ್ರೀಗಳ ಕಾಲಕ್ಕೆ ಇಳಿಯಲು ಆರಂಭಿಸಿದ್ದು ಈ ಶಿವಮೂರ್ತಿ ಶರಣರ ಕಾಲಕ್ಕೆ ಪೂರ್ಣ ಇಳಿಯುತ್ತಿದೆ. ಇದಕ್ಕೆ ಪೋಷಕ ಪಾತ್ರಧಾರಿ ರಾಜನ್. ಇಲ್ಲದಿದ್ದರೆ ಬಸವ ಧರ್ಮ ಪೀಠವು ಮಹಾಜಗದ್ಗುರು ಪೀಠವಾಗಿ ಮುಂಬಡ್ತಿ ಪಡೆದರೆ

ಚಿತ್ರದುರ್ಗದ ಬೃಹನ್ಮಠ ಜಗದ್ಗುರು ಪದ ತ್ಯಜಿಸಿ ಹಿಂಬಡ್ತಿ ಪಡೆಯುತ್ತಿತ್ತೆ ? ಶಿವಮೂರ್ತಿ ಶರಣರು ಸ್ವಾಮಿ ಪದ ತ್ಯಜಿಸಿ ಹಿಂಬಡ್ತಿ ಪಡೆಯುತ್ತಿದ್ದರೆ ? ಯಾವ ಒಂದು ಘನಂಧಾರಿ ಸಾಧನೆ ಅಂಥ ಒಬ್ಬ ಮಹಿಳಾ ಜಗದ್ಗುರುವಿನ ಮೇಲೆ ದ್ವೇಷ ಸಾಧಿಸಲು ದಾವಣಗೆರೆ, ಧಾರವಾಡದ ಬೀದಿಗಳಲ್ಲಿ ಕುಡಿದು ಕೇಕೆ ಹಾಕುವ ಜನರ ಮಧ್ಯೆ ಬೃಹನ್ಮಠದ ಶ್ರೀಗಳು ಬೀದಿ ಸುತ್ತುತ್ತಿದ್ದರು ? ಎಲ್ಲಾ ಲಿಂಗದೇವನ ಲೀಲೆ ? ಯಾರೇನು ಮಾಡಲಾದೀತು ?! ತಮ್ಮ ಭವಿಷ್ಯ ತಾವೇ ಬರೆದುಕೊಳ್ಳುತ್ತಿದ್ದಾರೆ !

ಬಸವಗೌಡ ಪಾಟೀಲ್, ನಿಗಡಿ, ಪೂನಾ.- ದಿ. 29 ಮತ್ತು 30 ಮಾರ್ಚರಂದು ಉದಯ ಟಿ.ವಿ.ಯಲ್ಲಿ ಮಾಗಡಿ ನರಸಿಂಹಯ್ಯ ಮತ್ತು ಶೈಲಜಾ ಸಂತೋಷ ಅವರ ಸಂವಾದ ಬಿತ್ತರಿಸಲಾಯಿತು. ನರಸಿಂಹಯ್ಯ ಸರ್ವಜ್ಞನಿಂದ ಬಹಳ ಪ್ರಭಾವಿತರಾಗಿದ್ದಾರಂತೆ. ಸರ್ವಜ್ಞ ಮತ್ತು ಬಸವಣ್ಣನವರ ವಿಚಾರಗಳಲ್ಲಿ ಬಹಳ ಸಾಮ್ಯತೆ ಇದೆಯಂತೆ. ಸರ್ವಜ್ಞನು ಲಿಂಗಾಯತ ಸಮಾಜದವನು ಎಂದು ಕೆಲವರು ಹೇಳುತ್ತಾರಂತೆ. ಆದರೆ ಇದು ಸತ್ಯವಲ್ಲ ಎಂದು ಹೇಳಿದರು. ಇದು ಸರಿಯೆ ?

★ ಬಸವಣ್ಣ-ಲಿಂಗಾಯತ ಧರ್ಮ-ಸಮಾನತೆ-ವೈಚಾರಿಕತೆ. ಇವೆಲ್ಲ ಬಿಡಿಸಲಾರದ ಬಾಂಧವ್ಯ ಹೊಂದಿವೆ. ಅದೇ ಮಾರ್ಗದಲ್ಲಿ ನಡೆದವನು ಸರ್ವಜ್ಞ. ಸರ್ವಜ್ಞನ ವಚನಗಳನ್ನು ಕೆಸೆಟ್ ಮೂಲಕ ಕೇಳುತ್ತಿದ್ದರೆ, ಓದುತ್ತಿದ್ದರೆ ಅವು ಬಸವ ಸಿದ್ಧಾಂತಕ್ಕೆ ಬರೆದ ವ್ಯಾಖ್ಯಾನಗಳಂತಿವೆ. ಏಕದೇವೋಪಾಸಕನು, ಸಮತಾವಾದಿಯೂ, ಪ್ರಗತಿಪರ ಚಿಂತಕನೂ ಆದ ಸರ್ವಜ್ಞ ಅಪ್ಪಟ ಬಸವಾನುಯಾಯಿ, ಲಿಂಗಾಯತ ಧರ್ಮಿ. ಇದನ್ನು ದೃಢಪಡಿಸುವ ತ್ರಿಪದಿಗಳು ಅನೇಕವಿವೆ.

1. ಆದಿ ಗುರುರಾಯನು ಭೇದಿಸಿ ಲಿಂಗವ ಕೊಟ್ಟ
   ಮೂದೇವರೊಡೆಯ ಮೂಜಗದ ಕರ್ತೃ
   ಆದಿ ಗುರು ಬಸವ ಸರ್ವಜ್ಞ ॥

2. ಅಂಗವನು ಲಿಂಗವನು ಸಂಗೊಳಿಸಲೆಂತಕ್ಕು
   ಲಿಂಗದ ನೆನಹು ಘನವಾಗೆ - ಆ ಅಂಗ
   ಲಿಂಗವಾಗಿಕ್ಕು ಸರ್ವಜ್ಞ ॥

3. ಲಿಂಗದ ದರುಶನ । ಲಿಂಗದ ಸ್ಪರುಶನ
   ಲಿಂಗ ಸಹ ಸರ್ವಸುಖ ಭೋಗವಾದವನು
   ಲಿಂಗವೆ ಅಕ್ಕು ಸರ್ವಜ್ಞ ॥

4. ಓದುವಾದಗಳೇಕೆ ಗಾದೆಯ ಮಾತೇಕೆ
   ವೇದ ಪುರಾಣ ನಿನಗೇಕೆ - ಲಿಂಗದ
   ಹಾದಿಯರಿದವಗೆ ಸರ್ವಜ್ಞ ॥

5. ತನ್ನೊಳಿಹ ಲಿಂಗವನು ಮನ್ನಿಸಲರಿಯದೆ
   ಬಿನ್ನಾಣ ಕಡೆದ ಪ್ರತಿಮೆಗಳಿಗೆರಗುವ
   ನನ್ನಾಯಿ ನೋಡ ಸರ್ವಜ್ಞ ॥

ಮಹಾಂತೇಶ ಇಟ್ಟಂಗಿ, ಧಾರವಾಡ.- ಧಾರವಾಡದಲ್ಲಿ ಶ್ರೀ ಶಿವಮೂರ್ತಿ ಶರಣರು, ಭೀಮಣ್ಣ ಖಂಡ್ರೆ, ಚಂದ್ರಕಾಂತ ಬೆಲ್ಲದ ಮುಂತಾದವರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಸಲ್ಲಿಸಿದ ಮನವಿಯಲ್ಲಿ ನಿಮ್ಮನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಲಾಗಿದೆಯಂತೆ. ಗಡಿಪಾರು ಮಾಡಿದರೆ ಏನು ಮಾಡುವಿರಿ ?

★ **ಜೋ ಕುಚ್ ಹುವಾ ಅಚ್ಛಾ ಕೆ ಲಿಯೆ ಹುವಾ** ಎನ್ನುತ್ತೇವೆ. ಗಡಿಪಾರು ? ಯಾವ ಗಡಿ ?

ಧಾರವಾಡವೆ ? ಬೆಂಗಳೂರಿದೆ, ಬೀದರ ಇದೆ, ಬಳ್ಳಾರಿ ಇದೆ, ಬಿಜಾಪುರ ಇದೆ. ಕರ್ನಾಟಕವೆ ? ಅಖಂಡ ಭಾರತವಿದೆ ! ಈ ವೀರಶೈವರ ಸಹವಾಸವೇ ಸಾಕು ಎಂದು ಇಡೀ ಭಾರತದಲ್ಲಿ ಧರ್ಮಪ್ರಚಾರ ಮಾಡಲು ಲಿಂಗದೇವ ಮಾಡಿರುವ ಲೀಲೆ ಇದು ಎಂದುಕೊಳ್ಳುತ್ತೇನೆ. ಭಾರತದಿಂದಲೇ ಗಡಿಪಾರು ? ಇನ್ನೂ ಒಳ್ಳೆತಾಯಿತು. ಇಂಗ್ಲೆಂಡ್, ಅಮೆರಿಕಾಗಳಲ್ಲಿ ಸಂಚರಿಸಿ ಧರ್ಮ ಪ್ರಚಾರ ಮಾಡುತ್ತೇನೆ.

ಸ್ವಗೃಹೇ ಪೂಜ್ಯತೇ ಮೂರ್ಖಃ, ಸ್ವಗ್ರಾಮೇ ಪೂಜ್ಯತೇ ವಿಭುಃ
ಸ್ವದೇಶೇ ಪೂಜ್ಯತೇ ರಾಜ, ವಿದ್ವಾನ್ ಸರ್ವತ್ರ ಪೂಜ್ಯತೆ ॥

ತನ್ನ ಮನೆಯಲ್ಲಿ ಎಂಥಾ ಮೂರ್ಖನಿಗೂ ಬೆಲೆ ಇರುತ್ತದೆ, ಗ್ರಾಮದಲ್ಲಿ ಆ ಊರ ಮುಂದಾಳುವಿಗೆ ಗೌರವವಿರುತ್ತದೆ, ರಾಜನಿಗೆ ತನ್ನ ರಾಜ್ಯದಲ್ಲಿ ಬೆಲೆ ಇರುತ್ತದೆ. ವಿದ್ವಾಂಸನಿಗೆ ಎಲ್ಲೆಡೆಯಲ್ಲೂ ಗೌರವವಿರುತ್ತದೆ.

ಪಲ್ಲವಿ ಪಾಟೀಲ್, ಧಾರವಾಡ.- ನಾನು ದಿ. 21-4-2001ರಂದು ಕರ್ನಾಟಕ ಕಾಲೇಜಿಗೆ ಹೋಗಿ ಮನೆ ಕಡೆಗೆ ಸಾಗುತ್ತಿದ್ದೆ. ಧಾರವಾಡದ ಸಿಲ್ವರ್ ಜೂಬಿಲಿ ಸರ್ಕಲ್‌ದಲ್ಲಿ ಗಲಾಟೆ ನಡೆದುದರಿಂದ ಸರ್ಕಲ್‌ದಲ್ಲಿ ನಿಂತಿದ್ದೆ. ಆಗ ಚಿತ್ರದುರ್ಗದ ಬೃಹನ್ಮಠದ ಸ್ವಾಮಿಗಳು ಮತ್ತು ಕೆಲವಾರು ಸ್ವಾಮಿಗಳ ಎದುರಲ್ಲಿ ಕೆಲವರು ಅನಾಗರಿಕರಂತೆ ವರ್ತಿಸುತ್ತ ಅವಾಚ್ಯ ಬೈಗುಳ ಬೈಯುತ್ತ ನಿಮ್ಮ ಪ್ರತಿಕೃತಿ ದಹನ ಮಾಡಿದರು. ಧರ್ಮಗುರುಗಳಿಗೆ ಇಂಥ ವರ್ತನೆಗಳನ್ನು ನಿಯಂತ್ರಿಸುವ ಶಕ್ತಿ ಇಲ್ಲವಲ್ಲ ಎನ್ನಿಸಿ ವಿಷಾದವೆನಿಸಿತಲ್ಲದೆ, ನಿಮ್ಮ ಪ್ರತಿಕೃತಿ ಸುಟ್ಟಿದ್ದು ನೋಡಿ ದುಃಖವಾಗಿ ಅಳು ಬಂದಿತು. ಅಳುತ್ತಲೇ ಮನೆಗೆ ಬಂದೆ.

★ ಧರ್ಮಗುರುಗಳು ಇಂಥ ವರ್ತನೆಗಳನ್ನು ನಿಯಂತ್ರಿಸಬೇಕು ಎಂದು ನೀವು ನಿರೀಕ್ಷಿಸುತ್ತಿರುವಿರಿ. ಆದರೆ ಅದೇ ಗುರುಗಳೇ ಇಂಥ ವರ್ತನೆಗಳನ್ನು ಪ್ರಚೋದಿಸಿ, ಪೋಷಿಸಿ, ಬೆಳೆಸುತ್ತಿದ್ದಾರೆ. ಉನ್ನತ ಸ್ಥಾನದಲ್ಲಿ ಇರುವವರು ವಿಶಿಷ್ಟ ನೀತಿಯ ಚೌಕಟ್ಟನ್ನು ಎಂಥದೇ ಪ್ರಸಂಗದಲ್ಲಿ ಮೀರಬಾರದು ಎಂಬುದನ್ನು ಅವರು ಮರೆತಿದ್ದಾರೆ.

ಇಂಥ ಪ್ರಸಂಗಗಳಿಂದ ನೀವು-ನಾವು ಮತ್ತಷ್ಟು ಛಲವಂತರಾಗಬೇಕೇ ವಿನಾ ಅಳುತ್ತಾ ಹೋಗಬಾರದು. ಸತ್ಯದ ಘೋಷಣೆ ಮತ್ತು ಪ್ರತಿಷ್ಠಾಪನೆ ಕಠಿಣವಾದ ದಾರಿ. ದೃಷ್ಟಿಯಾದಾಗ ದೃಷ್ಟಿ ತೆಗೀತೀವಿ ಎಂದು ಹಳ್ಳಿಯ ಜನರು ಪೊರಕೆ, ಮೆಣಸಿನಕಾಯಿ ಮುಂತಾದ್ದು ಇಳೀ ತೆಗೆದು ಸುಡುತ್ತಾರೆ. ಹಾಗೆಯೇ ಚಿತ್ರದುರ್ಗ ಬೃಹನ್ಮಠದ ಶ್ರೀಗಳು ತಮ್ಮ ಊರಿನಲ್ಲಿ ಹುಟ್ಟಿದವರು ಎಂಬ ನಮ್ಮ ಮೇಲಿನ ಅಭಿಮಾನಕ್ಕಾಗಿ ಪ್ರತಿಕೃತಿ ದಹನ ಮಾಡಿ, ಕೇಡು ಕಳೆದು ನಮಗೆ ಶ್ರೇಯಸ್ಸನ್ನು ಬಯಸುತ್ತಿದ್ದಾರೆ. ಆದ್ದರಿಂದ ನೀನು ಅಳುವ ಅಗತ್ಯವಿಲ್ಲ.

ರವಿಚಂದ್ರ ಬೆಳ್ಳಾವಿ, ಧಾರವಾಡ.- ಧಾರವಾಡದ ಸಿಲ್ವರ ಜೂಬಿಲಿ ಸರ್ಕಲ್‌ದಲ್ಲಿ ಭಾಷಣ ಮಾಡಿದ ಭೀಮಣ್ಣ ಖಂಡ್ರೆ ಮತ್ತು ನೇತೃತ್ವ ವಹಿಸಿದ ಬೃಹನ್ಮಠದ ಶ್ರೀಗಳು ನಿಮ್ಮನ್ನು ಜೈಲಿಗೆ ಹಾಕಿಸುವುದಾಗಿ ಪಣ ತೊಟ್ಟಿದ್ದಾರೆ. ಇದಕ್ಕಾಗಿ ಅಂದು ಸಂಜೆ ನಡೆದ ಸಭೆಯಲ್ಲಿ ಸಚಿವ ಹೆಚ್.ಕೆ. ಪಾಟೀಲರಿಗೆ ಮನವಿಯನ್ನು ಕೊಟ್ಟಿದ್ದಾರೆ.

★ ಹೀಗೋ ? ಶ್ರೀಗಳು ಮತ್ತು ಭೀಮಣ್ಣ ಖಂಡ್ರೆಯವರ ಜೇಬಿನಲ್ಲಿ [ಶ್ರೀಗಳ ನಿಲುವಂಗಿಗೆ ಜೇಬಿದೆಯೋ ಇಲ್ಲವೋ ಗೊತ್ತಿಲ್ಲ] ಬಹುಶಃ ಸರ್ಕಾರ, ಪೋಲೀಸ್ ಇಲಾಖೆ, ಕಾನೂನು, ನ್ಯಾಯಾಲಯ ಅಡಗಿದ್ದಂತೆ ತೋರುತ್ತದೆ. ''ಛೂ ಮಂತ್ರಕಾಳಿ'' ಎಂದು ಅವರು ಬೂದಿ ಊದಿದ ತಕ್ಷಣ ನಾವು ಜೈಲಲ್ಲಿ ಇರಬೇಕಾಗಬಹುದೇನೋ ? ಇದಕ್ಕೆ ನಾವು ರೆಡಿ ! ನೀವೂ ಮಾನಸಿಕವಾಗಿ ಸಿದ್ಧರಾಗಿರಿ.

ಆರ್.ಎಂ.ಕರಡಿಗುದ್ದಿ, ಬಸವ ತತ್ತ್ವ ಪ್ರಚಾರ ಸಂಸ್ಥೆ, ಬೆಳಗಾಂವ.- ಬಸವಣ್ಣನವರ ವಚನಗಳಲ್ಲಿ

ಇದ್ದ ಮುದ್ರಿಕೆ ಕೂಡಲ ಸಂಗಮದೇವಾ ತೆಗೆದು 'ಲಿಂಗದೇವ' ಎಂದಿಟ್ಟುದು ಶಾಸ್ತ್ರದ್ರೋಹವಲ್ಲವೆ ? ಇದು ನಿಮಗೆ ತಪ್ಪು ಎನಿಸುವುದಿಲ್ಲವೆ ?

★ ಜಗತ್ತಿನಲ್ಲಿಯೇ ಅತ್ಯಂತ ಅಧಿಕೃತವೆಂದು ಮಾನ್ಯ ಮಾಡಲಾಗುತ್ತಿದ್ದ ಹಳೆ ಒಡಂಬಡಕೆ, ಹೊಸ ಒಡಂಬಡಿಕೆ ಅರ್ಥಾತ್ ಬೈಬಲ್ ಭೂಕೇಂದ್ರ [Geocentric theory] ಸಿದ್ಧಾಂತ ಹೇಳಿದವು. ಆದರೆ ತನ್ನ ಸಂಶೋಧನೆಯಿಂದ ಗೆಲಿಲಿಯೋ [ಮತ್ತು ಕೋಪರ್ನಿಕಸ್] ಭೂಮಿ ಸ್ಥಿರ, ಸೂರ್ಯ ಚರ ಎಂದು ಸಾಮಾನ್ಯ ಕಣ್ಣಿಗೆ ಅನ್ನಿಸಿದರೂ ಸೂಕ್ಷ್ಮವಾಗಿ ಗಮನಿಸಿದರೆ ಭೂಮಿಯೇ ಸೂರ್ಯನ ಸುತ್ತ ತಿರುಗುತ್ತಿದೆ ಎಂಬುದನ್ನು ಕಂಡು ಹಿಡಿದ. ಬೈಬಲ್‌ಗೆ ವಿರುದ್ಧವಾಗಿ ಹೋದುದಕ್ಕೆ ಗೆಲಿಲಿಯೋನನ್ನು ಹಿಂಸಿಸಲಾಯಿತು. ಆದರೆ ಅವನ ಸಿದ್ಧಾಂತವೇ ನೆಲೆಗೊಂಡಿದೆಯಲ್ಲವೆ ?.

ಧರ್ಮಪಿತ ಬಸವಣ್ಣನವರು ಸಾಕ್ಷಾತ್ಕಾರಕ್ಕೆ ಪೂರ್ವದಲ್ಲಿ ಕೂಡಲ ಸಂಗಮನಾಥನನ್ನು ಪೂಜಿಸಿದ್ದು ನಿಜ, ಆಗಲೇ ಅವರು ಅದೇ ಮುದ್ರಿಕೆ ಇಟ್ಟುಕೊಂಡು ವಚನವನ್ನು ಬರೆಯಲು ಆರಂಭಿಸಿದ್ದೂ ನಿಜ. ಆದರೆ 21ನೆಯ ವಯಸ್ಸಿನಲ್ಲಿ ಸಾಕ್ಷಾತ್ಕಾರವಾಗಿ ಇಷ್ಟಲಿಂಗ ಕಂಡು ಹಿಡಿದುಕೊಟ್ಟು ಲಿಂಗಾಯತ ಧರ್ಮವನ್ನು ಅವರು ಸ್ಥಾಪನೆ ಮಾಡಿದರು. ಆಗಿನಿಂದ ಅವರು ಸ್ಥಾವರಲಿಂಗಪೂಜೆ ತೊರೆದು ಇಷ್ಟಲಿಂಗಪೂಜೆ ಮಾತ್ರ ಮಾಡಲು ಹೇಳಿದರು. ಸೃಷ್ಟಿಕರ್ತನನ್ನು ಲಿಂಗದೇವ ಎಂದರು. ಈ ಸೈದ್ಧಾಂತಿಕ ಪರಮ ಸತ್ಯ ಗ್ರಹಿಸಿದ ನಾನು ಧರ್ಮಗುರುವಿನ ಆದೇಶದಂತೆಯೇ ಕೂಡಲ ಸಂಗಮದೇವ ಪದವನ್ನು ಕೆಲವು ವಚನಗಳಲ್ಲಿ ತೆಗೆದು ಲಿಂಗದೇವ ಇಟ್ಟಿದ್ದೇನೆ. ಅರ್ಥಮಾಡಿಕೊಳ್ಳುವ ಬೌದ್ಧಿಕ ಪಟುತ್ವ ಬೆಳೆಸಿಕೊಳ್ಳಿರಿ.

ಸುಮಂಗಲಾದೇವಿ ಪಾಟೀಲ, ಹಳಿಯಾಳ.- ಎಪ್ರಿಲ್ 13ರಂದು ಹಳಿಯಾಳದ ಸಮುದಾಯ ಭವನದಲ್ಲಿ ರಾಮಕೃಷ್ಣ ಪರಮಹಂಸರ ಜಯಂತಿ ಆಚರಿಸಲಾಯಿತು. ಆಗ ಎಂ.ಎಸ್.ತಳವಾರ ಎನ್ನುವವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತ ಭಕ್ತನು ಕಾಮಿನಿ ಮತ್ತು ಕಾಂಚನಗಳ ಆಸೆ ಬಿಟ್ಟರೆ ಪರಮಾತ್ಮನನ್ನು ಕಾಣಲು ಸಾಧ್ಯ ಎಂದರು. ಹಾಗಾದರೆ ನಮ್ಮಂತಹ ಗೃಹಸ್ಥರಿಗೆ ದೇವರ ಒಲುಮೆ ಸಾಧ್ಯವಿಲ್ಲವೆ ?

★ ಅದು ವೈದಿಕ ಧರ್ಮದ ವಿಚಾರಧಾರೆ. ಧರ್ಮಪಿತ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಬೇರೊಂದು ವಿಚಾರಧಾರೆಯನ್ನೇ ಜಗತ್ತಿನ ಮುಂದಿಟ್ಟರು. ಹೆಣ್ಣು, ಹೊನ್ನು, ಮಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೇ ಮಾಯೆ. ಪರಸ್ತ್ರೀಯನ್ನು ತಾಯಿಯನ್ನಾಗಿ, ಹೊನ್ನನ್ನು [ಜಂಗಮ ಆಸ್ತಿ] ದಾಸೋಹದ ಸಾಧನವಾಗಿ, ಮಣ್ಣನ್ನು [ಅಂದರೆ ಸ್ಥಾವರ ಆಸ್ತಿ] ಕಾಯಕ ನಿರ್ವಹಣೆ-ದಾಸೋಹ ಸಾಧನೆಗೆ ಬಳಸಿಕೊಂಡರೆ ಗೃಹಸ್ಥನೂ ದೇವರ ಕೃಪೆಗೆ ಪಾತ್ರನಾಗಬಲ್ಲ ಎಂದು ಬೋಧಿಸಿದ್ದಾರೆ. ಅಪ್ಪ ಬಸವಣ್ಣನವರ ತತ್ತ್ವದ ಮಡಿಲಲ್ಲಿ ನೀವು ಸುರಕ್ಷಿತ, ಚಿಂತಿಸದಿರಿ.

.. - ಕಾವೇರಿ ಟಿ.ವಿ.ಚಾನೆಲ್‌ದಲ್ಲಿ ಬರುತ್ತಿದ್ದ ನಿಮ್ಮ ಪ್ರವಚನಗಳು ಎಲ್ಲ ಜನಾಂಗದ ಜನರಿಗೆ ವಿಪರೀತ ಆಕರ್ಷಣೆಗಳಾಗಿದ್ದವು. ಚಿತ್ರದುರ್ಗ ಶ್ರೀಗಳು ಅವು ಪ್ರಸಾರವಾಗದಂತೆ ಪ್ರಯತ್ನ ಮಾಡಿದುದಾಗಿ ಹೇಳಿದ್ದು ಕಲ್ಯಾಣ ಕಿರಣದ ಮೂಲಕ ತಿಳಿಯಿತು. ಹೀಗೆ ಮಾಡುವ ಬದಲು ಬೃಹನ್ಮಠದ ಶ್ರೀಗಳು ತಮ್ಮ ಪ್ರಭಾವ ಬಳಸಿ ಅವರ ಪ್ರವಚನಗಳೂ ಬರುವಂತೆ ಮಾಡಬಹುದಿತ್ತು. ಶ್ರೋತೃಗಳಿಗೆ ದ್ವಿಗುಣಿತ ಲಾಭವಾಗುತ್ತಿತ್ತು.

★ ನಿಜ, ಅದು ನಿಮ್ಮಂತಹವರ ವಿಚಾರಶೈಲಿ. ಮಂಗನಿಗೆ ಗೂಡು ಕಟ್ಟಲು ಬರದು. ಗೂಡು ಕಟ್ಟಿಕೊಂಡು ನೆಮ್ಮದಿಯಿಂದ ಇರು ಎಂದು ಹೇಳಿದ ಗುಬ್ಬಿಯ ಗೂಡನ್ನು ಕಿತ್ತೆಸೆಯಿತಂತೆ. ಅದರಂತೆ ಅವರು ತಮಗೆ ಭಾಷಣದಿಂದ, ಬರಹದಿಂದ ಪ್ರಭಾವ ಮಾಡಲು ಬರದೆಂದು. ಅದಕ್ಕಾಗಿ ಇನ್ನಿತರರ ಭಾಷಣ, ಪ್ರವಚನ ಕೆಡಿಸಲು ಪ್ರಯತ್ನಿಸುತ್ತಾರೆ.

ಗುರುಶಾಂತಪ್ಪ ಜಗಳೂರು, ಚಿತ್ರದುರ್ಗ.- ಮಠಾಧಿಕಾರಿಗಳಿಗೆ ಅಥವಾ ಧಾರ್ಮಿಕ ಜಗತ್ತಿನ ಜನರಿಗೆ ಸಲ್ಲದ ಕ್ರೂರ ಹೇಳಿಕೆ ನೀಡುತ್ತ ಚಿತ್ರದುರ್ಗದ ಬೃಹನ್ಮಠದ ಸ್ವಾಮಿಗಳು ವರ್ತಿಸುತ್ತಿದ್ದಾರೆ. ಅವರಿಗೆ ಬುದ್ಧಿ ಹೇಳುವ ಧೈರ್ಯ ಇತರ ಹಿರಿಯ ಮಠಾಧೀಶರಿಗೆ ಇಲ್ಲವೆ ?

★ ಹಿಂದಿನ ಕಾಲದ ರಾಜರು, ಸಾಮಂತರು, ಪಾಳೆಯಗಾರರಲ್ಲಿ ಎರಡು ಬಗೆಯವರು ಕಾಣಬರುತ್ತಿದ್ದರು. ಕೆಲವರು ಪ್ರಜೆಗಳ ಕುಂದು ಕೊರತೆ ತಿಳಿಯಲು, ಅಭಿಪ್ರಾಯ ಸಂಗ್ರಹಿಸಲು ಮಾರುವೇಷದಿಂದ ಸಹಿತ ತಿರುಗಾಡಿ ಪ್ರಜೆಗಳ ನೋವನ್ನು ಪರಿಹರಿಸುತ್ತಿದ್ದರು. ತಮ್ಮ ವರ್ತನೆಯನ್ನು ತಿದ್ದಿಕೊಳ್ಳುತ್ತಿದ್ದರು. ಕುಂದು ಕೊರತೆ ಎತ್ತಿ ತೋರಿಸಿದ ಪ್ರಜೆಗಳನ್ನು ಶ್ಲಾಘಿಸುತ್ತಿದ್ದರು. ಮತ್ತೆ ಕೆಲವರು ದರ್ಪದಿಂದ ವರ್ತಿಸುತ್ತ ಪ್ರಜೆಗಳನ್ನು ಅಂಜಿಸುತ್ತಿದ್ದರು. ಅವರ ವಿರುದ್ಧ ಯಾರೂ ದನಿ ಎತ್ತುವಂತಿರಲಿಲ್ಲ. ಧೈರ್ಯ ಮಾಡಿ ಯಾರಾದರೂ ಪ್ರಜೆಗಳ ಹಿತ ದೃಷ್ಟಿಯಿಂದ ಅಭಿಪ್ರಾಯ ಕೊಟ್ಟರೆ ಅವರನ್ನು ದಮನಿಸಲು ಯತ್ನಿಸಿ ಕ್ರೂರವಾಗಿ ನಡೆದುಕೊಳ್ಳುತ್ತಿದ್ದರು. ಚಿತ್ರದುರ್ಗದ ಶ್ರೀಗಳು ಮತ್ತು ಅವರ ಆಡಳಿತಾಧಿಕಾರಿಗಳು ಎರಡನೆಯ ಬಗೆಯ ರಾಜರಂತೆ ವರ್ತಿಸುತ್ತಿದ್ದಾರೆ ಎಂದು ಚಿತ್ರದುರ್ಗದ ಜನ ನಿಡುಸುಯ್ಯುತ್ತಿದ್ದಾರೆ.

ಚಂದ್ರಕಲಾ ಶಿವರಾಜ ಪಾಟೀಲ, ಧಾರವಾಡ.- ಮಾತೆ ಮಹಾದೇವಿಯವರನ್ನು ಜೈಲಿಗೆ ಹಾಕಬೇಕೆಂದು ಚಿತ್ರದುರ್ಗದ ಬೃಹನ್ಮಠದ ಶ್ರೀಗಳ ನೇತೃತ್ವದಲ್ಲಿ ವೀರಶೈವ ಮಹಾಸಭೆಯ ಅಧ್ಯಕ್ಷರುಗಳಾದ ಭೀಮಣ್ಣ ಖಂಡ್ರೆ, ಚಂದ್ರಕಾಂತ ಬೆಲ್ಲದ ಮುಂತಾದವರು ಸರ್ಕಾರವನ್ನು ಆಗ್ರಹಿಸಿ ಸಚಿವರೊಬ್ಬರಿಗೆ ಮನವಿಯನ್ನು ಕೊಟ್ಟರಂತೆ. ಅವರು ಪರಿಶೀಲಿಸುವುದಾಗಿ ಭರವಸೆಯನ್ನು ನೀಡಿದರಂತೆ. ಇದನ್ನು ಕೇಳಿ ನಮಗೆ ಅಳು ಬಂದಿತು. ನೀವು ನೀಡುವ ಸಮಾಧಾನವೇನು ?

★ ಮೊದಲು ನಿಮಗೆ ಬುದ್ಧಿ ಹೇಳಬೇಕಾಗಿದೆ. ಶರಣರು ಆತ್ಮವಿಶ್ವಾಸಿಗಳು, ಧೈರ್ಯಶಾಲಿಗಳೂ ಆಗಿರಬೇಕು. ಇದು ಪ್ರಜಾಪ್ರಭುತ್ವ; ಇಲ್ಲಿ ಒಂದು ಸಂವಿಧಾನವಿದೆ; ಸರಿ ತಪ್ಪುಗಳನ್ನು ನಿರ್ಧರಿಸುವ ನ್ಯಾಯಾಲಯವಿದೆ. ಸರ್ಕಾರಗಳು ದ್ವೇಷಪೂರಿತ ಮಠಾಧೀಶರ ಮಾತು ಕೇಳಿ ಕಾನೂನಿನ ಚೌಕಟ್ಟು ಬಿಟ್ಟು ಕೆಲಸ ಮಾಡಲು ಸಾಧ್ಯವಿಲ್ಲ. ಸ್ವತಃ ಮುಖ್ಯಮಂತ್ರಿ ಜೆ. ಹೆಚ್. ಪಟೇಲರು ಯಾರೋ ಮಠಾಧೀಶರ ಮಾತು ಕೇಳಿ " ಮಾತೆ ಮಹಾದೇವಿಯವರನ್ನು ಜೈಲಿಗೆ ಹಾಕಿಸುತ್ತೇನೆ " ಎಂದು ಚೀರಾಡಿದರು. ಏನು ಮಾಡಿದರು ? ತೂಕ ತಪ್ಪಿದ ಮಾತುಗಳನ್ನು ಆಡುತ್ತಿದ್ದ ಜೆ. ಹೆಚ್. ಪಟೇಲ್ ಅವರು, ಈಗ ಆಡುತ್ತಿರುವ ಭೀಮಣ್ಣ ಖಂಡ್ರೆ, ಚಂದ್ರಕಾಂತ ಬೆಲ್ಲದ, ಜಗದೀಶ ಶೆಟ್ಟರ್ ಇಂಥವರ ಮಾತುಗಳು ನ್ಯಾಯಾಲಯದ ಆದೇಶಗಳಲ್ಲ.

ಬೃಹನ್ಮಠದ ಶ್ರೀಗಳಿಗಂತೂ ಸಂವಿಧಾನದ ಜ್ಞಾನವಿಲ್ಲ ; ದುಡ್ಡು ಸುರಿದು ಎಲ್ಲವನ್ನು ಕೊಳ್ಳಬಲ್ಲೆ ಎಂಬ ಪ್ರಚಂಡ ಧೈರ್ಯದಿಂದ ಸಾಗುತ್ತಿದ್ದಾರೆ. ದೀರ್ಘಕಾಲದ ರಾಜಕಾರಣ ಮಾಡಿದ ಭೀಮಣ್ಣ ಖಂಡ್ರೆ, ಅಂಥವರಿಗಾದರೂ ಬುದ್ಧಿ ಬೇಡವೆ ? ದ್ವೇಷ-ಆಕ್ರೋಶಗಳಿಂದ ಪ್ರೇರಿತರಾಗಿ ಹುಚ್ಚುಚ್ಚಾರ ಹೇಳಿಕೆ ನೀಡುತ್ತ ತಮ್ಮ ಅಜ್ಞಾನವನ್ನು ಪ್ರದರ್ಶಿಸಿಕೊಳ್ಳುತ್ತಿದ್ದಾರೆ.

ಅದಿರಲಿ, ಜೈಲ್ ಎಂದರೆ ನೀವೇನು ತಿಳಿದಿದ್ದೀರಿ ? ಬೀದರದಲ್ಲಿ ಕಾರ್ಯಕ್ರಮ ನಡೆಯುವಾಗ ಸಬ್ ಜೈಲ್‌ದಲ್ಲಿ ಒಂದು ದಿನ ಪ್ರವಚನವನ್ನು ಅಲ್ಲಿಯ ಅಧಿಕಾರಿಗಳು ಇಟ್ಟುಕೊಂಡರು. ಧಾರವಾಡದಲ್ಲಿ ಗಂಗಾ ಮಾತಾಜಿಯವರನ್ನು ಆಹ್ವಾನಿಸಿದಾಗ ಸುಮಾರು ಒಂದೂವರೆ ತಾಸು ಖೈದಿಗಳು ಪ್ರವಚನವನ್ನು ತನ್ಮಯರಾಗಿ ಕೇಳಿದ್ದು ನೋಡಿ ಅಧಿಕಾರಿಗಳು ಬೆರಗಾದರಂತೆ. ನಾನು ಬೀದರದಲ್ಲಿ ಹೇಳಿದೆ, "ಇದು (ಜೇಲ್)ಜಗತ್ತಿನಲ್ಲೇ ಪವಿತ್ರವಾದ ಜಾಗ. ಏಕೆಂದರೆ ಇಲ್ಲಿ ಪಾಪ ಮಾಡಲು ಅವಕಾಶವೇ ಇಲ್ಲ. ಹೊರಜಗತ್ತಿನಲ್ಲಿ ಮನುಷ್ಯ ನಾನು ಒಳ್ಳೆಯವನಾಗಿ ಬದುಕಲು ಬಿಡಿ ಎಂದರೂ ಬಿಡಲಾರದಷ್ಟು ಕೊಳಕು ತುಂಬಿದೆ. ಇಲ್ಲಿ ಪಾಪ ಮಾಡಬೇಕೆಂದರೂ ಮಾಡಲಾಗದ ಕಾವಲು ಇದೆ. ನಿಮ್ಮಲ್ಲಿ ಕೆಲವರು ತಪ್ಪು

ಮಾಡಿ ಶಿಕ್ಷೆ ಅನುಭವಿಸುತ್ತಿರಬಹುದು. ಕೆಲವೊಮ್ಮೆ ನಿರಪರಾಧಿಗಳೂ ಶಿಕ್ಷೆ ಅನುಭವಿಸುವಂತಾಗಿರಬಹುದು. ಆದರೆ, ಹೇಗೆ ಚಿಟ್ಟೆಯು ತನ್ನ ಕೋಶಾವಸ್ಥೆ (Pupal Stage)ಯನ್ನು ಸಾಧನವಾಗಿ ಮಾಡಿಕೊಂಡು ಪೂರ್ಣ ಪ್ರಮಾಣದ ಸುಂದರ ಚಿಟ್ಟೆಯಾಗಿ ಹೊರಬರುತ್ತದೋ ಹಾಗೆ ನೀವು ಈ ಜೈಲಿನ ವಾಸವನ್ನು ಒಂದು ಸಾಧನವಾಗಿ ಬಳಸಿಕೊಂಡು ಉತ್ತಮ ನಾಗರಿಕರಾಗಿ ವ್ಯಕ್ತಿತ್ವ ರೂಪಿಸಿಕೊಂಡು ಹೊರಹೋಗಬೇಕು. ಕೀಳರಿಮೆಯಿಂದ ಕೊರಗಬೇಡಿ.

ಚಿತ್ರದುರ್ಗದ ಶ್ರೀಗಳು ನನ್ನ ಪ್ರವಚನ ಆಗಲಾರದಂತೆ ತಡೆಯುವುದಾಗಿ ಭೀಷ್ಮ ಪ್ರತಿಜ್ಞೆ ಮಾಡಿದ್ದಾರೆ. ಜೈಲಿನಲ್ಲಿ ಪ್ರವಚನ ಮಾಡುವುದನ್ನು ಅವರು ಅಲ್ಲಿಗೆ ಗೂಂಡಾಗಳನ್ನು ಕಳಿಸಿ ತಡೆಯಲಾರರು. ಮತ್ತು ನಮ್ಮ ಪ್ರವಚನ ಆಗ ತೀರಾ ಅಗತ್ಯವಿರುವ ಖೈದಿಗಳಿಗೆ ಲಭ್ಯವಾಗುವ ಮಹದುಪಕಾರವಾಗುತ್ತದೆ. ಇನ್ನು ನನ್ನ ವೈಯಕ್ತಿಕ ದೃಷ್ಟಿಯಿಂದ ಹೇಳುವುದಾದರೆ ಅಭಿಮಾನಿಗಳ ಫೋನ್ ಕಾಟವಿಲ್ಲದೆ ಯಾವುದಾದರೊಂದು ಉದ್ಗ್ರಂಥ ಬರೆಯಬಹುದು. ಶ್ರೀ ಅರವಿಂದರು, ಮಹಾತ್ಮಾ ಗಾಂಧೀಜಿ, ನೆಹರೂಜಿ, ವೀರ ಸಾವರ್ಕರ್, ನೆಲ್ಸನ್ ಮಂಡೇಲಾ ಮುಂತಾದವರು ಎಂತೆಂತಹ ಕೃತಿಗಳನ್ನು ಜೈಲಲ್ಲಿದ್ದು ರಚಿಸಿದರಲ್ಲವೆ ? ಆದ್ದರಿಂದ ನಮ್ಮಿಂದ ಇನ್ನೂ ಹೆಚ್ಚಿನ ಸಾಹಿತ್ಯ ಕೃತಿಗಳನ್ನು ಹೊರತರಬೇಕೆಂಬ ಉದಾತ್ತ ಉದ್ದೇಶ ಬೃಹನ್ಮಠದ ಶ್ರೀಗಳಿಗೆ ಇದ್ದರೆ ಈ ಬಗ್ಗೆ ತೀವ್ರವಾಗಿ ಪ್ರಯತ್ನಿಸಲಿ. ಬೃಹನ್ಮಠದಿಂದ ಮಾಡಿದ ಪ್ರಾಚ್ಯವಸ್ತು ಕಳ್ಳ ಸಾಗಾಣಿಕೆಯಂತಹ ಅಪರಾಧವಲ್ಲ ಸೃಷ್ಟಿಕರ್ತ ಲಿಂಗದೇವನ ಮಹಿಮೆಯನ್ನು ಮೆರೆಸುವಂತಹುದು.

ಆದ್ದರಿಂದ ದುರ್ಜನರ ಹುಸಿ ಬೆದರಿಕೆಗಳಿಗಾಗಿ ಕಣ್ಣೀರು ಹಾಕುವ ದುರ್ಬಲರಾಗಬೇಡಿರಿ ಎಂದು ನಮ್ಮವರಾದ ನಿಮಗೆ ನಮ್ಮ ಹಿತವಚನ.

ಬಸವ ಪ್ರಕಾಶ್ ನಿರಂಜನ, ಅಥಣಿ.- ಹಿಂದಿನ ಕಾಲದಲ್ಲಿ ರಾಜರಿಗೆ ಮತ್ತು ರಾಜಗುರುಗಳಿಗೆ ಇದ್ದ ಸಂಬಂಧಕ್ಕೂ ಇಂದು ಮಠಾಧೀಶರಿಗೆ ಮತ್ತು ರಾಜಕಾರಣಿಗಳಿಗೆ ಇರುವ ಸಂಬಂಧಕ್ಕೂ ಏನಾದರೂ ವ್ಯತ್ಯಾಸವಿದೆಯೆ ?


★ ಆಗ ನಾಯಿಯು ಬಾಲವನ್ನು ಅಲ್ಲಾಡಿಸುವಂತಿದ್ದರೆ ಈಗ ಬಾಲವೇ ನಾಯಿಯನ್ನು ಅಲ್ಲಾಡಿಸುವಂತಿದೆ. ಆಗ ರಾಜಗುರುಗಳು ಹೇಳಿದ್ದನ್ನು ರಾಜರು ವಿಧೇಯತೆಯಿಂದ ಪಾಲಿಸುತ್ತಿದ್ದರು. ಈಗ ರಾಜಕಾರಣಿಗಳು ಹೇಳಿದ ಆಜ್ಞೆಯನ್ನು ಗುರುಗಳು ವಿಧೇಯತೆಯಿಂದ ಪಾಲಿಸುತ್ತಾರೆ. ನೀರು ಮುಳುಗಲು ನಡೆಯಿರಿ ಎಂದು ರಾಜಕಾರಣಿಗಳು ನುಡಿದರೆ ಪಂಚೆ ಎತ್ತಿಕೊಂಡು ಸಿದ್ಧರಾಗಿರುತ್ತಾರೆ. ಸ್ವಾತಂತ್ರ್ಯದ ಸಂತೋಷದಿಂದ ವಂಚಿತರಾದ ಇಂದಿನ ರಾಜ(ಕೀಯ) ಗುರುಗಳನ್ನು ನೋಡಿದಾಗ ಅಯ್ಯೋ ಎನಿಸುತ್ತಿದೆ. ಅಂದು ಗುರುಗಳ ದರ್ಶನಕ್ಕಾಗಿ ರಾಜರು ಮಾಲೆ ಹಿಡಿದು ಕಾಯುತ್ತಿದ್ದರೆ ಇಂದು ರಾಜಕಾರಣಿಗಳ ದರ್ಶನಭಾಗ್ಯಕ್ಕಾಗಿ ಗುರುಗಳು ಮಾಲೆ ಹಿಡಿದು ಕಾಯುತ್ತಾರೆ. ಅಷ್ಟೆ ವ್ಯತ್ಯಾಸ.

ಪ್ರಕಾಶ್ ಯಡವಟ್ಟಿ, ಧಾರವಾಡ.- ಪೂಜ್ಯ ಗಂಗಾ ಮಾತಾಜಿ ಸುಮಾರು 55 ದಿವಸ ಧಾರವಾಡದಲ್ಲಿ ಪ್ರವಚನ ಮಾಡಿದರು; ನೀವು 6 ದಿವಸ ಬಂದಿದ್ದೀರಿ. ಆದರೆ ಒಂದು ದಿನವೂ ಬಹಿರಂಗವಾಗಿ ಪ್ರವಚನಗಳಲ್ಲಿ ಚಿತ್ರದುರ್ಗದ ಬೃಹನ್ಮಠಧವರನ್ನಾಗಲೀ, ಬೇರೆ ಸ್ವಾಮಿಗಳನ್ನಾಗಲೀ ಟೀಕಿಸಲಿಲ್ಲ. ಅವರು 5 ದಿವಸಗಳ ಕಾಲ ಒಂದು ಕಾರ್ಯಕ್ರಮ ನಡೆಸಿದರು. ಭಾಷಣಗಳ ತುಂಬೆಲ್ಲ ನಿಮ್ಮ ಅವಹೇಳನವೇ ನಡೆಯುತ್ತಿತ್ತು. ನಮಗೆಲ್ಲ ಸುಗಂಧಪೂರ್ಣ ವನದಲ್ಲಿ ಹಾಯ್ದುಬಂದು ನಂತರ ಕೊಚ್ಚೆ ಗುಂಡಿಯ ಪಕ್ಕ ನಡೆದಾಡಿದ ಅನುಭವವಾದಂತಾಯಿತು. ಐದು ದಿನಗಳಲ್ಲಿ ನಾನು ಕಂಡುಕೊಂಡಿದ್ದೇನೆಂದರೆ- ಈ ಹಲವು ಸ್ವಾಮಿಗಳು ಕೆಲವರನ್ನು ಹೊರತುಪಡಿಸಿದರೆ ಮಿಕ್ಕವರು ಲಿಂಗಾಯತ ಸಮಾಜದ ಆಸ್ತಿಗಳಾಗುವುದರ ಬದಲಿಗೆ ಸಮಾಜದ ಕಂಟಕಗಳಾಗಿದ್ದಾರೆ ಎನಿಸುತ್ತಿದೆ.

- 29 ನೇ ಪುಟಕ್ಕೆ ಮುಂದುವರೆದಿದೆ



ದಿ. 10-4-2001ರಂದು ಪ್ರವಚನದ ಸಮಾರೋಪ ಸಮಾರಂಭ
ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಅಭಿನಂದನೆ.
ಅಭಿನಂದನ ಪತ್ರ ಸಮರ್ಪಿಸುತ್ತಿರುವ ಶರಣ. ಈಶ್ವರಪ್ಪ ಮಲ್ಲಪ್ಪ ಸಾಣೇಕೊಪ್ಪ




ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಗೆ ಶಾಲು ಹೊದ್ದಿಸುತ್ತಿರುವ
ಶರಣ. ಶಂಕರ್ ಕರಡಿಗುಡ್ಡ



ಮಂಗಲ ಸಮಾರಂಭದಲ್ಲಿ ವಿವಿಧ ಶರಣರ ವೇಷ ಧರಿಸಿದ ಬಾಲಕ, ಬಾಲಕಿಯರು



'ಶರಣು ಬಸವಯ್ಯ' ಎಂಬ ಪ್ರಾರ್ಥನಾ ಪದ್ಯ ಅಭಿನಯಿಸಿದ
ಪ್ರತಿಭಾ ಗರಗ, ಮಮತಾ ಮುಮ್ಮಿಗಟ್ಟಿ, ಕವಿತಾ ಚಿಮ್ಮಿಹಾಳ ಎಲ್ಲರ ಮನ ಸೂರೆಗೊಂಡರು



ದಿ.9-4-2001ರಂದು ಧಾರವಾಡದ ಮುಖ್ಯ ಪೇಟೆಯಲ್ಲಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಭವ್ಯ ಮೆರವಣಿಗೆ ಸಾಗುತ್ತಿರುವುದು



ಮೆರವಣಿಗೆಯಲ್ಲಿ ಶರಣರಿಂದ ಉತ್ಸಾಹದ ಕುಣಿತ



ಗಣ ಧ್ವಜಗಳನ್ನು ಹಿಡಿದು ಶರಣೆಯರು ಉತ್ಸಾಹದಿಂದ ಮೆರವಣಿಗೆಯಲ್ಲಿ ಭಾಗವಹಿಸಿ ಪಥ ಸಂಚಲನ ಮಾಡಿದರು



ಧ್ವಜಗಳನ್ನು ಹಿಡಿದು ಪಥ ಸಂಚಲನ ಮಾಡುತ್ತಿದ್ದ ದೃಶ್ಯ ಚೇತೋಹಾರಿಯಾಗಿತ್ತು

24 ನೇ ಪುಟದಿಂದ.....

(Some Swamiji's are not the properties of our society, but the problems of our society) ನಿಮ್ಮ ಪ್ರತಿಕ್ರಿಯೆ ಏನು ?

★ 61 ದಿವಸ ಕಾಲ ಪ್ರವಚನ ಅಖಂಡವಾಗಿ ಮಾಡಿದರೂ ಇನ್ನೂ ಕೆಲವು ಮಹತ್ವದ ವಿಷಯ ಹೇಳಲು ನಮಗೆ ಸಮಯ ಸಾಕಾಗಲಿಲ್ಲ. ಅಷ್ಟು ಜ್ಞಾನವು ತುಂಬಿ ತುಳುಕುವಾಗ ಇನ್ನು ಅನ್ಯರ ನಿಂದೆಗೆ ಸಮಯ ಎಲ್ಲಿಂದ ತರುವುದು ? ಅಲ್ಲದೇ, ಜನರು ತಮ್ಮ ಅಮೂಲ್ಯ ಸಮಯ ಮೀಸಲಿಟ್ಟು ಪ್ರವಚನ ಕೇಳಲು ಜ್ಞಾನಾಕಾಂಕ್ಷೆಯಿಂದ ಬರುವರು ; ಶಾಂತಿಯನ್ನು ಅರಸಿ ಬರುವರು. ಮನಸ್ಸು-ಬುದ್ಧಿಗಳ ಕಸವನ್ನು ತೆಗೆದು ಅವರಿಗೆ ಜ್ಞಾನ-ಆನಂದ ನೀಡುವುದು. ನಮ್ಮ ಪ್ರವಚನದ ಗುರಿಯೇ ವಿನಾ ಅನ್ಯರನ್ನು ನಿಂದೆ ಮಾಡಿ ಜನರ ಮನ ಬುದ್ಧಿಗಳಿಗೆ ಕಸತುಂಬಿ ಕಳಿಸುವುದಿಲ್ಲ. ಪಾಪ ! ಬೃಹನ್ಮಠದ ಶ್ರೀಗಳು ಶರಣರ ಸಂಸ್ಮರಣೆ ಮಾಡುವ ಬದಲು ಎಲ್ಲಾ ವೇದಿಕೆಗಳಲ್ಲೂ ನಮ್ಮದೇ ಸ್ಮರಣೆ ಮಾಡುತ್ತಿದ್ದಾರೆ. ಹೀಗಾಗಿ ನಿಮ್ಮ ಅಭಿಪ್ರಾಯವು ಎಲ್ಲ ವಿಧದಲ್ಲೂ ಸರಿ ಇದೆ ಎನ್ನಿಸುತ್ತಿದೆ.

ಪ್ರಭು ಬಂದಾ ನಮ್ಮ ಪ್ರಭು ಬಂದ

ಪ್ರಭು ಬಂದಾನಮ್ಮ ಧರೆಗೆ ಪ್ರಭುವಿ ಬಂದಾ ||ಪ||
ಜಂಗಮ ಜ್ಯೋತಿ ಬಂದ, ವ್ಯೋಮಕಾಯ ಸಿದ್ಧ ಬಂದ
ಅಕಾಯ ಚರಿತ ಬಂದ, ಇಲ್ಲದಂತೆ ಇರಲು ಬಂದ ||ಅ.ಪ||
ಗುರುಬಸವ (ನ)ಮಹಿಮೆಯ ಸಾರಲು ಬಂದ
ಗುರುಬಸವ ತತ್ತ್ವವ, ಪಸರಿಸ ಬಂದ
ಗುರುವಿನ ಗುರುವು ಬಸವ ಮಹಾಗುರುವೆಂದ
ದೇವನ ಪ್ರತಿರೂಪ ಬಸವ ಜಗದ್ಗುರುವೆಂದ ||1||
ಬಳ್ಳಿಗಾವಿಯಲಿ ರವಿಯಾಗಿ ಉದಿಸಿ
ಅಲ್ಲಮನೆಂಬ ಹೆಸರನು ಧರಿಸಿ
ಮಾಯೆಯ ಗೆಲಿದು ಪ್ರಭುನಾಮ ಗಳಿಸಿ
ಗುರುವನು ಅರಸಿ ಎಲ್ಲೆಡೆ ಚರಿಸಿ ||2||
ಅನಿಮಿಷ ಗುರುವನು ಗುಹೆಯಲಿ ಕಂಡು
ಕರದಿಷ್ಟಲಿಂಗವ ಅವತರಿಸಿಕೊಂಡು
ಗುರುಬಸವ ಮಿಲನಕೆ ಕಾತರಗೊಂಡು
ಬಸವ ಕಲ್ಯಾಣವ ಗುರಿ ಮಾಡಿಕೊಂಡು ||3||
ಸಿದ್ಧರಾಮರ ಕೂಡಿ ಕಲ್ಯಾಣಕೆ ಬಂದ
ಬಸವಗುರು ನಿರ್ಮಿತ ಶೂನ್ಯ ಪೀಠವನೇರ್ದ
ಬಸವಾಗಸದಲಿ ರವಿಯಾಗಿ ಬೆಳಗಿ,
ಮಹಾದೇವಿಯಕ್ಕನ ಜಗದಕ್ಕಳೆಂದ ||4||
ಅನುಭವ ಮಂಟಪದ ಬೆಳಕಾಗಿ ನಿಂದ
ಕದಳಿಯ ಬನದಲಿ ಯೋಗದಿ ಮೆರೆದ
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವಲಿ
ಉರಿಯುಂಡ ಕರ್ಪೂರದೋಲ್ ಒಂದಾಗಿ ಬೆರೆದ. ||5||

–'ಬಸವ ಕಂದ' ಶರಣೆ. ಸರೋಜಮ್ಮ ನಾಗರಾಜು, ಮೈಸೂರು.

ಧಾರವಾಡ ನಗರದಲ್ಲಿ ನಡೆದ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಅಪೂರ್ವ ಪ್ರವಚನ

ವರದಿ : ಶಿವಕುಮಾರ ಡಾಕುಳಗೆ

ಧಾರಾ ನಗರಿ ಧಾರವಾಡ. ಮಲೆನಾಡಿನ ಸೆರಗಿನಲ್ಲಿರುವ ಇಲ್ಲಿಯ ನೆಲ, ಜಲ, ಗಾಳಿ ಎಲ್ಲಾ ಆಪ್ಯಾಯಮಾನ. ನಗರದ ಮಧ್ಯಭಾಗದಲ್ಲಿರುವ ಕಡಪಾ ಮೈದಾನದಲ್ಲಿ ದಿ.9-2-2001ರಂದು. ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ಕಾರ್ಯಕ್ರಮವು ಆರಂಭವಾಯಿತು. ದಿನದಿಂದ ದಿನಕ್ಕೆ ಹೆಚ್ಚು ಜನರನ್ನು ಆಕರ್ಷಿಸಿತು. ಪರೀಕ್ಷೆಗಳು ನಡೆಯುವ ಸಮಯ ; ದೂರದರ್ಶನದ ಆಕರ್ಷಣೆ ವಿಪರೀತವಾಗಿರುವ ಈ ದಿನಮಾನದಲ್ಲಿಯೂ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದುದು ಒಂದು ವಿಶೇಷವಾದರೆ ಅತ್ಯಂತ ಪ್ರೌಢರಾದ ತತ್ತ್ವನಿಷ್ಠೆಯ ಶರಣ ಬಂಧುಗಳು ಸಮಾವೇಶವಾಗುತ್ತಿದ್ದುದು ಇನ್ನೊಂದು ವಿಶೇಷ. ಶ್ರೋತೃಗಳ ಪ್ರೌಢತೆಯಿಂದ ಸ್ಫೂರ್ತಿಗೊಂಡು ಅಷ್ಟು ಚೆನ್ನಾಗಿ ಪ್ರವಚನವು ನಿರರ್ಗಳವಾಗಿ ಹರಿಯುತ್ತಿತ್ತೋ ಅಥವಾ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನದ ವಾಗ್ಧಾರೆಯಿಂದ ಪುಳಕಿತರಾಗಿ ಜನರು ಸೇರುತ್ತಿದ್ದರೋ ಈ ಪ್ರವಚನವು ಬಹಳ ಮೆಚ್ಚುಗೆ ಪಡೆಯಿತು. 1969ರಲ್ಲಿ ಮೊಟ್ಟ ಮೊದಲ ಪ್ರವಚನವನ್ನು ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರಿಂದ ಕೇಳಿದ ಧಾರವಾಡದ ಜನರು ಎರಡು ಸಲ ಪೂಜ್ಯ ಅಪ್ಪಾಜಿಯವರ ಪ್ರವಚನ, ಒಮ್ಮೆ ಪೂಜ್ಯ ಶ್ರೀ ಮಾತಾಜಿಯವರ ಪ್ರವಚನ ಕೇಳಿದ್ದು, ನಾಲ್ಕನೆಯದಾಗಿ ಪೂಜ್ಯ ಮಾತೆ ಗಂಗಾದೇವಿಯವರ 60 ದಿವಸಗಳ ಅಖಂಡ ಪ್ರವಚನ ಕೇಳುವ ಭಾಗ್ಯ ಪಡೆದರು. ಶಿವರಾತ್ರಿಯ ಗಣಮೇಳ, ಪೂಜ್ಯ ಮಾತಾಜಿಯವರ ವರ್ಧಂತಿ ಅಲ್ಲಮಪ್ರಭು ಜಯಂತಿ ಸಾಲುಸಾಲಾಗಿ ಒದಗಿ ಬಂದವು. ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿಯನ್ನು ವಿಶೇಷವಾಗಿ ಆಚರಿಸುವ ಯೋಜನೆ ರೂಪಿಸಲಾಯಿತು. ತನ್ನಿಮಿತ್ತ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ.5-4-2001ರಂದು ಆಗಮಿಸಿ ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಿ, ದಿ.5,6 ಮತ್ತು 7 ರಂದು ವಿಶೇಷ ಪ್ರವಚನವನ್ನು ನೀಡಿದರು.

ಅಕ್ಕಮಹಾದೇವಿ ಅನುಭಾವ ಪೀಠಾರೋಹಣದ 32ನೆಯ ವಾರ್ಷಿಕೋತ್ಸವ

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯು ವಚನ ವಾಙ್ಮಯದ ಕವಿಕೋಗಿಲೆ, ಅನುಭಾವದ ಮಯೂರ ; ಅಪ್ರತಿಮ ನಿಲುವಿನ ವೈರಾಗ್ಯಮೂರ್ತಿ, ದಾರ್ಶನಿಕ ದೇವಗಂಗೆ. ಇಂತಹ ಅಕ್ಕಮಹಾದೇವಿಯ ಹೆಸರಿನಲ್ಲಿ ೧೯೬೮ ರ ದವನದ ಹುಣ್ಣಿಮೆಯಂದು ಆಶ್ರಮವು, ಧಾರವಾಡ ನಗರದ ಉಳವಿ ರಸ್ತೆಯಲ್ಲಿ, ರೇಲ್ವೆಗೇಟ್ ಸಮೀಪದ ಎತ್ತರವಾದ, ವಿಸ್ತಾರವಾದ ಸ್ಥಳದಲ್ಲಿ ರೂಪುಗೊಂಡಿತು. ಪರಮ ಪೂಜ್ಯರಾದ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ದಿವ್ಯ ಅನುಗ್ರಹ, ಆಶ್ರಯದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಬಸವ-ಸಂಕಲ್ಪಿತ ಪ್ರೇರಣೆಯಂತೆ ದಿನಾಂಕ 21-4-1970 ರಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಪ್ರಪ್ರಥಮ ಮಹಿಳಾ ಗುರುಪೀಠವು ಸ್ಥಾಪನೆಗೊಂಡಿತು. ಧರ್ಮಪಿತ ಮಂತ್ರಪುರುಷ ಬಸವಣ್ಣನವರ ಧಾರ್ಮಿಕ ಸಂವಿಧಾನದಂತೆ ಸ್ತ್ರೀಯು ಪುರುಷನಂತೆ ಸಮಾನವಾದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಕ್ಕುಗಳನ್ನು ಹೊಂದಿದ್ದರೂ ಮಹಿಳೆಯರ ಗುರು ಪೀಠದ ಪರಂಪರೆಯು ಸಾಗಿ ಬರಲಿಲ್ಲ. ಈ ಕೊರತೆಯನ್ನು ತುಂಬಲು "ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ"ವು ಸ್ಥಾಪನೆಗೊಂಡುದು ಜಗತ್ತಿನಲ್ಲಿಯೇ ಅಪೂರ್ವ ಘಟನೆ.

ಪ್ರಥಮ ಪೀಠಾಧಿಕಾರಿಣಿಯಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಜಂಗಮ ದೀಕ್ಷೆ ಪಡೆದ ೧೯೬೬ ರಿಂದಲೂ ಅವಿರತವಾಗಿ ಸಂಚರಿಸುತ್ತ, ನಾಡಿನ ಉದ್ದಗಲಕ್ಕೂ ಜಂಗಮ ಮೂರ್ತಿಯಾಗಿ ಧರ್ಮಪ್ರಚಾರ ಮಾಡುತ್ತ ಅಪೂರ್ವವಾಗ್ಮಿಯಾಗಿ, ಉತ್ತುಂಗ ಸಾಹಿತಿಯಾಗಿ, ಬಸವ ತತ್ತ್ವ ಪ್ರಚಾರ ಮಾಡುತ್ತಲಿದ್ದಾರೆ. ೧೯೭೬ ರಲ್ಲಿ ಇಂಗ್ಲೆಂಡಿಗೆ, ೧೯೮೧ ರಲ್ಲಿ ಅಮೇರಿಕಾ, ಕೆನಡಾಗಳಿಗೆ ಹೋಗಿ ಭಾರತೀಯ ಪರಂಪರೆಯ ಹಿರಿಮೆ, ಬಸವ ಧರ್ಮದ ವೈಶಿಷ್ಟ್ಯ ಸಾರಿ ಬಂದಿದ್ದಾರೆ. ಕೂಡಲ ಸಂಗಮದಲ್ಲಿ ಸ್ಥಾಪನೆಗೊಂಡ ಬಸವ ಧರ್ಮದ ಮಹಾಜಗದ್ಗುರು ಪೀಠದ ಅಧಿಕಾರಿಗಳಾಗಿದ್ದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ದಿ. ೩೦-೦೬-೧೯೯೫ ರಂದು ಲಿಂಗೈಕ್ಯರಾದ ಮೇಲೆ ಪೀಠಕ್ಕೆ ಮಾತೆ ಮಹಾದೇವಿಯವರು ದ್ವಿತೀಯ ಅಧಿಕಾರಿಗಳಾಗಿದ್ದಾರೆ. ಇದರಿಂದ ತೆರವಾದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಎರಡನೆಯ ಪೀಠಾಧಿಕಾರಿಣಿಯಾಗಿ ಸೋಮವಾರ ದಿ. ೧೫-೪-೧೯೯೬ ರಂದು ಪೀಠಾರೋಹಣ ಮಾಡಿದ್ದಾರೆ. ಇಂತಹ ಮಹಿಳಾ ಗುರು ಪೀಠದ 32ನೆಯ ಪೀಠಾರೋಹಣ ಕಾರ್ಯಕ್ರಮವನ್ನು ಇದೇ ದಿ. 8-4-2001ರಂದು ವಿರ್ವಡಿಸಲಾಗಿತ್ತು.

ಅಕ್ಕಮಹಾದೇವಿ ಮಠದ ಆವರಣದಲ್ಲಿ "ಬಸವ ಮಂಟಪ" ಎಂಬ ವಿಶಾಲವಾದ ಹಾಲ್ ಅನ್ನು ನಿರ್ಮಿಸಲಾಗಿದ್ದು ದಿ.8ರಂದು ಬಸವೇಶ್ವರ ಪೂಜಾವ್ರತದೊಡನೆ ಅದನ್ನು ದೈವೀಕರಿಸಲಾಯಿತು. ಮಾಲಾರ್ಪಣೆ, ಆರಂತಿ ಜಯಘೋಷಗಳೊಡನೆ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರನ್ನು ಬರಮಾಡಿಕೊಳ್ಳಲಾಯಿತು. ಭಾನುವಾರವಾದ್ದರಿಂದ ಶರಣ-ಸಂಗಮ ಸಾಮೂಹಿಕ ಪ್ರಾರ್ಥನೆಯನ್ನು ನೆರವೇರಿಸಲಾಯಿತು. ಶರಣ ಕುಮಾರಿಯರಾದ ಮಮತಾ ಮುಮ್ಮಿಗಟ್ಟಿ, ಪ್ರತಿಭಾ ಗರಗದ, ಕವಿತಾ ಜಮ್ಮಿಹಾಳ ಶಾಸ್ತ್ರೀಯ ನರ್ತನದ ಮೂಲಕ "ಶರಣು ಬಸವಯ್ಯ" ಎಂಬ ಚೆನ್ನಬಸವಣ್ಣನವರ ಗೀತೆಯನ್ನು ಅಭಿನಯಿಸಿ ಆದಿ ಪ್ರಮಥರ ಸ್ತೋತ್ರ ಮಾಡಿದರು. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಗಣಧ್ವಜಾರೋಹಣ ಮಾಡಿದರು. ಅಕ್ಕಮಹಾದೇವಿ ಜಯಂತಿ ನಿಮಿತ್ತ ತೊಟ್ಟಿಲಿನಲ್ಲಿ ಅಕ್ಕನ ಭಾವಚಿತ್ರವಿಟ್ಟು ತೂಗಿ, ಆರತಿಯನ್ನು ಮಾಡಲಾಯಿತು. ಪೂಜ್ಯ ಗಂಗಾ ಮಾತಾಜಿಯವರನ್ನು ಗಣನಾಯಕಿಯರಾದ ಬೆಂಗಳೂರಿನ ಶರಣೆ. ದೇವಿಕಾ ಶರಣಪ್ಪ ಮತ್ತು ಈಚಲಕರಂಜಿಯ ಶರಣೆ ಮಾಲೂತಾಯಿ ಚಂದ್ರಕಾಂತ ಸ್ವಾಮಿ ಕೈಹಿಡಿದು ಪೀಠಾರೋಹಣ ಮಾಡಿಸಿದರು. ಅಂದಿನ ಪ್ರಸಾದ ದಾಸೋಹಿಗಳಾದ ಶರಣೆ. ಶಾರದಾ ಬಸನಗೌಡ ಬಲ್ಲಟ್ಟಿಯವರು ಪಾದಪೂಜೆ ನೆರವೇರಿಸಿದರು. ಶರಣ ಬಂಧುಗಳೆಲ್ಲ ಪುಷ್ಪವೃಷ್ಟಿ ಮಾಡಿ, ಮಾಲಾರ್ಪಣೆ ಮಾಡಿ, ಆರತಿ ಮಾಡಿದರು. ಭಕ್ತಿಪೂರ್ವಕ ಕೊಡುಗೆಗಳನ್ನು ನೀಡಿದರು.

ಪೂಜ್ಯ ಮಾತಾಜಿಯವರು ಜಗನ್ಮಾತಾ ಅಕ್ಕಮಹಾದೇವಿ ಪೀಠವನ್ನು ಸ್ಥಾಪಿಸಿದ ಉದ್ದೇಶ, ಅದು ನಡೆದು ಬಂದ ದಾರಿ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಪೀಠಾರೋಹಣ ಸಂದೇಶ ನೀಡಿದರು.

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ ;
ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು
ಸಲಹಿದರೆನ್ನ ; ವಿವಾಹವ ಮಾಡಿದಿರಿ
ಸಯವಪ್ಪ ಗಂಡಂಗೆ ಕೊಟ್ಟಿರಿ

ಕೊಟ್ಟ ಮನೆಗೆ ಕಳುಪಲೆಂದು ಅಸಂಖ್ಯಾತರ್ಲೆರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ ;
ಚನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲು ತಾರೆನು
ಅವಧರಿಸಿ ನಿಮ್ಮಡಿಗಳೆಲ್ಲರೂ ಮರಳಿ
ಬಿಜಯಂಗೈವುದು ; ಶರಣಾರ್ಥಿ !

ಜಗನ್ಮಾತಾ ಅಕ್ಕಮಹಾದೇವಿಯ ವಚನವನ್ನು ಹೇಳಿ, ಧಾರವಾಡ-ಹುಬ್ಬಳ್ಳಿಯ ಜನರು ತೋರಿಸಿದ ಭಕ್ತಿ-ಪ್ರೀತಿ ಅನುಪಮ. ನಾನು ನಿಮಗೆ ಮೊಮ್ಮಗಳಿದ್ದಂತೆ. ಪೂಜ್ಯ ಅಪ್ಪಾಜಿಯವರು, ನಂತರ ಪೂಜ್ಯ ಮಾತಾಜಿಯವರು ಗಳಿಸಿದ ಜ್ಞಾನ ಸಂಪತ್ತು ಮತ್ತು ಭಕ್ತರೆಂಬ ಜಂಗಮ ಸಂಪತ್ತನ್ನು ಪಡೆದು ನಾನು ಧನ್ಯಳಾಗಿದ್ದೇನೆ. ನನ್ನ ಗುರುದ್ವಯರಿಗೆ, ನನ್ನನ್ನು ಪೋಷಿಸುತ್ತಿರುವ ಸಮಾಜಕ್ಕೆ, ಧರ್ಮಗುರು ಬಸವಣ್ಣನವರಿಗೆ ಕೀರ್ತಿ ಎಂಬ ಹೂವನ್ನು ತರುತ್ತೇನೆಯೇ ವಿನಾ ಅಪಕೀರ್ತಿ ಎಂಬ ಹುಲ್ಲನ್ನಲ್ಲ'' ಎಂದು ಪ್ರತಿಜ್ಞೆ ಮಾಡಿದರು.

ಸಂಜೆ ಜಗನ್ಮಾತಾ ಅಕ್ಕಮಹಾದೇವಿ ಪೀಠ ಸ್ಥಾಪನೆಯ 32ನೆಯ ವಾರ್ಷಿಕೋತ್ಸವವನ್ನು, ಅಕ್ಕಮಹಾದೇವಿ ಜಯಂತಿಯನ್ನು ಆಚರಿಸಲಾಯಿತು.

ಮೆರವಣಿಗೆ, ಪಥ ಸಂಚಲನ

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಭವ್ಯ ಮೆರವಣಿಗೆ ಮಾಡುವ ಉತ್ಸಾಹ ರಾಷ್ಟ್ರೀಯ ಬಸವ ದಳಗಳವರದ್ದು. ಧಾರಾ ನಗರಿ ಧಾರವಾಡದಲ್ಲಿ ದಿ.8ನೇ ತಾರೀಖು ಸಂಜೆಯಿಂದಲೇ ಮಳೆರಾಯನ ಆರ್ಭಟ.

ದಿ.9-4-2001ರಂದು ಸಂಜೆ 4 ಗಂಟೆಗೆ ಗುಡುಗು, ಮಿಂಚು, ಸಿಡಿಲಿನಿಂದ ಕೂಡಿದ ಆಲಿಕಲ್ಲು ಮಳೆ. ಮೆರವಣಿಗೆಗೆ ಉತ್ಸಾಹದಿಂದ ಸಿದ್ಧವಾಗಿದ್ದ ಕಾರ್ಯಕರ್ತರಿಗೆ ಆತಂಕ. ಧಾರವಾಡದ ಒಂದು ತುದಿಯಲ್ಲಿರುವ ಅಕ್ಕಮಹಾದೇವಿ ಆಶ್ರಮದ ಸುತ್ತ ವಿಪರೀತ ಮಳೆ ; ಧಾರವಾಡದ ಇನ್ನೊಂದು ತುದಿಯಲ್ಲಿರುವ ಮುರುಘಾಮಠದ ಬಳಿಯೂ ಭಾರಿ ಮಳೆ. ಆದರೆ ಮೆರವಣಿಗೆ ನಡೆಯುವ ಮುಖ್ಯ ಪೇಟೆಯಲ್ಲಿ ಹೂ ಮಳೆ. ಮಳೆಯ ಮೋಡ ಮೇಲೆ ತೂಗುತ್ತಿದೆ. ಜನರು ಹೇಗೆ ಬರುತ್ತಾರೆ ? ಎಂಬ ಸಂದೇಹವನ್ನು ಹುಸಿಮಾಡುವಂತೆ ಐದುಗಂಟೆಗೆಲ್ಲ ಸಾವಿರಾರು ಜನರು ಸಮಾವೇಶವಾದರು ಆ ಮಳೆ ಹನಿಹನಿಯಾಗಿ ಬೀಳುತ್ತಿದ್ದರೆ ಅಪ್ಪ ಬಸವಣ್ಣನವರು ಆನಂದದಿಂದ ಪುಷ್ಪವೃಷ್ಟಿ ಮಾಡುತ್ತಿದ್ದಾರೇನೋ ಎನ್ನಿಸಿತಂತೆ. ಕೊಡೆ ಹಿಡಿದೇ ಜನರು ಸಂಜೆ 5 ರಿಂದ 7ರವರೆಗೆ ಪಥ ಸಂಚಲನ ಮಾಡಿದರು. ಜಯಘೋಷ ಮಾಡಿದರು, ಸುವಾಸನೆಯ ಮಲ್ಲಿಗೆ ಹೂವನ್ನು ತಂದು 'ದಾರಿಯಲ್ಲಿ ಗಂಗಾ ಮಾತಾಜಿಯವರ ಮೇಲೆ ''ಚೆಲ್ಲಿದರು ಮಲ್ಲಿಗೆಯ'' ಎಂದು ಎರಚುತ್ತಿದ್ದರು. ಮುದುಕರು, ಸ್ಥೂಲ ದೇಹಿಗಳು ಸಹ ಹೆಜ್ಜೆ ಹಾಕುತ್ತ ಬಸವಲಿಂಗ ಲಿಂಗದೇವಾ ಎಂದು ಹಾಡುತ್ತಾ ಕುಣಿಯುವುದು ಹರ್ಷೋಲ್ಲಾಸ ಉಕ್ಕಿಸುತ್ತಿತ್ತು. ಮೆರವಣಿಗೆ ಮುಗಿದು ಕಡಪಾ ಮೈದಾನಕ್ಕೆ ಜನ ಸಮೂಹ ಬಂದಾಗ ಪೂಜ್ಯ ಮಾತಾಜಿಯವರು ಆಶ್ರಮದಿಂದ ಆಗಮಿಸಿದರು. ಪೂಜ್ಯ ಮಾತಾಜಿಯವರು ಆಗಮಿಸುತ್ತಲೇ ಅವರಿಗೆ ಮಾಲಾರ್ಪಣೆ ಮಾಡಿ, ನಮಸ್ಕರಿಸಿದ ಪೂಜ್ಯ ಗಂಗಾ ಮಾತಾಜಿ ಉದ್ಗರಿಸಿದರು. ''ಇದೆಲ್ಲ ಬಸವ ಕೃಪೆ, ಎಂಥಾ ಪರಿಶುದ್ಧಾತ್ಮರಾದ ಶರಣ-ಶರಣೆಯರು. ಇವರ ಭಕ್ತಿ ಬೆಲೆಕಟ್ಟಲಾಗದ್ದು. ಇಂಥವರನ್ನು ಹಣ ಕೊಟ್ಟು ಕೊಳ್ಳಲು ಸಾಧ್ಯವೆ ? ನಾವೇ ಪುಣ್ಯವಂತರು.''

ಕಡಪಾ ಮೈದಾನದಲ್ಲಿ ನಡೆದ ಸಭೆಯಲ್ಲಿ ನೆನಹು, ಪ್ರವಚನ ಮಾಡಿ, ದಾನಿಗಳನ್ನು ಸತ್ಕರಿಸಲಾಯಿತು. ನೆರೆದ ಜನ ಸಮೂಹಕ್ಕೆ ಗಣ ಪ್ರಸಾದ (ಊಟ) ಮಾಡಿಸಲಾಯಿತು. ಶರಣ. ಸೂರ್ಯಕಾಂತ ಶೀಲವಂತರು ಅಂದು ಪ್ರಸಾದ ದಾಸೋಹ ಮಾಡಿಸಿದರು.

ಸಮಾರೋಪ ಸಮಾರಂಭ ಮತ್ತು ಅಭಿನಂದನೆ

ಮಂಗಳವಾರ ದಿನಾಂಕ 10-4-2001 ; ಅಕ್ಕಮಹಾದೇವಿ ಮಠದಲ್ಲಿ ಅಭಿನಂದನ ಸಮಾರಂಭ. ದಿನಾಲೂ ಸಂಜೆ ಮಳೆಯು ಬರುತ್ತಿದ್ದುದರಿಂದ ದಿ.9ರಂದು ಘೋಷಿಸಿ ದಿ.10ರಂದು ಮಠದ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಸವ ಮಂಟಪದಲ್ಲಿ ಕಾರ್ಯಕ್ರಮ ನಡೆಸಲಾಯಿತು. ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ಶರಣ. ಸಿದ್ದರಾಮಪ್ಪ ಪಾಟೀಲರು ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ವೀರಣ್ಣ ಕೊರ್ಲಹಳ್ಳಿ, ಕೊಪ್ಪಳ ಅವರು ಸನ್ಮಾನ ಪತ್ರವನ್ನು ವಾಚನ ಮಾಡಿದರು. ದಾನಿಗಳಾದ ಶರಣ. ಈಶ್ವರಪ್ಪ ಮಲ್ಲಪ್ಪ ಸಾಣೇಕೊಪ್ಪ ಅವರು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಗೆ ಸನ್ಮಾನ ಪತ್ರ ಸಮರ್ಪಿಸಿದರು. ಲಿಂಗಾಯತ ಧರ್ಮ ಮಹಾಸಭಾ ಧಾರವಾಡ ಜಿಲ್ಲಾಧ್ಯಕ್ಷ ಎಸ್.ಎಲ್.ಗೌಡರು ಮಾಲಾರ್ಪಣೆ ಮಾಡಿದರು ; ಶರಣ ಶಂಕರ ಕರಡಿಗುಡ್ಡ ಅವರು ಶಾಲು ಹೊದ್ದಿಸಿ ಗುರುಕಾಣಿಕೆ ಸಲ್ಲಿಸಿದರು.

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದ ಆವರಣದಲ್ಲಿ ನಿರ್ಮಾಣವಾಗುತ್ತಲಿರುವ ಬಸವ ಮಂಟಪಕ್ಕೆ ಹೆಚ್ಚಿನ ಮೊತ್ತದ ಧನ ಸಹಾಯ ಮಾಡಿರುವ ಶರಣರುಗಳಾದ

ಶರಣ. ಬಿ. ಜಿ. ಹೊಸಗೌಡರು, ಹುಬ್ಬಳ್ಳಿ
ಶರಣ. ಶಿವಣ್ಣ ಶಿರೂರು, ಧಾರವಾಡ
ಶರಣ. ದೇವೇಂದ್ರಪ್ಪ ಬಸವಂತಪ್ಪ ಇಂಗಳಳ್ಳಿ, ಧಾರವಾಡ
ಶರಣೆ. ಪಾರ್ವತಮ್ಮ ಮಲ್ಲಯ್ಯ ಪ್ರಭುಸ್ವಾಮಿ ಮಠ, ಧಾರವಾಡ
ಶರಣೆ. ಸುಮಿತ್ರಾ, ಮರಿಬಸಪ್ಪ ದನದಮನಿ, ಧಾರವಾಡ
ಶರಣೆ. ಶಾಂತಾದೇವಿ ಮಲ್ಲೇಶಪ್ಪ ಕುಸುಗಲ್, ಧಾರವಾಡ
ಶರಣ. ಈಶ್ವರಪ್ಪ ಮಲ್ಲಪ್ಪ ಸಾಣೇಕೊಪ್ಪ, ಧಾರವಾಡ
ಶರಣ. ಸೂರ್ಯಕಾಂತ್ ಶಿವರಾಯಪ್ಪ ಶೀಲವಂತರು, ಹುಬ್ಬಳ್ಳಿ
ಶರಣ. ಅಶೋಕ ಶಿವರಾಯಪ್ಪ ಸೀಲವಂತರ, ಹುಬ್ಬಳ್ಳಿ
ಶರಣೆ. ಲೀಲಾವತಿ ಕಲ್ಲಪ್ಪ ಬಾಗೇವಾಡಿ, ಧಾರವಾಡ
ಶರಣ. ವೀರಣ್ಣ ಚನ್ನಬಸಪ್ಪ ಹಳಿಯಾಳ, ನಿಗದಿ
ಶರಣೆ. ಕಲ್ಲಮ್ಮ ವಿರುಪಾಕ್ಷಗೌಡ ಪೋಲೀಸ್ ಪಾಟೀಲ್, ಧಾರವಾಡ
ಶರಣ. ವಸಂತ ಶಂಭುಲಿಂಗನಗೌಡ ಪರಪ್ಪನವರು, ಧಾರವಾಡ
ಶರಣೆ. ಮಹಾಂತವ್ವ ಗುರುಲಿಂಗಪ್ಪ ಕೋರಿ, ಧಾರವಾಡ
ಶರಣ. ಸಿದ್ಧರಾಮಪ್ಪ ಪಾಟೀಲ್, ಬೆಂಗಳೂರು
ಶರಣ. ವೀರಭದ್ರಯ್ಯ ಸಾಲೀಮಠ, ಧಾರವಾಡ

ಇವರನ್ನು ಸತ್ಕರಿಸಲಾಯಿತು. ಪ್ರಸಾದ ದಾಸೋಹಿಗಳಾದ ಸುಬ್ಬಣ್ಣ ನಂಜಪ್ಪ ಮೈಸೂರು ಅವರನ್ನು, ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಬಸಯ್ಯ ಗಣಾಚಾರಿ ಅವರನ್ನು ಸನ್ಮಾನಿಸಲಾಯಿತು. ಶರಣ ಕುಮಾರಿಯರಾದ ಮಮತಾ ಮುಮ್ಮಿಗಟ್ಟಿ ಮತ್ತು ಪ್ರತಿಭಾ ಗರಗ್ ರತ್ನ ಸಿಕ್ಕಿತಮ್ಮ ಎಂಬ ಹಾಡನ್ನು ನೃತ್ಯ ಮಾಡಿ ತೋರಿಸಿ ಎಲ್ಲರನ್ನು ಪುಳಕಿತಗೊಳಿಸಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು. ತಮ್ಮ ಅಭಿನಂದನೆಗೆ ಉತ್ತರಿಸುತ್ತ 61 ದಿವಸಗಳ ಕಾಲ ಒಂದು ದಿನವೂ ಬಿಡದೆ ಪ್ರವಚನ ಕೇಳಿದ ಧಾರವಾಡದ ಶರಣರ ಸದಭಿರುಚಿಯನ್ನು

ಕೊಂಡಾಡಿದರು. ತಮ್ಮ ಜೀವನದಲ್ಲಿಯೇ ಧಾರವಾಡದ ಪ್ರವಚನ ಸ್ಮರಣಾರ್ಹ ಪ್ರವಚನ ಎಂದು ಹೃದಯತುಂಬಿ ಹೇಳಿದರು. ನಿಜ, ಪೂಜ್ಯ ಗಂಗಾ ಮಾತಾಜಿಯವರ ಪ್ರವಚನ ಅತ್ಯಂತ ಪ್ರೌಢವಾಗಿದ್ದು ಆಳವಾದ ಪರಿಣಾಮವನ್ನು ಜನರ ಮೇಲೆ ಬೀರಿತು ; ಕಡಪಾ ಮೈದಾನವನ್ನು ಸುಕ್ಷೇತ್ರವನ್ನಾಗಿ ಮಾಡಿತ್ತು.

ದೃಷ್ಟಿಬೊಟ್ಟು

ಬಾಲಂಗೋಸಿ :

ಜಗನ್ಮಾತಾ ಅಕ್ಕಮಹಾದೇವಿ ಪೀಠದ ಆರೋಹಣ, 32ನೆಯ ವಾರ್ಷಿಕೋತ್ಸವ, ಪ್ರವಚನ ಸಮಾರೋಪ ಸಮಾರಂಭ, ಪೂಜ್ಯ ಗಂಗಾ ಮಾತಾಜಿಯವರ ಅಭಿನಂದನ ಶ್ರೀ ಮಠದಲ್ಲಿ ದಿ. 10-4-2001 ನಡೆಯುತ್ತಿದ್ದರೆ, ಕಡಪಾ ಮೈದಾನದಲ್ಲಿ ಜನರು ಇಲ್ಲದುದನ್ನು ಖಚಿತ ಪಡಿಸಿಕೊಂಡು ಅಕ್ಕನ ಬಳಗದ 20 ಜನ ಮಹಿಳಾಮಣಿಯರು ಖಾಲಿ ಇದ್ದ ಕಡಪಾ ಮೈದ್ಥಾನಕ್ಕೆ ಧೈರ್ಯವಾಗಿ ಬಂದು ತಾವು ತಾವೇ ಘೋಷಣೆ ಕೂಗಿ, ಪ್ರವಚನವನ್ನು ಪ್ರತಿಭಟಿಸಿದ್ದಾಗಿ ಮರುದಿನ ಪತ್ರಿಕೆಯಲ್ಲಿ ಹಾಕಿಸಿಕೊಂಡರು. 61 ದಿವಸಗಳ ಯಶಸ್ವಿ ಪ್ರವಚನಕ್ಕೆ ಯಾರದ್ದಾದರೂ ದೃಷ್ಟಿ ತಾಗಿದ್ದರೂ, ಅಕ್ಕನ ಬಳಗದ ತಾಯಂದಿರಿಂದಾಗಿ ಕುದೃಷ್ಟಿ ನಿವಾರಣೆ ಆದಂತಾಯಿತು. ಅದಕ್ಕಾಗಿ ಅವರಿಗೆ ಧನ್ಯವಾದ.

ವೀರಶೈವವಾದಿಗಳಿಗೊಂಡು ಎಚ್ಚರಿಕೆಯ ನುಡಿ.

ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿದ, ಬಸವಾದಿ ಶರಣರು ಕೊಟ್ಟಂತಹ "ಲಿಂಗಾಯತ ಧರ್ಮ"ವನ್ನು ಪ್ರಚಾರ ಮಾಡಿ, ಧರ್ಮ ಜಾಗೃತಿಗಾಗಿ, ಸಮಾಜದ ಉದ್ಧಾರಕ್ಕಾಗಿ, ತಮ್ಮ ಜೀವಿತವನ್ನೇ ಮುಡುಪಾಗಿಟ್ಟು, ಕಾಯಾ, ವಾಚಾ, ಮನಸಿನಿಂದ ಅವಿಶ್ರಾಂತವಾಗಿ ದುಡಿದು, ದೇಶದಾದ್ಯಂತ ಬಸವ ತತ್ತ್ವವನ್ನು ಬಿತ್ತರಿಸಿ, ಜನಜಾಗೃತಿ ಗೈಯುತ್ತಿರುವ ಪರಮ ಪೂಜ್ಯ ಮಾತಾಜಿಯವರ ಮೇಲೆ ಅಸೂಯೆಯಿಂದ ಅಪಸ್ವರಗೈಯುತ್ತಾ, ಅವರು ಮಾಡಿದ ಎಲ್ಲಾ ಸಾತ್ವಿಕ, ತಾತ್ವಿಕ, ಸಂಶೋಧನೆಗಳನ್ನು ಅರ್ಥ ಮಾಡಿಕೊಳ್ಳಲಾಗದ ಅಜ್ಞಾನಿಗಳಂತೆ ವೃಥಾ ಬೊಬ್ಬೆ ಹೊಡೆಯುವ ವೀರಶೈವವಾದಿಗಳೇ ಕೇಳಿ ! ನಿಮ್ಮ ವೀರಶೈವ ಪಂಥಕ್ಕೂ, ಲಿಂಗಾಯತ ಧರ್ಮಕ್ಕೂ ಯಾವ ಸಂಬಂಧವಿಲ್ಲಾ. ನೀವು ಬರೀ ಜಾತಿವಾದಿಗಳು, ಲಿಂಗಾಯತವು ಒಂದು ಸ್ವತಂತ್ರ ಧರ್ಮ. ಲಿಂಗಾಯತ ಧರ್ಮದ, ತತ್ತ್ವದ ಆಚರಣೆಗಳಿಗೂ ನಿಮ್ಮ ವೀರಶೈವ ಪಂಥದ ಮತಾಚರಣೆಗಳಿಗೂ ಯಾವ ಸಂಬಂಧವಿಲ್ಲಾ. ನಿಮ್ಮ ವೀರಶೈವದ ಆಚರಣೆಗಳೇನಾದರೂ ಇದ್ದರೆ ನೀವೇ ಮಾಡಿಕೊಳ್ಳಿ, ಲಿಂಗಾಯತ ಧರ್ಮದ ತಂಟೆಗೆ ಬರಬೇಡಿ. ಸುಮ್ಮ ಸುಮ್ಮನೆ, ಪತ್ರಿಕೆಗಳಲ್ಲಿ ವೀರಶೈವರ ಸಭೆಗಳಲ್ಲಿ ಮನಸ್ಸಿಗೆ ಬಂದಂತೆ ಮಾತಾಡುವುದು ಇನ್ನೊಬ್ಬರ ಬಗ್ಗೆ ದೂಷಣೆ ಆರೋಪ ಅಸೂಯೆ ಪಡುವುದನ್ನು ಬಿಡಿ. ಲಿಂಗಾಯತ ಧರ್ಮವನ್ನು ಈ ಶತಮಾನದಲ್ಲಿ ದೇಶದಲ್ಲೆಲ್ಲಾ ಪ್ರಚಾರ ಗೈದು ಇಂದಿನ ದಿನಗಳಲ್ಲಿ ಬಸವೇಶ್ವರರ, ಧರ್ಮದ, ತತ್ತ್ವಗಳನ್ನು ಜನಮನಗಳಲ್ಲಿ ಪ್ರಚಾರ ಮಾಡಿರುವ ಬಸವ ಪೀಠಾಧ್ಯಕ್ಷರಾದ ಪೂಜ್ಯ ಮಾತಾಜಿಯವರ ಹಿಂದೆ ಸಾವಿರ ಸಾವಿರ ಬಸವ ದಳಗಳೂ ದೇಶದಾದ್ಯಂತ ಹತ್ತಾರು ಲಕ್ಷ ಅನುಯಾಯಿಗಳೂ ಇರುವರೆಂಬುದನ್ನು ಮರೆಯಬೇಡಿ. ರಾಷ್ಟ್ರೀಯ ಬಸವ ದಳಗಳೆಂದರೆ. ನಿಮ್ಮ ಹಾಗೆ ಬಾಯಿಗೆ ಬಂದಂತೆ ಬೊಗಳುವವರಲ್ಲ ; ಆಚಾರ ಹೀನರಲ್ಲ, ಲಂಗು, ಲಗಾಮು ಇಲ್ಲದ ಲಗಾಡಿಗಳಲ್ಲಾ. ನಡೆಶೀಲ, ನುಡಿಶೀಲ, ನಿಷ್ಠೆಯ ಶಿಸ್ತಿನ ಸಿಪಾಯಿಗಳೆಂಬುದನ್ನು ಮರೆಯಬೇಡಿ, ಸಮಯ ಬಂದಾಗ, ದೇವರಿಗಾಗಿ, ಧರ್ಮಕ್ಕಾಗಿ ಧರ್ಮ ಸಾಹಿತ್ಯಕ್ಕಾಗಿ ಏನು ತ್ಯಾಗಕ್ಕೂ ಸಿದ್ಧರಾಗಿದ್ದೇವೆ. ಎಂಬುದನ್ನು ವೀರಶೈವವಾದಿಗಳಾದ ನೀವು ಅರಿಯಿರೆಂದು ಈ ಮೂಲಕ ನಿಮಗೆ ತಿಳಿಸಬಯಸುತ್ತೇವೆ.

– ಶರಣ. ಎಸ್.ಜಿ.ಬಸವರಾಜು, ರಾಷ್ಟ್ರೀಯ ಬಸವ ದಳ, ಎಸ್.ಕೊಪ್ಪಲು.

ಓಂ ಶ್ರೀ ಗುರುಬಸವಲಿಂಗಾಯ ನಮಃ

86666

ಕಿರಿದಾದ ವಯಸ್ಸಿನಲ್ಲೇ ಹಿರಿದಾದ ಜ್ಞಾನಗಳಿಸಿದ ಅಪೂರ್ವ ವಾಗ್ಮಿ,
ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ
ದ್ವಿತೀಯ ಮಹಿಳಾ ಜಗದ್ಗುರು

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಇವರ ಕರಕಮಲಗಳಿಗೆ ಸಲ್ಲಿಸಿದ ಅಭಿನಂದನ ಪತ್ರ

ಪೂಜ್ಯ ಶ್ರೀ ಮಾತೆ ಗಂಗಾದೇವಿಯವರೇ,

ತಾವು ಶರಣ ಭೂಮಿ ಬಸವ ಕಲ್ಯಾಣವನ್ನು ಹೊಂದಿರುವ, ಕರ್ನಾಟಕದ ಕಿರೀಟವಂತಿರುವ ಬೀದರ ಜಿಲ್ಲೆಯ ಚಟ್ನಳ್ಳಿ ಎಂಬ ಗ್ರಾಮದಲ್ಲಿ ದಿ. 16-9-1958 ರಂದು ಶರಣ ಮಾಣಿಕ್ಯಪ್ಪ ಬೆಣ್ಣೆ ಮತ್ತು ಶರಣೆ. ಭಾಗೀರಥಮ್ಮನವರ ಮಗಳಾಗಿ ಜನಿಸಿ ಗಂಗಮ್ಮ ಎಂಬ ನಾಮಕರಣ ಹೊಂದಿದಿರಿ. ತಾಯಿಯ ಸ್ವಾತಿಕತೆ, ತಂದೆಯ ಜ್ಞಾನಾಕಾಂಕ್ಷೆ ಎರಡನ್ನೂ ಮೈಗೂಡಿಸಿಕೊಂಡು ಬೆಳೆದು, ಅತ್ಯಂತ ಕಿರಿಯ ವಯಸ್ಸಿನಲ್ಲಿ, ಅಂದರೆ 15ನೆಯ ವಯಸ್ಸಿನಲ್ಲೇ ವೈರಾಗ್ಯ ಭಾವ ಬಲಿದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಗೆ ಬಂದಿರಿ. ಪರಮ ಪೂಜ್ಯ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳಿಂದ ಇಷ್ಟಲಿಂಗ ದೀಕ್ಷೆ ಪಡೆದು ಶಿವಯೋಗ ಸಾಧನೆಯಲ್ಲಿ ತೊಡಗಿ, 21ನೆಯ ವಯಸ್ಸಿನಲ್ಲಿ 1979ರಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ಜಂಗಮ(ಸನ್ಯಾಸ) ದೀಕ್ಷೆಯನ್ನು ಪಡೆದು, ಮಾತೆ ಗಂಗಾದೇವಿ ಎಂಬ ಅಭಿಧಾನ ತಾಳಿದಿರಿ.

ಪ್ರವಚನ ವಿಶಾರದರೇ,

ಹಿಂದುಳಿದ ಪ್ರದೇಶವಾದ ಬೀದರ್‌ನಲ್ಲಿ ಸ್ತ್ರೀ ಶಿಕ್ಷಣದ ಮಟ್ಟ ಕಡಿಮೆ ಇದ್ದುದರಿಂದಲೂ, ಚಿಕ್ಕ ವಯಸ್ಸಿನಲ್ಲೇ ವೈರಾಗ್ಯ ಭಾವ ಬಲಿದು ವಿದ್ಯಾಭ್ಯಾಸ ಮುಂದುವರಿಸಲು ಆಗದೇ ಹೋದರೂ ಆಧ್ಯಾತ್ಮ ಶಿಕ್ಷಣದಲ್ಲಿ ತೀವ್ರಗತಿಯಲ್ಲಿ ಮುಂದೆ ಸಾಗಿ ಇಂದು ಅಪೂರ್ವ ಜ್ಞಾನಿಯಾಗಿದ್ದೀರಿ. ತೀಕ್ಷ್ಣಮತಿ, ಗ್ರಹಣ ಶಕ್ತಿಯಿಂದಾಗಿ ಬಹಳ ಬೇಗನೆ ಪ್ರವಚನ ಕಾಯಕದಲ್ಲಿ ಯಶಸ್ಸು ಸಾಧಿಸಿದಿರಿ. ಜಂಗಮ ದೀಕ್ಷೆ ಪಡೆದು 1979ರಲ್ಲಿ ಗುಲಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ ಮೊಟ್ಟ ಮೊದಲ ಪ್ರವಚನ ಮಾಡಿದ ತಾವು ಅಂದಿನಿಂದ ಹಗಲಿರುಳು ಸಂಚರಿಸುತ್ತ ಬಸವ ತತ್ತ್ವ ಪ್ರಚಾರದಲ್ಲಿ ನಿರತರಾಗಿದ್ದೀರಿ. ಕನ್ನಡ ಭಾಷೆಯಲ್ಲಿ ಅಸ್ಖಲಿತವಾಗಿ ಪ್ರವಚನ ಮಾಡುವುದಲ್ಲದೆ ಹಿಂದಿಯನ್ನು ಸಹ ಕಲಿತು ದೆಹಲಿ-ಮುಂಬೈ ಮುಂತಾದ ಕಡೆ ಹಿಂದಿಯಲ್ಲಿ ಪ್ರವಚನ ಮಾಡಿ, ಅಲ್ಲಿ ನಡೆದ ಬಸವ ಧರ್ಮ ಸಮ್ಮೇಳನಗಳು ಯಶಸ್ವಿಯಾಗುವಂತೆ ಮಾಡಿದಿರಿ. ಪ್ರವಚನವು ಒಂದು ವಾಙ್ಮಯ ತಪಸ್ಸು ಎಂದು ಲಿಂಗೈಕ್ಯ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ನುಡಿಯುತ್ತಿದ್ದರು. ಶಾರೀರಿಕ ತಪಸ್ಸಿನಲ್ಲಿ ಸಾಧಕನಿಗೆ ಆನಂದವಿದ್ದರೆ ವಾಙ್ಮಯ ತಪಸ್ಸಿನಲ್ಲಿ ಪ್ರವಚನಕಾರರಿಗೆ ಮಾತ್ರವಲ್ಲ ಕೇಳುವ ಸದ್ಭಕ್ತರಿಗೂ ಸಂತೃಪ್ತಿಯು ಪ್ರಾಪ್ತವಾಗುತ್ತದೆ. ಎಂದು ಹೇಳುತ್ತಿದ್ದರು. ಪ್ರವಚನ ಎಂಬ ಸಾಧನದ ಮೂಲಕ ಪೂಜ್ಯ ಗುರುಗಳು ಹಲವಾರು ರಾಜ್ಯಗಳಲ್ಲಿರುವ ಶರಣ ಬಂಧುಗಳನ್ನೆಲ್ಲ ಸೇರಿಸಿ ಬಸವ ಸಾಮ್ರಾಜ್ಯವನ್ನೇ ಕಟ್ಟಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಅನುಗ್ರಹವನ್ನು ಧರಿಸಿದ ತಾವು ಕರ್ನಾಟಕದಾದ್ಯಂತ ಮಾತ್ರವಲ್ಲ ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ವಿವಿಧ ಭಾಗಗಳಲ್ಲಿ ಸಂಚರಿಸಿ ಅಪೂರ್ವ ಪ್ರವಚನಗಳನ್ನು ಮಾಡಿರುವುದೇ ಅಲ್ಲದೆ ಎಲ್ಲ ಶರಣ ಬಂಧುಗಳ

ಕಣ್ಮಣಿಯಾಗಿದ್ದೀರಿ.

ದ್ವಿತೀಯ ಮಹಿಳಾ ಜಗದ್ಗುರುಗಳೇ,

ಶ್ರೇಷ್ಠ ಗುರುವಿನ ಶ್ರೇಯಸ್ಸಿರುವುದು ಉತ್ತಮ ಶಿಷ್ಯಂದಿರನ್ನು ತಯಾರು ಮಾಡುವುದರಲ್ಲಿ. ಎಂಥಾ ದೊಡ್ಡ ದೊಡ್ಡ ಮಠಗಳು ಸಮರ್ಥ ಅಧಿಕಾರಿಗಳಿಲ್ಲದೆ ಇರುವಾಗ, ಕೆಲವೊಂದು ಮಠ-ಪೀಠಗಳ ಗುರುಗಳು ತಮ್ಮ ನಂತರ ಮಠವನ್ನು ನಡೆಸಿಕೊಂಡು ಹೋಗುವಂಥ ಉತ್ತಮ ಅಧಿಕಾರಿಗಳನ್ನು ನಿಯೋಜಿಸಲು ಅಸಮರ್ಥರಾಗಿರುವಾಗ ಲಿಂ|| ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಉತ್ತಮ ಸಾಧಕರ ಪರಂಪರೆಯನ್ನೇ ಸೃಷ್ಟಿಸಿದ್ದಾರೆ. ಪೂಜ್ಯ ಗುರುಗಳ ಕಾಯಕವನ್ನು ಪೂಜ್ಯ ಮಾತಾಜಿಯವರು ಮುಂದುವರಿಸಿಕೊಂಡು ಹೋದಂತೆ, ತಾವೂ ಸಹ ಅಪೂರ್ವವಾಗಿ ಮುಂದುವರಿಸುತ್ತಿದ್ದೀರಿ. ಪೂಜ್ಯ ಗುರುಗಳು ದಿ.16-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸ ಬಯಸಿ ಕಾಷಾಯ ವಸ್ತ್ರವನ್ನು ಸ್ವಯಂ ಪ್ರೇರಣೆಯಿಂದ ಧರಿಸಿದ್ದು ಧಾರವಾಡದಲ್ಲಿ. ಮಹಿಳೆಯರ ಸಮಾನತೆ ಸಾರುವ ಮಹಿಳಾ ಜಗದ್ಗುರು ಪೀಠವು ಸ್ಥಾಪನೆಗೊಂಡುದು ಧಾರವಾಡದಲ್ಲಿ. ಹೀಗಾಗಿ ಅಕ್ಕಮಹಾದೇವಿ ಅನುಭಾವ ಪೀಠವು ಸ್ತ್ರೀ ಸಮಾನತೆಯ ಹೆಗ್ಗುರುತು. ಪೂಜ್ಯ ಗುರುಗಳು ದಿ.30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಪಡೆದ ಮೇಲೆ ಪೂಜ್ಯರು ಪ್ರಥಮ ಅಧಿಕಾರಿಗಳಾಗಿದ್ದ ಕೂಡಲ ಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠವು ತೆರವಾಯಿತು. ಪೂಜ್ಯರ ಸದಿಚ್ಛೆಯಂತೆ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಪ್ರಥಮ ಅಧಿಕಾರಿಣಿಯಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮ ಪೀಠದ ಎರಡನೆಯ ಅಧಿಕಾರಿಣಿಯಾಗಿ ದಿ. 13-1-1996ರಂದು ಪೀಠಾರೋಹಣ ಮಾಡಿದರು. ಇದರಿಂದ ತೆರವಾದ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠಕ್ಕೆ ತಾವು ಎರಡನೆಯ ಅಧಿಕಾರಿಣಿಯಾಗಿ ದಿ.15-4-1996ರಂದು ಪೀಠಾರೋಹಣ ಮಾಡಿದಿರಿ. ನಿಮ್ಮ ಸಾತ್ವಿಕತೆ, ವೈರಾಗ್ಯ, ತಾಳ್ಮೆ, ಪ್ರೇಮಳ ಸ್ವಭಾವ, ಸರಳತೆ, ಅಪೂರ್ವ ವಾಗ್ಮಿತ್ವ, ಗುರುಭಕ್ತಿ, ಕಾಯಕ ಶ್ರದ್ಧೆ ನಮ್ಮೆಲ್ಲರನ್ನು ಸಮ್ಮೋಹಿತಗೊಳಿಸಿವೆ. ಗುರುದ್ವಯರ ಮೆಚ್ಚುಗೆಯ ಶಿಷ್ಯೆಯಾದಂತೆ ನಮ್ಮೆಲ್ಲರ ಆತ್ಮೀಯ ಮಾತೆಯಾಗಿದ್ದೀರಿ ; ಸಮಾಜದ ಮಗಳಾಗಿದ್ದೀರಿ. ಗುರು ಬಸವಣ್ಣನವರ ಕಾರುಣ್ಯದ ಶಿಶುವಾಗಿದ್ದೀರಿ. ಜಗನ್ಮಾತಾ ಅಕ್ಕಮಹಾದೇವಿ ಪೀಠದ ಕೀರ್ತಿ ತಮ್ಮಿಂದ ಇನ್ನೂ ವಿಸ್ತಾರಗೊಳ್ಳುವದೆಂಬುದರಲ್ಲಿ ಸಂದೇಹವಿಲ್ಲ. ಯಾವ ಧ್ಯೇಯವನ್ನಿಟ್ಟುಕೊಂಡು ಮನೆ ತೊರೆದಿರೋ ಅದರತ್ತ ಏಕನಿಷ್ಠೆಯಿಂದ ಸಾಗಿದ್ದೀರಿ. ಅಪೂರ್ವ ಗುರುವನ್ನು ಪಡೆದ ಅಪೂರ್ವ ಶಿಷ್ಯೆಯಾದ ತಾವು ಗುರುಗಳ ಆದೇಶ ಪಾಲನೆಯಲ್ಲಿ ಇಟ್ಟ ಶ್ರದ್ಧೆ ಮತ್ತು ನಿಷ್ಠೆ ಇತರರಿಗೆ ಅನುಕರಣೀಯವಾಗಿವೆ.

ಭಕ್ತಿಪೂರ್ವಕ ಅಭಿನಂದನೆ

ನಿಮ್ಮ ಭವಿಷ್ಯವನ್ನು ಅರಿತರೋ ಎಂಬಂತೆ ನಿಮ್ಮ ಮಾತಾಪಿತೃಗಳು 'ಗಂಗಮ್ಮ' ಎಂದು ಹೆಸರಿಟ್ಟರು. ನೀವು ಹರಿವ ಗಂಗೆಯೇ ಆಗಬೇಕು ಎಂಬ ಸತ್ಸಂಕಲ್ಪದಿಂದ ಪೂಜ್ಯ ಗುರುಗಳು ಮತ್ತು ಪೂಜ್ಯ ಮಾತಾಜಿಯವರು ಜಂಗಮ ದೀಕ್ಷೆ ನೀಡಿದಾಗ ''ಮಾತೆ ಗಂಗಾದೇವಿ'' ಎಂಬ ವಿಶೇಷ ಅಭಿಧಾನ ನೀಡಿದರು. ಹರಿವ ಗಂಗೆಯಂತೆಯೇ ಜಗದ ಬಯಲಲಿ ನಿರಂತರವಾಗಿ ಸಂಚರಿಸುತ್ತ ಭಕ್ತರ ಹೃದಯ ಭೂಮಿಯ ಮೇಲೆ ಭಕ್ತಿ-ಜ್ಞಾನಗಳ ಬೆಳೆಯನ್ನು ತೆಗೆಯುತ್ತಿದ್ದೀರಿ. ಧಾರವಾಡದ ಕಡಪಾ ಮೈದಾನದಲ್ಲಿ ದಿ. 9-2-2001ರಂದು ಪ್ರವಚನವನ್ನು ಆರಂಭಿಸಿ ನಿತ್ಯವೂ ಅಖಂಡವಾಗಿ, ಅವ್ಯಾಹತವಾಗಿ ಸಂಜೆ 7 ರಿಂದ 9ರವರೆಗೆ ಜ್ಞಾನಗಂಗೆಯನ್ನು ಹರಿಸುತ್ತಿದ್ದೀರಿ. ದೂರದರ್ಶನದ ಆಕರ್ಷಣೆಯ ಈ ಯುಗದಲ್ಲಿ ಸಹ

ಜನರು ತಮ್ಮ ವಾಣಿಗೆ ಮಾರುಹೋಗಿ ಜ್ಞಾನಜಲವನ್ನು ತುಂಬಿಕೊಳ್ಳಲು ಕಿಕ್ಕಿರಿದು ಸೇರುತ್ತಿರುವುದು ಎಲ್ಲರನ್ನು ಬೆರಗುಗೊಳಿಸಿದೆ. ಇಂದಿಗೆ 61ನೆಯ ದಿವಸ. ಒಂದು ದಿನ ಹೇಳಿದ ವಿಷಯ ಮತ್ತೊಂದು ದಿನ ಪುನರಾವರ್ತನೆಯಾಗುವುದಿಲ್ಲ. ಅಷ್ಟು ಅಗಾಧವಾದ ಜ್ಞಾನ ವಾರಾಶಿ ನೀವು. ತಾತ ಮತ್ತು ತಂದೆ ಉಭಯತರೂ ಗಳಿಸಿದ ಆಸ್ತಿ ಪ್ರಾಪ್ತಿಯಾದ ಅಗರ್ಭ ಶ್ರೀಮಂತ ಮಗನಂತೆ ತಾವು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಗಳಿಸಿದ ಜ್ಞಾನವನ್ನು ಪಡೆದ ಪುಣ್ಯವಂತರು. ಹೀಗೆ ಗಳಿಸಿದ ಜ್ಞಾನ ಸಂಪತ್ತು ಮತ್ತಷ್ಟು ಬೆಳೆಸಿಕೊಂಡು ಜಗತ್ತಿಗೆ ಪ್ರವಚನದ ಮೂಲಕ ಧಾರೆ ಎರೆಯುತ್ತಿರುವ ದಿವ್ಯ ಯೋಗಿಣಿ ತಾವು. ಇಂತಹ ತಮಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು, ಆದಿ ಶರಣರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಅವರಲ್ಲಿ ಬೇಡಿಕೊಂಡು, ನಮಗೆ ನೀಡಿದ ಜ್ಞಾನಕ್ಕಾಗಿ ತುಂಬು ಹೃದಯದಿಂದ ಕೃತಜ್ಞತೆ ಸಲ್ಲಿಸುತ್ತ ಈ ಅಭಿನಂದನ ಪತ್ರವನ್ನು ಸಮರ್ಪಿಸುತ್ತಿದ್ದೇವೆ.

ಶರಣು ಶರಣಾರ್ಥಿಗಳೊಡನೆ,
ರಾಷ್ಟ್ರೀಯ ಬಸವ ದಳ, ಧಾರವಾಡ-ಹುಬ್ಬಳ್ಳಿ
ಲಿಂಗಾಯತ ಧರ್ಮ ಮಹಾಸಭಾ, ಧಾರವಾಡ, 10-4-2001

ಪೂಜ್ಯ ಶ್ರೀ ಮಾತೆ ಮಹಾದೇವಿಯವರಿಗೆ ನಮನ :

ಮಾರ್ದನಿಯಿಂದ ಧರ್ಮದ ನಿಜ ಮರ್ಮವನ್ನರುಹಿ, ಅಜ್ಞಾನದ ಕಳೆಯ
ತೆಗೆದು ಸುಜ್ಞಾನದ ಬೀಜವಂಬಿತ್ತಿ ವಿಚಾರವಂತಿಕೆಯ ಉದಕವನೆರೆದು
ಮರ್ತ್ಯದೊಳ್ ಮಹಾತ್ಕ್ರಾಂತಿಯಂಗೈದು ಬಸವಾದಿ ಶರಣರ ಶುಭ
ಹಾರೈಕೆಯಿಂದ ಬಸವ ಧರ್ಮ ಪೀಠದ ಧೀಮಂತ ದ್ವಿತೀಯ ಜಗದ್ಗುರುವಾಗಿ ಲಿಂಗ
ದೇವನ ಲೀಲೆಯಸಾರಿ ವಚನಸಾಹಿತ್ಯದ ಮಹಿಮೆಯ ತೋರಿ ಅ
ವಿಶ್ರಾಂತವಾಗಿ ಅಹರ್ನಿಶ ಧರ್ಮ ಬೋಧನೆಯಲ್ಲಿ ತೊಡಗಿರ್ಪ ಪೂಜ್ಯ ಮಾತಾಜಿಗಿದೋ
ಭಕ್ತಿ ಪೂರ್ವಕ ನಮನ

ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ನಮನ :

ಮಾನವ ಕುಲಕೋಟಿಯ ಆತ್ಮೋದ್ಧಾರಕ್ಕೆ ಧರ್ಮ ಬೋಧೆಯ ಮಣಿಹವ ಹೊತ್ತು ಜನ
ತೆಯ ಪ್ರೀತಿ, ವಿಶ್ವಾಸ ಗೌರವಾದರಗಳಿಗೆ ಭಾಜನರಾಗಿ ವಚನ ಪುಷ್ಪಗಳ ಸು
ಗಂಧವ ಸೂಸಿ ಮರ್ತ್ಯದೋಳ್, ಗಂಡೆದೆಯಿಂದ ಗಂಡಾಂತರವ ಗೆದ್ದು ಜನಮನದ
ಗಾಢಾಂಧಕಾರವ ತೊಡೆದು ಹಾಕಿ ಬಸವಾದಿ ಶರಣರ ತತ್ತ್ವ ಬೀಜವ ಬಿತ್ತಿ ಲಿಂಗ
ದೇವನೊಲುಮೆಗೆ ಮಾರ್ಗವಂ ತೋರಿ ಮರೆವಿನ ಮಾನವನನ್ನರಿವಿನ ಶರಣನನ್ನಾಗಿಸುವಲ್ಲಿ ಅ
ವಿರತ ಸೇವಯಂಗೈಯ್ಯುತಿರ್ಪ ಪೂಜ್ಯ ಗಂಗಾ ಮಾತಾಜಿಗಿದೋ ಭಕ್ತಿಪೂರ್ವಕ ನಮನ

-ಸುಜ್ಞಾನಪ್ರಭು, ಕಾರ್ಯದರ್ಶಿ, ರಾಷ್ಟ್ರೀಯ ಬಸವ ದಳ, ತುಮಕೂರು

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿ ದಯವಿಟ್ಟು ಪತ್ರ ಬರೆಯಿರಿ.
-ವ್ಯವಸ್ಥಾಪಕರು

ದೃಷ್ಟಾಂತ ಕಥೆ : ಬಚಾವಾದ ಬಲ್ಲೂಕರಾಜ

- ಮಾತಾಜಿ

ನೀವೆಲ್ಲ ಪಂಚತಂತ್ರದ ಮೊಸಳೆ ಕಣ್ಣೀರಿನ ಕಥೆ ಕೇಳಿದ್ದೀರಿ. ನಾನು ಈಗ ಹೇಳುವುದು ಷಡ್‌ತಂತ್ರದ ಮೊಸಳೆ-ಮಂಗಗಳ ಕಥೆ. ದಯವಿಟ್ಟು ಸಹನೆ ಕಳೆದುಕೊಳ್ಳದೆ ಪರಾಂಬರಿಸಿ.

ಕಾರ್ಕೋಟಕ ಎಂಬ ರಾಜ್ಯ. ಅಲ್ಲೊಂದು ಕಡೆ ವಿಚಿತ್ರವಾಹಿನಿ ಎಂಬ ನದಿ ಹರಿಯುತ್ತಿತ್ತು. ಅದರ ದಂಡೆಯ ಮೇಲೆ ಕದಿರೆ ಎಂಬ ವನವಿತ್ತು. ಆ ವನದಲ್ಲಿ ನದಿಯ ದಂಡೆಯ ಮೇಲೆ ಶೃಂಗರಾಜ ಎಂಬ ಸಾತ್ವಿಕ ಗುಣದ ಮಂಗರಾಜನಿತ್ತು. ಒಂದು ದಿನ ವಿಚಿತ್ರವಾಹಿನಿ ನದಿಯಲ್ಲಿ ಸಾಗಿ ಬಂದ ಕುಹಕ ಕೀರ್ತಿ ಎಂಬ ಮೊಸಳೆಯೊಂದು ಬಲ್ಲೂಕ ವೃಕ್ಷದ ಮೇಲಿದ್ದ ಮಂಗರಾಜನ ಗೆಳೆತನ ಬಯಸಿತು. ಇದು ಗಿಡದ ಮೇಲೆ ಅದು ನೀರಲ್ಲಿ ; ಪಟ್ಟಾಂಗ ಹೊಡೆಯುತ್ತ ಒಳ್ಳೆಯ ಮಿತ್ರರಾಗಿದ್ದವು.

ಅಲ್ಲೇ ಪಕ್ಕದ ಜಾಪೂರ ವೃಕ್ಷದಲ್ಲಿದ್ದ ಹಿರಿಯ ಮಂಗವೊಂದು ಮಂಗ ಮೊಸಳೆಗಳ ಗೆಳೆತನ ನೋಡಿ ಎಚ್ಚರಿಕೆ ನೀಡಿತು. ನೀನು ಸ್ವಭಾವತಃ ಸಾತ್ವಿಕ, ಮೊಸಳೆ ಕ್ರೂರ ಪ್ರಾಣಿ, ಇಂಥ ಗೆಳೆತನ ಅಪಾಯಕರ'' ಎಂದು ಬುದ್ಧಿ ಹೇಳಿತು. ಆದರೆ ಸಂಭಾವಿತ ಸ್ವಭಾವದ ಮಂಗರಾಜ ಸಜಾತೀಯ ಮಂಗ ಹೇಳಿದ ಬುದ್ಧಿವಾದವನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಗೆಳೆತನ ಚೆನ್ನಾಗಿ ಸಾಗಿತು. ಬಲ್ಲೂಕ ವೃಕ್ಷದ ಮೇಲಿದ್ದ ಮಂಗರಾಜ ಗಿಡಗಳ ಮೇಲಿರುತ್ತಿದ್ದ ರುಚಿರುಚಿಯಾದ ಹಣ್ಣುಗಳನ್ನು ಕಿತ್ತೆಸೆಯುತ್ತಿತ್ತು. ಕುಹಕ ಕೀರ್ತಿ ತಿಂದು ಸಂತೋಷಿಸುತ್ತಿತ್ತು. ಅದಕ್ಕೆ ಇಬ್ಬರು ಹೆಂಡತಿಯರು ಪಟ್ಟದರಾಣಿ ರಾಜ ಶ್ರೀ, ಎರಡನೆಯ ರಾಣಿ ಭೀಮ ಶ್ರೀ.

ಒಂದು ದಿನ ಕುಹಕ ಕೀರ್ತಿ ಹೇಳಿತು ''ಶೃಂಗರಾಜ ಎಂಬ ಮಂಗರಾಜನೇ ಇಂದು ನೀನು ಕಿತ್ತೆಸೆದ ಹಣ್ಣು ಅತೀವ ರುಚಿಯಾಗಿವೆ. ನನ್ನ ಹೆಂಡತಿಯರಿಗೆ ಒಯ್ಯುವ ಆಸೆ. ಸ್ವಲ್ಪ ಜಾಸ್ತಿ ಕೊಡು.'' ಎಂದು ವಿನಂತಿಸಿತು. ''ಆಗಲಿ ಮಿತ್ರ. ಅವರು ನನ್ನ ಅತ್ತಿಗೆಯರು ತಾನೆ ? ತೆಗೆದುಕೊಂಡು ಹೋಗು'' ಎಂದು ಹೆಚ್ಚು ಹಣ್ಣುಗಳನ್ನು ಕೊಟ್ಟಿತು. ಕುಹಕ ಕೀರ್ತಿ ತಂದುಕೊಟ್ಟ ಹಣ್ಣು ತಿಂದು ರಾಜಶ್ರೀ, ಭೀಮಶ್ರಿ ಎಂಬ ರಾಣಿಯರು ಅತೀವ ಸಂತೋಷಪಟ್ಟು ದಿನಾಲೂ ತಂದುಕೊಡಲು ಹೇಳಿದರು. ಮಂಗರಾಜ ಕೊಡುತ್ತಿತ್ತು. ಕುಹಕ ಕೀರ್ತಿ ತಂದುಕೊಟ್ಟು ಹೆಂಡತಿಯರನ್ನು ಖುಷಿ ಪಡಿಸುತ್ತಿತ್ತು. ಒಂದು ದಿನ ಉಭಯ ರಾಣಿಯರೂ ತುಂಬಾ ಚಿಂತಿತರಾದಂತೆ ಕಂಡಿತು. ಪತಿರಾಯ ಕಾರಣ ಕೇಳಿ. ''ಈ ಹಣ್ಣುಗಳೇ ಇಷ್ಟು ರುಚಿ ಇವೆ. ಇವನ್ನೇ ಹುಟ್ಟಿದಾಗಿನಿಂದ ತಿಂದಿರುವ ಮಂಗರಾಜ ಎಷ್ಟು ಸಿಹಿ ಇರಬಹುದು ? ಅವನ ಹೃದಯವನ್ನು ನಾನು, ಮೆದುಳನ್ನು ಭೀಮಶ್ರೀ ತಿನ್ನುತ್ತೇವೆ. ನೀವು ಉಳಿದ ದೇಹ ತಿನ್ನುವಿರಂತೆ''

''ಛೇ ಛೇ ಎಲ್ಲಾದರೂ ಉಂಟೆ ?'' ಇದು ಮಿತ್ರದ್ರೋಹ. ನಂಬಿಗಸ್ಥ ಮಿತ್ರನನ್ನು ಕೊಲ್ಲುವುದೆ ?''

''ಹಾಗಾದರೆ ಇಂದಿಗೆ ನಮ್ಮ-ನಿನ್ನ ಸಂಬಂಧ ಮುರಿಯಿತು ? ಹೆಂಡತಿಯರಿಗಿಂತ ಸ್ನೇಹಿತನೇ ಹೆಚ್ಚೆ ?'' ಕುಹಕ ಕೀರ್ತಿಗೆ ಏನೇನೂ ತೋಚದಾಯಿತು.

''ನನಗೆ ನೀವೇ ಹೆಚ್ಚು. ಆದರೆ ಕರೆತರುವ ಉಪಾಯವೇನು ?''

ಚೇತರಿಸಿಕೊಂಡು ಕುಹಕ ಕೀರ್ತಿ ಕೇಳಿತು. ರಾಜಶ್ರೀ-ಭೀಮಶ್ರೀ ಜೊತೆಯಾಗಿ ಉಪಾಯ ಹೇಳಿಕೊಟ್ಟವು, ಬತ್ತಿ ಹೋಗಿ ನಿಸ್ತೇಜವಾಗಿದ್ದ ಕುಹಕ ಕೀರ್ತಿಯ ಮುಖದ ಮೇಲೆ ನಗೆ ಮೂಡಿತು. ಒಂದು ದಿನ ಬಂದು ಮಂಗರಾಜನಿಗೆ ಹೇಳಿತು. ''ಮಿತ್ರಾ, ನೀನು ಕೊಡುತ್ತಾ ಬಂದ ರುಚಿರುಚಿಯಾದ

ಹಣ್ಣು ತಿಂದು ನನ್ನ ಪತ್ನಿಯರಿಬ್ಬರೂ ಆನಂದ ತುಂದಿಲರಾಗಿದ್ದಾರೆ. ಅವರು ನಿನ್ನನ್ನು ನಮ್ಮ ಮನೆಗೆ ಊಟಕ್ಕೆ ಆಹ್ವಾನಿಸಲು ಹೇಳಿದ್ದಾರೆ. ಕರೆತರದಿದ್ದರೆ ಮನೆಗೇ ಬರಬೇಡ ಎಂದು ಶರತ್ತು ವಿಧಿಸಿದ್ದಾರೆ.''

''ಅಷ್ಟೇ ತಾನೆ. ನಿನ್ನ ಮನೆಗೆ ಬಂದು ಅತ್ತಿಗೆಯರು ನೀಡಿದ ಊಟ ಮಾಡಲು ನನಗೇಕೆ ಹಿಂಜರಿಕೆ? ಬರುತ್ತೇನೆ-ನಡೆ'' ಎಂದು ಇನ್ನಷ್ಟು ಹಣ್ಣುಗಳನ್ನು ಕಟ್ಟಿಕೊಂಡಿತು. ಆಗ ಜಾಪೂರ ವೃಕ್ಷದಲ್ಲಿದ್ದ ಹಿರಿಯ ಮಂಗ ಹೇಳಿತು. ''ಬೇಡ ಮಂಗರಾಜ, ವಿಭಿನ್ನ ಸ್ವಭಾವದ ಜನರ ಸಂಗ ಬೇಡ'' ಮಂಗರಾಜ ನಕ್ಕಿತು. ''ನೀನು ಒಂಟಿ ಸಲಗದಂತೆ. ನಿನಗೆ ಮಿತ್ರತ್ವದ ಮಹತ್ವ ಏನು ಗೊತ್ತು ?'' ಎಂದು ಹೊರಟಿತು. ಕುಹಕ ಕೀರ್ತಿಯ ಬೆನ್ನೇರಿ ಮಂಗರಾಜ ತೇಲುತ್ತಾ ಹೊರಟಿತು. ಕುಹಕ ಕೀರ್ತಿಯ ಸಂಭಾವಿತತನವೋ, ದಡ್ಡತನವೋ ಅದರ ಕಣ್ಣಲ್ಲಿ ನೀರು ಉದುರತೊಡಗಿದವು. ಆಶ್ಚರ್ಯದಿಂದ ಮಂಗರಾಜ ಕೇಳಿತು. ಕುಹಕ ಕೀರ್ತಿ ಹೇಳಿತು ; ಹೇಗಿದ್ದರೂ ಅರ್ಧದೂರ ನದಿಯಲ್ಲಿ ಬಂದಾಗಿದ್ದುದರಿಂದ ಅದಕ್ಕೆ ಮಂಗರಾಜ ತಪ್ಪಿಸಿಕೊಳ್ಳಲಾರ ಎಂಬ ಧೈರ್ಯ. ''ಮಿತ್ರಾ, ನನ್ನ ಪತ್ನಿಯರ ಒತ್ತಡ ತಡೆಯಲಾರದೆ ನಿನ್ನನ್ನು ನನ್ನ ಮನೆಗೆ ಕರೆದೊಯ್ಯುತ್ತಿದ್ದೇನೆ. ಒಬ್ಬಳಿಗೆ ನಿನ್ನ ಹೃದಯಬೇಕಂತೆ, ಇನ್ನೊಬ್ಬಳಿಗೆ ನಿನ್ನ ಮೆದುಳುಬೇಕಂತೆ. ನಿನ್ನನ್ನು ತಿಂದುಹಾಕುವ ಇಷ್ಟ ನನಗಿಲ್ಲ. ಆದರೆ ನೀನಿಲ್ಲದೆ ನಾನಿರಬಲ್ಲೆ, ಪತ್ನಿಯರಿಲ್ಲದೆ ಹೇಗೆ ಬದುಕಬಹುದು ? ನನ್ನ ಈ ಅನಿವಾರ್ಯ ಪರಿಸ್ಥಿತಿ ಅರಿತು ದಯವಿಟ್ಟು ಕ್ಷಮಿಸು.''

ಶೃಂಗರಾಜನೆಂಬ ಮಂಗರಾಜನಿಗೆ ಮುಂದಿನ ಚಿತ್ರ ಕಣ್ಣಿಗೆ ಕಟ್ಟಿ ಎಚ್ಚರ ತಪ್ಪುವುದೊಂದೇ ಬಾಕಿ, ಆದರೂ ಧೈರ್ಯ ತಾಳಿತು. ''ಮಿತ್ರಾ, ಕುಹಕ ಕೀರ್ತಿ, ನಿನ್ನ ಸುಖಕ್ಕಿಂತ ನನಗೆ ಹೆಚ್ಚಿನದು ಏನು ? ಗೆಳೆತನಕ್ಕಾಗಿ ಇಷ್ಟೂ ತ್ಯಾಗ ಮಾಡಲಾರೆನೆ ? ಆದರೆ ಒಂದು ತಪ್ಪು ಘಟಿಸಿತು. ನನ್ನನ್ನು ನೀನು ಕರೆದೊಯ್ದೂ ಪ್ರಯೋಜನವಿಲ್ಲ. ನನ್ನ ಅತ್ತಿಗೆಯರ ಆಸೆ ಪೂರೈಸಲಾರೆ ಎಂದು ಸಂಕಟವಾಗುತ್ತಿದೆ'' ಎಂದಿತು ವಿಷಾದದ ದನಿಯಲ್ಲಿ. ''ಏಕೆ ಏನಾಗಿದೆ ?'' ಕುಹಕ ಕೀರ್ತಿ ಕೇಳಿತು.

''ನಾನು ನನ್ನ ಮೆದುಳನ್ನು ಬಲ್ಲೂಕ ವೃಕ್ಷದಲ್ಲಿ, ಹೃದಯವನ್ನು ಮಲಘಾಣ ಎಂಬ ಸನಿಹದ ವೃಕ್ಷದಲ್ಲಿ ಮುಚ್ಚಿಟ್ಟಿದ್ದೇನೆ, ಜೊತೆಗೆ ಇಟ್ಟುಕೊಳ್ಳುವುದು ಅಪಾಯ ಎಂದು. ನೀನು ಹೊರಡುವಾಗಲೇ ಹೇಳಿದ್ದರೆ ತೆಗೆದುಕೊಂಡು ಬರುತ್ತಿದ್ದೆ ; ಎಂಥಾ ಕೆಲಸ ಮಾಡಿದೆ ?!''

''ಅಹುದೇ ಅವಿಲ್ಲದೆ ಬರಿದಾಗಿ ಹೋದರೆ, ರಾಜಶ್ರೀ, ಭೀಮಶ್ರೀ ನನ್ನನ್ನು ಸುಮ್ಮನೆ ಬಿಡರು, ಈಗೇನು ಮಾಡೋಣ ?'' ಕುಹಕ ಕೀರ್ತಿ ಕೇಳಿತು.

''ವಾಪಸ್ಸು ಹೋಗೋಣ. ನಾನು ಅವನ್ನು ತೆಗೆದುಕೊಳ್ಳುತ್ತೇನೆ. ಪುನಃ ನಿಮ್ಮ ಮನೆಗೆ ಬರುತ್ತೇನೆ.'' ಕುಹಕ ಕೀರ್ತಿ ಒಪ್ಪಿ ವಾಪಸ್ಸು ಹೊರಟಿತು. ನದಿಯ ದಂಡೆಗೆ ಬರುತ್ತಲೇ ಮಂಗರಾಜ ಟಣ್ಣನೆ ಜಿಗಿದು ಗಿಡ ಏರಿತು. ಆವರೆಗೂ ಅದರ ನಡುಗುವಿಕೆ ನಿಂತಿರಲೇ ಇಲ್ಲ. ''ವಿಶ್ವಾಸ ದ್ರೋಹಿ ಮಿತ್ರಾ, ಗೆಳೆತನ ಮರೆತು ನನ್ನನ್ನು ನಿನ್ನ ಪತ್ನಿಯರಿಗೆ ಆಹಾರ ಮಾಡಲು ಹೊರಟಿದ್ದೆಯಾ ? ಉಪಕಾರಗೇಡಿ. ಸಾಕು ನಿನ್ನ ಗೆಳೆತನ'' ಎಂದು ಛೀ ಮಾರಿ ಹಾಕಿತು. ಪೆಚ್ಚು ಮೋರೆ ಮಾಡಿಕೊಂಡು ಕುಹಕಕೀರ್ತಿ ವಾಪಸ್ಸು ನಡೆಯಿತು. ಜಾಪೂರ ವೃಕ್ಷದಲ್ಲಿದ್ದ ಹಿರಿಯ ಮಂಗನಿಗೆ ಮಂಗರಾಜ ಹೇಳಿತು. ''ನಿನ್ನ ಮಾತಿಗೆ ಬೆಲೆಕೊಡದೆ ಕೆಟ್ಟೆ ; ಸದ್ಯ ದೇವರ ದಯೆಯಿಂದ ಹೆಚ್ಚಿನ ಅಪಾಯವಾಗುವ ಮುನ್ನವೇ ಪಾರಾದೆ.'' ಎಂದು ಅಂದಿನಿಂದ ಕುಹಕ ಕೀರ್ತಿಯ ಗೆಳೆತನ ಬಿಟ್ಟು ಬಲ್ಲೂಕ ವೃಕ್ಷದ ಮೇಲೆ ನೆಮ್ಮದಿಯಿಂದ ವಾಸಿಸಿತು. ★

ವಚನ ಸಂಕುಲ - ಆಧುನಿಕ ಶರಣರ ವಚನಗಳು

1. ಮಾತೆ ಅಕ್ಕಮಹಾದೇವಿ, ಬಸವ ಧರ್ಮಪೀಠ, ಕೂಡಲ ಸಂಗಮ

1. ಮಗು ಅತ್ತಾಗ ತಾಯಿ ಹಾಲುಣಿಸುವಳು.
ಭೂಮಿ ಹದಗೊಂಡಾಗ ರೈತ ಬೀಜ ಬಿತ್ತುವನು.
ಕಬ್ಬಿಣ ಕಾಯ್ದಾಗ ಕಂಬಾರ ಬಡಿದು ರೂಪುಗೊಳಿಸುವನು.
ಮಣ್ಣು ಹದಗೊಂಡಾಗ ಕುಂಬಾರ ಮಡಿಕೆ ಮಾಡುವನು.
ಭಕ್ತನ ಹೃದಯದಲ್ಲಿ ಹಂಬಲದುಂಬಿದಾಗ
ಗುರು ರೂಪದಲ್ಲಿ ಅನುಗ್ರಹಿಸುವನಯ್ಯಾ, ಮಾತಾಪ್ರಿಯ ಸಚ್ಚಿದಾನಂದನು.

2. ಲಿಂಗದೇವನ ಪುಜಿಸಿಹೆವೆಂದು
ಗಂಟೆಯ ಹೊತ್ತು ಕುಳಿತರೇನು ;
ಕ್ಷಣವಾದರೂ ಮನ ಲೀನವಾಗದೆ ?
ಅನ್ಯ ವಿಷಯಗಳಲ್ಲಿ ಮನವ ಹರಿಸುತ
ಮಾಡುವ ತಾಸೊತ್ತಿನಾರಾಧನೆ
ನಿಷ್ಠೆಯಿಂದ ಮಾಡುವ ನಿಮಿಷಕ್ಕೂ ಸಮಬಾರದಯ್ಯಾ
ಮಾತಾಪ್ರಿಯ ಸಚ್ಚಿದಾನಂದ.

3. ತನ್ನ ಎಡೆಯಲ್ಲಿ ಹಲ್ಲಿ ಬಿದ್ದುದನರಿಯದೆ
ಅನ್ಯರ ಎಡೆಯಲ್ಲಿ ನೊಣವ ಹುಡುಕುವಂತೆ
ತನ್ನ ಬೆನ್ನ ತಾ ನೋಡಿಕೊಳ್ಳಲಾಗದಂತೆ
ತನ್ನ ದೋಷ-ದೌರ್ಬಲ್ಯಗಳ ತಾನರಿಯದೆ
ತನ್ನ ತಾ ಬಣ್ಣಿಸಿಕೊಳ್ಳುತ್ತ
ತನ್ನೊಳಗಿರುವ ದುರ್ಗುಣಗಳ ಮರೆಮಾಚುತ್ತ
ಇನ್ನೊಬ್ಬರ ದೋಷಗಳನ್ನೇ ಹುಡುಕಿ ತೆಗೆಯುವನ ರೀತಿ
ಅರಮನೆಯ ಮೆರವಣಿಗೆಯ ಆನೆಯ
ಬೆನ್ನ ಮೇಲೆ ಕುಳಿತ ನೊಣವ ನೋಡುವವನ
ಪರಿಯಂತಾಯಿತ್ತಯ್ಯಾ ಮಾತಾಪ್ರಿಯ ಸಚ್ಚಿದಾನಂದ.

4. ಮಗುವ ಹೆತ್ತಲ್ಲದೆ ತಾಯಿಯೆನಲಾಗದು
ಮದುವೆಯಾಗದೆ ಮಡದಿಯೆನಲಾಗದು
ಅಂಗದ ಮೇಲೆ ಲಿಂಗವ ಧರಿಸಿದಲ್ಲದೆ, ಲಿಂಗವಂತರೆನ್ನಲಾಗದಯ್ಯಾ
ಮಾತಾಪ್ರಿಯ ಸಚ್ಚಿದಾನಂದ.

5. ಹೆಪ್ಪುಗೂಡಿಸಿದಲ್ಲದೆ ಹಾಲು ಮೊಸರಾಗದು;
ಕಡೆದಲ್ಲದೆ ಮೊಸರು ಬೆಣ್ಣೆಯಾಗದು;
ಕಾಸಿದಲ್ಲದೆ ಬೆಣ್ಣೆ ತುಪ್ಪವಾಗದು;
ಜೀವನು ಗುರುಕಾರುಣ್ಯವಿಲ್ಲದೆ ಭಕ್ತನಾಗನು

ಭಕ್ತನು ಶರಣರ ಸಂಗದಲ್ಲಿದ್ದಲ್ಲದೇ
ಜ್ಞಾನ ಅನುಭವವಳವಡದು;
ಜ್ಞಾನಿ ಅರ್ಚನೆ ಜಪ ತಪಂಗೈದಲ್ಲದೆ
ಆನಂದ ಹೊಂದಲಾರನಯ್ಯಾ
ಮಾತಾಪ್ರಿಯ ಸಚ್ಚಿದಾನಂದ .

6. ಹೊಟ್ಟೆ ಹಸಿದಲ್ಲದೆ ಪದಾರ್ಥ ರುಚಿಸಲಾರದು
ದೇಹ ದಣಿದಲ್ಲದೆ ಸುಖನಿದ್ರೆ ಹತ್ತಲಾರದು
ಭಕ್ತ ಹಂಬಲಗೊಂಡಲ್ಲದೆ ಗುರುಕಾರುಣ್ಯವಾಗಲಾರದು
ಗುರುಕಾರುಣ್ಯವಿಲ್ಲದೆ ನಿನ್ನೊಲಿಮೆಯಾಗದಯ್ಯಾ,
ಮಾತಾಪ್ರಿಯ ಸಚ್ಚಿದಾನಂದ.

7. ಮಗುವ ಹೆತ್ತು ಹಾಲುಣಿಸುವ
ತಾಯಿಯ ಮಾತೃವಾತ್ಸಲ್ಯದ ಸುಖವ
ಬಂಜೆಯೆತ್ತ ಬಲ್ಲಳಯ್ಯಾ ?
ಎದೆ ಹಾಲುಣ್ಣುತ್ತ ತಾಯ ಬಿಸಿಯಪ್ಪುಗೆಯಲ್ಲಿಪ್ಪ
ಆನಂದವ ಬಾಟಲಿಯ ಹಾಲು ಕುಡಿವ
ಮಗುವೆತ್ತ ಬಲ್ಲುದಯ್ಯಾ?
ಅಂಗದ ಮೇಲೆ ಲಿಂಗವನ್ನು ಧರಿಸಿ
ಇದ್ದಲ್ಲಿಯೇ ಪೂಜಿಸುವ
ಏಕದೇವೋಪಾಸನೆಯ ಮಹತ್ವವ
ತೀರ್ಥ ಕ್ಷೇತ್ರಂಗಳ ತಿರು-ತಿರುಗಿ ಬಳಲುವ
ಬಹುದೇವತೋಪಾಸಕರೆತ್ತ ಬಲ್ಲರಯ್ಯಾ
ಮಾತಾಪ್ರಿಯ ಸಚ್ಚಿದಾನಂದ ?

8. ಪತಿಯ ಬಿಟ್ಟು ಪರಪುರುಷರಿಗೆಳೆಸುವವಳ
ಪತಿವ್ರತೆಯೆನ್ನಬಹುದೆ?
ಕಟ್ಟಿದ ಲಿಂಗವ ಬಿಟ್ಟು ಅತ್ತಿತ್ತ ದೇವನ
ಹುಡುಕಲು ಹೋಗುವವರ ಸದ್ಭಕ್ತರೆನ್ನಬಹುದೆ,
ಮಾತಾ ಪ್ರಿಯ ಸಚ್ಚಿದಾನಂದ ?

9. ಲಗ್ನವಾಗಿ ಸತಿ-ಪತಿಗಳೊಂದಾಗಿ
ಸಂಸಾರ ಮಾಡಿದಲ್ಲದೆ ಮಗುವ ಹಡೆಯಲಾಗದು
ಬೀಜ ಮಣ್ಣಲ್ಲಿ ಬೆರೆತಲ್ಲದೆ
ಮೊಳಕೆಯೊಡೆದು ಮರವಾಗಲಾರದು
ಅಂಗದ ಮೇಲೆ ಲಿಂಗವ ಧರಿಸಿ
ನಿತ್ಯ ಲಿಂಗಾರ್ಚನೆಯ ಮಾಡಿ ಸತ್‌ಪಥದಲ್ಲಿ ನಡೆದಲ್ಲದೆ
ಮಾತಾಪ್ರಿಯ ಸಚ್ಚಿದಾನಂದನ ದಿವ್ಯಾನುಭವ ದೊರೆಯದು.

2. ಅಮರೇಗೌಡ, ಕೊಪ್ಪಳ

1. ಜನ್ಮ ಜನ್ಮದ ಸುಕೃತವೋ
ಮನುಜಜನ್ಮ ಎನ್ನದಾಯಿತ್ತು
ನಿಮ್ಮ ಪೂಜಿಸುವ ಅರಿವಾಯಿತ್ತು
ನಡೆ-ನುಡಿಯಲ್ಲಿ ಅನುಭವವಾಯಿತ್ತು
ಧನ್ಯನಾದೆನಯ್ಯ ನಿರಾಕಾರ ಲಿಂಗಯ್ಯ
ನಿಮ್ಮ ಶರಣರ ಶ್ರೀಪಾದವ ತೋರಿದೆಯಾಗಿ.

2. ಫಲವ ಸೇವಿಸದೆ ಸ್ವಾದ ರುಚಿಸದು ನೋಡಾ
ಹೂ ಮೂಸಿಸದೆ ಪರಿಮಳ ತಿಳಿಯದು ನೋಡಾ
ನಿಮ್ಮ ಸ್ನೇಹಕ್ಕೆ ಹಾತೊರೆಯದೆ
ಅರಿವು ಸಂಭವಿಸದು ನೋಡಾ ; ನಿರಾಕಾರ ಲಿಂಗಯ್ಯ

3. ಹೊರಗಣ್ಣ ನೋಟಕೆ ನೀ ನಿರಾಕಾರಿ
ಒಳಗಣ್ಣ ನೋಟಕೆ ನೀ ಸಾಕಾರಿ
ನೋಡುವ ನೋಟದ ಬಗೆಯನರಿಯದೆ ಬಳಲುವರಯ್ಯ
ಈ ನೋಟ ನೊಡಿ ಆನಂದಿಸಲು
ನಿಮ್ಮಲ್ಲಿ ದೃಢಭಕ್ತಿ ಬೇಕಯ್ಯ
ನಿರಾಕಾರ ಲಿಂಗಯ್ಯ

4. ಜಗದ ಅಕ್ಕ-ತಂಗಿಯರ ಕಣ್ಣನಲ್ಲಿ
ಎನ್ನನು ಇವನಾರೋ ಎಂದೆನಿಸದೆ
ಸಹೋದರನೆಂದೆನಿಸಯ್ಯಾ ನಿರಾಕಾರ ಲಿಂಗತಂದೆ

5. ನಿಜ ನಿಲುವಿಲ್ಲದ ದೈವಕ್ಕೆ
ಏನು ಮಾಡಿದರೆಂತಯ್ಯ ? ಎನಿತು ಪೂಜಿಸಿದರೆಂತಯ್ಯ
ಫಲಕೊಡದ ವೃಕ್ಷಕ್ಕೆ ನೀರನೆರೆದಂತಾಯಿತ್ತಯ್ಯಾ ಇವರ ಭಕ್ತಿ
ನಮ್ಮ ನಿರಾಕಾರ ಲಿಂಗಯ್ಯನ ಪೂಜಿಸಿದವರ ಭಕ್ತಿ ದಿಟವಾಯಿತ್ತಯ್ಯ.

6. ಮಡಿ-ಮಡಿ ಎಂಬಿರ್ರೆ, ಮುಟ್ಟು ಮೈಲಿಗೆ ಎಂಬಿರ್ರೆ
ಮುಟ್ಟನೊಳಗ್ಹುಟ್ಟದೆ ನೀವೆತ್ತಲಿಂದ ಬಂದಿರ್ರೆ ?
ಮನ ಶುಚಿಯುಳ್ಳಾತನೆ ಮಡಿವಂತ ಕಾಣರ್ರೆ
ನಮ್ಮ ನಿರಾಕಾರ ಲಿಂಗಯ್ಯನಲ್ಲಿ.

7. ದಿಟವ ನುಡಿವೆನಯ್ಯ
ನುಡಿತಪ್ಪಿ ನಡೆಯನಯ್ಯ, ನಡೆತಪ್ಪಿ ನುಡಿಯೆನಯ್ಯ
ಆ ನಡೆ-ನುಡಿಗಳನಳವಡಿಸಿಕೊಂಡು ನಾ ನಿಮ್ಮ ಒಡಗೂಡುವೆನಯ್ಯ
ನಿರಾಕಾರ ಲಿಂಗಯ್ಯ

8. ಲೋಕವನು ಅಂಜಿಸುವ ದೌರ್ಜನ್ಯ ಒಲ್ಲೆನಯ್ಯ

ಲೋಕಕ್ಕೆ ಬೇಕಾಗುವ ಸೌಜನ್ಯವ ಕರುಣಿಸಯ್ಯ
ಕಿಂಕರಭಾವದಿಂದ ಇರಿಸಯ್ಯ ನಿರಾಕಾರ ಲಿಂಗಯ್ಯ

9. ಮನ ನಿಮ್ಮದಾದ ಬಳಿಕ
ನೋವಿಂಗೆ ಅಲ್ಲಿ ನೆಲೆಯುಂಟೇನಯ್ಯಾ ?
ಅನುಭಾವ ನಿಮ್ಮದಾದ ಬಳಿಕ
ಅಜ್ಞಾನಕ್ಕೆ ಅಲ್ಲಿ ಇರುವುಂಟೇನಯ್ಯ ?
ಇದು ಕಾರಣ, ಸಂತಸದ ಕಡಲಾದೆನಯ್ಯ
ನಿರಾಕಾರ ಲಿಂಗಯ್ಯ.

10. ಭಕ್ತಿ ಇಲ್ಲದ ಅಂಧಕರಿಗೆ ದೇವರೆತ್ತ ಕಾಂಬನು ?
ಭಕ್ತಿಯುಳ್ಳ ಶರಣರಿಗೆ ದೇವರೇಕೆ ಕಾಣದಿಹನು ?
ಹೆತ್ತ ತಾಯಿ ಮಗನ ಬಿಟ್ಟಿಪ್ಪಳೆ ?
ಒಂದರಗಳಿಗೆ ನಮ್ಮನಗಲಿರೆ ನೋಡಾ ನಿರಾಕಾರ ಲಿಂಗಯ್ಯ

11. ಭವಿಯಾಗಿ ನೋಡಿದೊಡೆ ಇದು ಮರ್ತ್ಯಲೋಕ
ಭಕ್ತನಾಗಿ ನೋಡಿದೊಡೆ ಇದುವೇ ದೇವಲೋಕ
ಈ ನೋಟ ನೋಡಿ ಆನಂದಿಸಲು ನಿಮ್ಮಲ್ಲಿ ನಿರ್ಮಲ ಬಕುತಿ
ಅಚಲ ನಂಬಿಕೆ ಬೇಕಯ್ಯ ನಿರಾಕಾರ ಲಿಂಗಯ್ಯ

---

3. ಶಾರದಾ ಬಸವರಾಜ, ಭದ್ರಾವತಿ

ತನ್ನ ಮನಕ್ಕೆ ಬೋಧೆ

1. ಕೇಳದಿರು ಮನವೆ ಲಿಂಗದೇವನ ನಿಂದನೆಯ
ಮರುಳಾಗದಿರು ಮನವೆ ಆಸೆ ಆಮಿಷವೆಂಬ ದಳ್ಳುರಿಗೆ
ಸುಟ್ಟೀತು ಜೋಕೆ ಮನವೆ
ನಿನ್ನ ನೀನು ತಿಳಿದು ನೋಡು, ಆತ್ಮಸಾಕ್ಷಿಯಂ ಕೇಳಿ ನೋಡು
ಅರಿವಿನ ಕಣ್ಣು ತೆರೆದು ನೋಡು, ಕರದಲ್ಲಿ ಇಷ್ಟಲಿಂಗವಾಗಿ
ಮನದಲ್ಲಿ ಪ್ರಾಣಲಿಂಗವಾಗಿ, ಭಾವದಲ್ಲಿ ಭಾವಲಿಂಗವಾಗಿ
ಪರಿಣಮಿಸುವ ಲಿಂಗದೇವನ ಅನುಪಮ ರೂಪ ಕಂಡೆಯಲ್ಲವೆ?
ಇನ್ನು ಷಟ್‌ಸ್ಥಲದೊಳ್
ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ
ಪ್ರಸಾದಲಿಂಗ, ಮಹಾಲಿಂಗವಾಗಿ ಕಂಗೊಳಿಸುವ ವಿಶ್ವದ
ವಿರಾಟ ಸ್ವರೂಪವೇ ತಾನಾದ ಲಿಂಗಯ್ಯನ ಲಿಂಗದೇವನೆನ್ನಲಾಗದೆ
ಮತಿಹೀನನಾಗಬೇಡ ಎಲೆ ಮನವೆ !
ಸಚ್ಚಿದಾನಂದ ಪ್ರಿಯೆ ಮಾತೆಗೆ ಒಲಿದು ಬಂದ ನುಡಿ
ಗುರುಬಸವಣ್ಣನ ದಯದಿ ಬಂದದ್ದೆಂದು ತಿಳಿ ಮನವೆ.

2. ಲಿಂಗದೇವನಿಗೆ ಶರಣಾಗು ಮನವೆ

ಲಿಂಗದೇವ ಶರಣು ಎನ್ನದ ನಾಲಿಗೆ ಏಕೆ ?
ಲಿಂಗದೇವ ಶರಣು ಎನ್ನದ ಜನ್ಮವಿದೇಕೆ ?
ದೇಹದ ಗುಡಿಯಲ್ಲಿ ಲಿಂಗದೇವ ಇರುವಾಗ
ಅರುಹಿನ ಕುರುಹಾದ ಇಷ್ಟಲಿಂಗದೇವನ
ಘನವನರಿಯದೆ ಮರೆತೆ ಏಕೆ ?
ಗುರು ಲಿಂಗವೆಂದು ನಂಬಿದ ಬಳಿಕ
ಲಿಂಗಜಂಗಮವೆಂದು ನಂಬಿದ ಬಳಿಕ
ಲಿಂಗದೇವ ಎನ್ನಲು ಅನುಮಾನವೇಕೆ ?
ವಿಶ್ವವೆ ಲಿಂಗವು ಲಿಂಗವೆ ವಿಶ್ವವು
ತಿಳಿದು ನೋಡಲೆಲ್ಲಾ ಲಿಂಗಸ್ವರೂಪ
ಆದರೂ ಲಿಂಗದೇವ ಎನ್ನಲಾರೆ ಏಕೆ ?
ಲಿಂಗದೇವನ ಧರಿಸಿ ಲಿಂಗದೇವನ ಪೂಜಿಸಿ
ಲಿಂಗದೇವನಲ್ಲಿ ದೃಷ್ಟಿಯ ನಿಲಿಸಿ
ಲಿಂಗದೇವ ಎನ್ನಲು ಹಿಂಜರಿವೆ ಏಕೆ ?
ಬಸವಾದಿ ಶರಣರು ಪೂಜಿಸಿದ ಲಿಂಗ
ಲಿಂಗಾಂಗ ಸಮರಸದಿ ಬೆರಸಿದ ಲಿಂಗ
ಅಂಗವ ಪ್ರಭೆಯೊಳ್ ಬೆಳಗಿಸಿದ ಲಿಂಗ
ಎನ್ನ ಗುರು ಕೊಟ್ಟಂಥ ಅನುಪಮ ಲಿಂಗ
ಗುರು ಲಿಂಗಾನಂದರು ಬೆರೆದಂಥ ಲಿಂಗ
ಸಚ್ಚಿದಾನಂದ ಪ್ರಿಯೆ ಮಾತೆಗೆ ಒಲಿದ ಲಿಂಗದೇವ.

3. ಸಂಶಯದ ಸುಳಿಯು ಬೆಂಬಿಡದ ಭೂತ
ಒಮ್ಮೆ ಸುಳಿಯಿತೆಂದರೆ ತಳ್ಳುವುದು
ಪ್ರಪಾತಕ್ಕೆ ಎಂದೆಂದಿಗೂ
ಭಿನ್ನವಿಚಾರದವರ ಸಂಗ ಕಾಳಕೂಟ
ಬೇಡ ಬೇಡ ಇವರ ಒಡನಾಟ
ನಮ್ಮ ಲಿಂಗದೇವನ ಶರಣರ ಒಡನಾಟ
ಹಾಲು ಜೇನಿನ ಕೂಟ
ಸಚ್ಚಿದಾನಂದ ಪ್ರಿಯೆ ಮಾತಾಜಿ ಗುರುವೆ.

4. ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಗುರುಗಳಿಗೆ ನಮನ

ಲಿಂಗಾಯತ ಧರ್ಮಧ್ವಜವ ದಿಟ್ಟತನದಿಂದೆತ್ತಿ ಹಿಡಿದು, ಕೂ
ಗಾಡುವವರಬ್ಬರವ ಅಡಗಿಸಿ ಪ್ರವಚನ ಕ್ರಾಂತಿಕಹಳೆಯನ್ನೂದಿ, ಬಾ
ನಂಗಳದ ಧ್ರುವತಾರೆಯಂತೆ ಅಸಂಖ್ಯಾತ ಶರಣರ ಹೃನ್ಮಂದಿರ
ದಲ್ಲಿ ತೊಳಗಿ ಬೆಳಗುತಿರ್ಪ ಜಗದ್ಗುರು ಲಿಂಗಾನಂದರಿಗಿದೋ ಭಕ್ತಿ ಪೂರ್ವಕ ನಮನ

-ಸುಜ್ಞಾನಪ್ರಭು, ಕಾರ್ಯದರ್ಶಿ, ರಾಷ್ಟ್ರೀಯ ಬಸವ ದಳ, ತುಮಕೂರು

5. ಮಾತಾತನಯ (ವೀರಣ್ಣ ಕೊರ್ಲಹಳ್ಳಿ)

1. ಲಿಂಗಾಯತ ಧರ್ಮೀಯರಿಗೆ ಬಸವಣ್ಣನೇ 'ಗಣಪತಿ'
ಗಣಮೇಳ, ಗಣಮೇಳಾಪ, ಶರಣಮೇಳ
ಶರಣ ಸಂಗಮ, ಶರಣ ವ್ರತ, ಶರಣ ಚಿಂತನ ಕೂಟ
ಗೃಹಪ್ರವೇಶ ಇನ್ನೂ ಧರ್ಮದ ಎಲ್ಲ ಸಂಸ್ಕಾರಗಳು...
ಹೀಗೆ ಸರ್ವದರಲ್ಲಿಯೂ ಅಗ್ರಪೂಜೆ ಬಸವ ಗುರುವಿಗೆ ಮೀಸಲು
ಲಿಂಗಾಯತ ಧರ್ಮೀಯರ ಗಣಕ್ಕೆ ಬಸವಣ್ಣನೇ ಒಡೆಯ -'ಗಣಪತಿ'
ಎಂದ ಬಸವಾತ್ಮಜೆಗೆ ಶರಣು ಶರಣೆಂಬೆ
'ಬಸವ ಪ್ರಿಯ ಲಿಂಗದೇವ'

2. ಸಿಂಹಸ್ವಪ್ನ
ಕಾಸಿ ಕಮ್ಮಾರನಾಗಬಹುದು ; ಬೀಸಿ ಮಡಿವಾಳನಾಗಬಹುದು
ಹಾಸನಿಕ್ಕಿ ಸಾಲಿನಗನಾಗಬಹುದು ಇದು ಸರಳ
ಆದರೆ ಸೃಷ್ಟಿಕರ್ತ 'ಲಿಂಗದೇವನ' ನಿಜರೂಪವ ಜಗಕೆ ಸಾರಿದ
ಬಸವಾತ್ಮಜೆ ಆಗಲುಬಾರದಯ್ಯ ಇದು ಕರಕಷ್ಟ
ಆಶಕ್ತಿ, ಆ ಬಸವನಿಷ್ಠೆ ಆ ಕಳಕಳಿ ಮೈದುಂಬಿಕೊಂಡ ಮಾತೆ
ಬರಿ ಬಾಯಿಮಾತಿನ ಬಸವ ನಿಷ್ಠರಿಗೆ
ಮಠ-ಪೀಠಾಧಿಪತಿಗಳಿಗೆ ಸಿಂಹಸ್ವಪ್ನವಾದರಯ್ಯ,
ಈ ಬಸವಾತ್ಮಜೆ 'ಬಸವಪ್ರಿಯ ಲಿಂಗದೇವ'

3. ಘನಧರ್ಮ ಲಿಂಗಾಯತ
ಅಂಕು ಡೊಂಕುಗಳಿಲ್ಲ, ಸೋಂಕು ಸಂಬಂಧಗಳಿಲ್ಲ
ಬಿಂಕ ಬಿನ್ನಾಣಗಳು ಮೊದಲೇ ಇಲ್ಲಾ
ಸಂತೆ ಕಂತೆಗಳಲ್ಲಿ ಸಿಗುವುದೂ ಅಲ್ಲ
ಅಂತಹ ಘನಧರ್ಮ 'ಲಿಂಗಾಯತ'ವ
ಹೊಂದಿ, ನೆಟ್ಟನೆ ಕೈಯಲ್ಲಿರುವ ಸೃಷ್ಟಿಕರ್ತ ಲಿಂಗದೇವನ ಪೂಜಿಸಿ
ಜೀವನವ ಗಟ್ಟಿ ಮಾಡಬೇಕೆಂದ 'ಬಸವ ಪ್ರಿಯ ಲಿಂಗದೇವ'

4. ಮೂರರ ಮುಪ್ಪಡರಿದ ಯೋಗಿ
ವೈರಾಗ್ಯದ ತವನಿಧಿ
ಕಾಕು-ಪೋಕುಗಳಿಗೆ ಹೆದರಲಿಲ್ಲ
ಟೀಕೆ-ಟಿಪ್ಪಣಿಗಳಿಗೆ ಬೆದರಲಿಲ್ಲ
ಪೊಳ್ಳುತನ ಪುಂಡತನಗಳಿಗೆ ಸೊಪ್ಪಾಕಲಿಲ್ಲ
ಬರಿಮಾತಿನ ಮಂದ ಮತಿಗಳಿಗೆ 'ಲಿಂಗಾಯತ'
ಧರ್ಮದ ನಿಜ ನೀತಿ ಏನೆಂದು ತಿಳಿಸಿ
ಜಗದೊಳು ಸೃಷ್ಟಿಕರ್ತ ಲಿಂಗದೇವನ ಮಹಿಮೆ ಮೆರೆದ

ಭಕ್ತಿ ಜ್ಞಾನ, ವಿರಕ್ತಿಗಳೆಂಬ
"ಮೂರರ ಮುಪ್ಪಡರಿದ ಯೋಗಿ, ವೈರಾಗ್ಯದ ತವನಿಧಿ"ಯೆ
'ಬಸವಾತ್ಮಜೆ' ನಿಮ್ಮನೆಂತು ಬಣ್ಣಿಸಲಿ ?
ಅದು ಎನ್ನಳವಲ್ಲ ತಂದೆ, 'ಬಸವ'ಪ್ರಿಯ ಲಿಂಗದೇವ

5. 'ತೇಜಪುಂಜ' ವಾಗಿ ಬೆಳಗಿದ ಬಸವಾತ್ಮಜೆ.
ಬಲು ದಿಟ್ಟೆ, ಬಲು ನಿಷ್ಠೆ ಬಲು ಭಕ್ತೆ, ಬಲು ಶಕ್ತೆ
ಬಲು ಪ್ರೀತಿ, ಬಲು ರೀತಿ, ನೀತಿಗಳನಳವಡಿಸಿದ ಕೀರ್ತಿ ಭಸವಾತ್ಮಜೆಗೆ !
ಬಲು ದೊರೆ ಹೆದ್ದೊರೆಯಾಗಿ ಬಂದಿರಲು
ಭವದ ತಿಮಿರಧ ದಾಂಟಿ, ಭವದ
ಹಂಗನತಿಗಳೆದು 'ಲಿಂಗದೇವ'ನ
ಚಿರಸಾಕ್ಷಿಯಲಿ ಮೆರೆದು ಮತ್ತೆ ಮತ್ತೆ
'ತೇಜ ಪುಂಜವಾಗಿ' ನಮ್ಮೆಲ್ಲರ ಹೃದಯ ಬೆಳಗಿದ ಮಾತೆ
'ಬಸವಣ್ಣನೇ' ಧರ್ಮಗುರುವೆಂದು
ಸಾರಿದ ಖ್ಯಾತೆ ವಿಖ್ಯಾತೆಯ ಶಕ್ತಿಯನರಿವುದು ಎಮ್ಮಳವಲ್ಲವಯ್ಯ
ಬಸವ ಪ್ರಿಯ ಲಿಂಗದೇವ.

6. ಬಿ. ರತ್ನಮ್ಮ. ಚಲಮಪ್ಪ, ಚಳ್ಳಕೆರೆ

1. ಸರ್ವಜಾತಿಯ ಲಿಂಗದ ರಾಶಿಯ ಮಾಡಿದ ಗುರುವೆ ನಿಜ
ಜಂಗಮ ತತ್ವ ಸೃಷ್ಟಿಸಿ ತಿಳಿಸಿದವರು ಶರಣ ಜಂಗಮರು
ಬಂದ ಬರುವು ನಿಂದ ನಿಲುವು ತಾವಲ್ಲದೆ ಮತ್ತ್ಯಾರು ಇಲ್ಲ
ಶ್ರೀ ಗುರು ಲಿಂಗಾನಂದ ಗುರುವೆ ಕೃಪೆಯಾಗು

2. ಘನದನುಭಾವಿಗಳು ಪರಶಿವನ ನೆನೆಹುಳ್ಳವರು
ಸೃಷ್ಟಿಕರ್ತನಂಶಿಕರು ಲಿಂಗದೇವನ ಭಕ್ತರು ಲಿಂಗಧ್ಯಾನರು
ಸುಶೀಲರು ವ್ರತಸ್ಥರು ಪೂಜ್ಯ ಶ್ರೀ ಲಿಂಗಾನಂದರಲ್ಲದೆ
ಮತ್ತಾರುಯಿಲ್ಲ ಶ್ರೀ ಗುರುವೆ ಲಿಂಗಾನಂದಗುರು ಕೃಪೆಯಾಗು

3. ಧರ್ಮಿಗಳು ದಯಾಳು ದಯಾಭರಿತರು ಇವರು ಇಂತೀ
ಪುಣ್ಯಾತ್ಮರುಗಳ ರಾಶಿಯ ಮಾಡಿದವರು ಧರ್ಮದ
ಬೀಜವನುಳುಹಿ ಬಸವ ಮಂಟಪವೆಂಬ ಕಣಜವ
ಕಟ್ಟಿದವರು ಶ್ರೀಗುರುವೆ ಲಿಂಗಾನಂದಗುರು ಕೃಪೆಯಾಗು

ಮಾತಾಜಿಯವರನ್ನು ಕುರಿತು

1. ಧರ್ಮದ ಬೀಜಗಳ ಧರ್ಮಗುರು ಬಸವಣ್ಣಂಗೊಪ್ಪಿಸಿ
ಘನಲಿಂಗಕ್ಕೆ ವಿಳಾಸವಾದಿರಲ್ಲಾ ಬಸವಾತ್ಮಜೆಯರಾಗಿ
ಬಸವ ಧರ್ಮವ ಬಾನೆತ್ತರ ಏರಿಸಿ ಸಾರಿದವರು
ಗಣಲಿಂಗ ಸ್ಥಾಪಿಸಿದವರು ಶ್ರೀ ಗುರುವೆ ಯೋಗಿಮಾತೆ

2. ಪೂಜ್ಯ ಮಾತಾಜಿಯವರ ಮನದೊಳಗೆ ಸುಳಿದು
ನಲಿದಾಡಿದ ಸೃಷ್ಟಿಕರ್ತ ಲಿಂಗದೇವಾ ಪೂಜ್ಯಗುರು
ಬಸವಾತ್ಮಜೆಯವರ ವಿರಕ್ತರ ಜ್ಞಾನದಲ್ಲಿ ಹೊಳೆವ
ಕಳೆಯು ನೀನೆ ಘನಲಿಂಗದೇವ ಶ್ರೀ ಗುರುವೆ ಯೋಗಿಮಾತೆ

3. ಪೂಜ್ಯ ಶ್ರೀ ಗುರು ಬಸವಾತ್ಮಜೆಯವರ ಹೃತ್ಕಮಲ ಭಾಸ್ಕರ
ಎಂಬಂತೆ ಆನಂದ ಮೂರ್ತಿ ನಿರ್ಮಲ ನಿಜಾನಂದ ಮೂರ್ತಿ
ತೃಪ್ತಿಮೂರ್ತಿ ಅಭಯ ಹಸ್ತ ಬಸವಣ್ಣನವರ ಮೂರ್ತಿ
ಗುರುಬಸವಾತ್ಮಜೆಯವರ ಜ್ಞಾನದಲ್ಲಿ
ಹೊಳೆವ ಬೆಳೆಯಾಗಿ ಕಳೆಯಾಗಿ ಮೂಡಿ ಬಂದ ಮೂರ್ತಿ
ಬಸವಣ್ಣನ ಮೂರ್ತಿ ಶ್ರೀ ಗುರುವೆ ಯೋಗಿಮಾತೆ
ಶರಣು ಶರಣಾರ್ಥಿಗಳು.

7. ಜಿ. ಕಲ್ಯಾಣಮ್ಮ, ರಾಮದುರ್ಗ

1. ಹೆಣ್ಣು ಜಗದ ಕಣ್ಣು
ಹೆಣ್ಣು ಹುಣ್ಣೆಂದು ಜರಿದರು ಕೆಲವರು
ಹೆಣ್ಣು ಮಾಯೆಯೆಂದು ಜರಿದರು ಕೆಲವರು
ಹೆಣ್ಣು ಶೂದ್ರಳೆಂದು ಶೋಷಿಸಿದರು ಕೆಲವರು
ಹೆಣ್ಣು ಅಬಲೆಯೆಂದು ಸುಖಿಸಿದರು ಕೆಲವರು
ಇಂತಪ್ಪವರ ಕಣ್ಣು ಕತ್ತಲೆ ಕಳೆದು
ಹೆಣ್ಣು ಹೆಣ್ಣಲ್ಲ, ಹೆಣ್ಣು ಹುಣ್ಣಲ್ಲ
ಹೆಣ್ಣು ಜಗದ ಕಣ್ಣೆಂದು ಒಳಗಣ್ಣು ತೆರೆಸಿದ
ಎನ್ನಯ್ಯ ಬಚ್ಚ ಬರಿಯ ಬಸವಂಗೆ ನಮೋ ನಮೋ ಎಂಬೆನಯ್ಯ

2. "ಮರ್ತ್ಯಲೋಕದ ಮಹಾಮನೆ"
ಗೃಹಿಣಿ ಗೃಹಮುಚ್ಯತೆ
ಅಡಿಗೆ ಮನೆಯ ಅನ್ನಪೂರ್ಣೆ
ಹೆರಿಗೆ ಮನೆಯ ಮಹಾತಾಯಿ
ಎಂಬ ಮಾತುಗಳ ಹುತ್ತಿನಲಿ
ಹೂತು ಹೋದವಳಿಗೆ
ಮರ್ತ್ಯಲೋಕದ ಮಹಾಮನೆ ತೋರಿದ
ಅರಿವಿನ ಗುರು ಮಹಾಮಹಿಮ
ಎನ್ನಯ್ಯ ಬಚ್ಚ ಬರಿಯ ಬಸವಂಗೆ
ನಮೋ ನಮೋ ಎಂಬೆನಯ್ಯ."

3 "ನಾಡಿನ ಭವಿತವ್ಯ"
ಮನೆ ಮಠಗಳೆಲ್ಲಾ ಕ್ಲಬ್ ಬಾರ್'ಗಳಾದರೆ
ಗುರುಹಿರಿಯರೆಲ್ಲಾ ಕಳ್ಳ ಖದೀಮರಾದರೆ

ನೆರೆಹೊರೆಯವರೆಲ್ಲಾ ಭಯೋತ್ಪಾದಕರಾದರೆ
ಸಚಿವ ಶಾಸಕರೆಲ್ಲಾ ಭ್ರಷ್ಟರಾದರೆ
ಶಾಲೆ ಕಾಲೇಜುಗಳೆಲ್ಲಾ ವೇಶ್ಯಾವಾಟಿಕೆಗಳಾದರೆ
ನಾಡಿನ ಭವಿತವ್ಯ ಎಂತಯ್ಯ
ಎನ್ನಯ್ಯ ಬಚ್ಚ ಬರಿಯ ಬಸವಣ್ಣಾ ?

4. ನಿಜಗುರುಗಳು :

ಅಂಜಿಸಿ ಕಲಿಸುವವರು ಕೆಲವರು
ರಂಜಿಸಿ ಕಲಿಸುವವರು ಕೆಲವರು
ಅಂಜಿಸಿ ರಂಜಿಸಿ ಕಲಿಸುವವರು ಕೆಲರು
ಅಂಜಿಸದೆ ರಂಜಿಸದೆ ಅರಿವು ಅಧ್ಯಯನದಿಂದ ಕಲಿಸುವವರೇ
ನಿಜ ಗುರುಗಳು ನೋಡಾ,
ಎನ್ನಯ್ಯ ಬಚ್ಚ ಬರಿಯ ಬಸವಣ್ಣಾ !

8. ಡಾ|| ಮರಿಬಸಪ್ಪ ದನದಮನಿ, ಧಾರವಾಡ

1. ಶ್ರೀ ಗುರುಮಾತೆಯನರಿತೆನೆಂದು, ನಿಜ ಗುರುವ ಕಂಡೆ
ಶ್ರೀ ಗುರುಮಾತೆಯನರಿತೆನೆಂದು, ನಿಜ ಲಿಂಗವ ಕಂಡೆ
ಶ್ರೀ ಗುರು ಮಾತೆಯನರಿತೆನೆಂದು, ನಿಜ ಜಂಗಮವ ಕಂಡೆ
ಇಂತೀ ತ್ರಿವಿಧ ತತ್ತ್ವವನರಿತು ಆಚರಿಸಿದೆನೆಂದು
ಶ್ರೀ ಗುರು ಬಸವಣ್ಣನ ನಿಜಧರ್ಮ ಲಿಂಗಾಯತವು ಸಯವಾಯಿತ್ತೆನಗೆ
ಇದು ಕಾರಣ, ನಮ್ಮ ಲಿಂಗದೇವನ ಅನುಭಾವದ ಪ್ರಸಾದವ ಕೊಂಡು
ಪರಮಸುಖಿಯಾದೆನು ಕಾಣಾ
ಪಟ್ಟಲ ಸಿದ್ಧ ಶ್ರೀ ಚನ್ನಬಸವಣ್ಣಾ !

2. ಶ್ರೀ ಗುರು ಬಸವನ ನಾಮವು ಎನ್ನ ಶುದ್ಧ ಮನದಲ್ಲಿ ತುಂಬಿದಡೆ
ಇಷ್ಟಲಿಂಗವು ಎನ್ನ ಕರಸ್ಥಲಕ್ಕೆ ಅನುವಾಯಿತ್ತಯ್ಯಾ
ಇಷ್ಟಲಿಂಗದಲ್ಲಿ ಎನ್ನ ಶುದ್ಧ ಪ್ರಾಣಕಿರಣಂಗಳು ತುಂಬಿದಡೆ,
ಪ್ರಾಣಲಿಂಗಜ್ಯೋತಿಯು ಎನ್ನ ದೃಷ್ಟಿಯ ಸಂಧಿಸಿತ್ತಯ್ಯಾ
ಪ್ರಾಣಲಿಂಗ ಪ್ರಕಾಶವು ಎನ್ನ ಶುದ್ಧ ಭಾವಕ್ಕೆ ಸಂಬಂಧಿಸಿದಡೆ
ಭಾವಲಿಂಗದ ಬೆಳಗು ಎನ್ನ ಕಣ್ಗಳ ತುಂಬಿ ಕಂಗೊಳಿಸಿತ್ತಯ್ಯ
ಪ್ರಾಣಲಿಂಗ ಪ್ರಕಾಶವು ಭಾವಲಿಂಗ ಬೆಳಗಿನಲ್ಲಿ ಸಮರಸಹೊಂದಿದರೆ
ಲಿಂಗದೇವನ ಮಹಾಬೆಳಗು
ಎಮ್ಮ ಪರಮಗುರು ಶ್ರೀ ಬಸವಣ್ಣನ ಕರುಣೆಯಿಂದ
ಎನ್ನ ಸಹಸ್ರಾರ ಕಮಲದಲ್ಲಿ ತೊಳಗಿ ಬೆಳಗುತಿರ್ದುದ ಕಂಡು
ನಾ, ಎನ್ನ ಪರಮಾರಾಧ್ಯ ಗುರು ಶ್ರೀ ಗುರುಮಾತೆಯ
ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು ಕಾಣಾ
ಪಟ್ಟಲ ಸಿದ್ಧ ಶ್ರೀ ಚನ್ನಬಸವಣ್ಣಾ ಎನ್ನ ಸುಚಿತ್ತದಲ್ಲಿ.

ನಾಮಾಂಕಿತವೇ ಉದ್ದೇಶಕ್ಕೆ ಮಾರಕವಾದರೆ

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುತ್ತು ಸೂಸುವ ಗಾಳಿ ನಿಮ್ಮ ದಾನ ಎಂಬ ಶರಣರ ವಾಣಿಯಂತೆ, ಪಂಚಭೂತಾತ್ಮಕವಾದ ಗಾಳಿ, ಬೆಳಕು, ಭೂಮಿ, ಆಕಾಶ, ನೀರನ್ನು ಕೊಟ್ಟಂತಹ ಪರಮಾತ್ಮನನ್ನು ಪೂಜಿಸಬೇಕೆ ವಿನಾ ನಾವು ಕಲ್ಪಿಸಿದ ಪೌರಾಣಿಕ ಕಥೆಗಳಲ್ಲಿ ಬರುವ ದೇವತೆಗಳಿಗೆ ಮಾರು ಹೋದರೆ ಜನರು ಗುಂಪು ಗುಂಪಾಗಿ ಛಿದ್ರವಾಗುತ್ತಾರೆಯೇ ವಿನಾ ಏಕತೆಯ ಕಡೆಗೆ ಬರಲು ಸಾಧ್ಯವೇ ಇಲ್ಲ. ನಾವು ಆರಾಧಿಸಬೇಕಾದ ದೇವರೆಂದರೆ ನಿರಾಕಾರ, ನಿರ್ಗುಣ, ಹುಟ್ಟು-ಸಾವಿಲ್ಲದ, ಜಗತ್ತನ್ನು ಸಲಹುವ, ಜಗತ್ತು ತನಗೆ ಬೇಡವೆನಿಸಿದರೆ ಲಯ ಮಾಡಬಲ್ಲ ಶಕ್ತಿ ಇರುವುದು ಒಬ್ಬ ಪರಮಾತ್ಮ, ಗಾಡ್, ಅಲ್ಲಾ ಎಂದೆಲ್ಲಾ ಬೇರೆ ಬೇರೆ ಧರ್ಮದವರು ಒಂದೊಂದು ಹೆಸರಿನಿಂದ ಕರೆದು ಪೂಜಿಸುತ್ತಾರೆ. ಆದರೆ ನಮ್ಮಲ್ಲಿ ಒಂದು ತಪ್ಪು ಆಗಿರುವುದೆಂದರೆ, ನಮ್ಮ ಪೂರ್ವಜರಾದ ಪುರಂದರ ದಾಸರು, ಕನಕದಾಸರು, ಬಸವೇಶ್ವರರು, ಅಲ್ಲಮಪ್ರಭುಗಳು ಅಕ್ಕಮಹಾದೇವಿಯವರೆಲ್ಲರೂ ತಮ್ಮ ತಮ್ಮ ಪದಗಳ, ವಚನಗಳ ಮುದ್ರಿಕೆಗಳಿಗೆ ಮನುಜ ಕಲ್ಪಿತ ಪೌರಾಣಿಕ ಕಥೆಗಳ ದೇವತೆಗಳ ಹೆಸರುಗಳನ್ನು ಇಟ್ಟಿರುವುದರಿಂದ ಅವರ ಭಕ್ತಾದಿಗಳು ನಿಜ ತತ್ತ್ವವನ್ನು ತಿಳಿಯದೆ, ಕಾವ್ಯ ನಾಮಗಳಲ್ಲಿ ಬಳಸಿರುವ ಸ್ಥಾವರ ದೇವತೆಗಳ ಪೂಜಕರಾಗಿ, ಆರಾಧಕರಾಗಿ, ಗುಂಪುಗಳಾಗಿ, ಜಾತಿಗಳಾಗಿ ಒಡೆದು ಹೋಗಿದ್ದಾರೆ. ಉದಾ : ವೈಷ್ಣವರು ಪುರಂದರದಾಸರು ಕೊಟ್ಟಂತಹ ಸಾಹಿತ್ಯ ಆಚರಣೆಗೆ ತರದೆ ಅವರ ಕಾವ್ಯ ನಾಮದಲ್ಲಿ ಬರುವ ಸ್ಥಾವರ ಮೂರ್ತಿಯಾದ ವಿಠಲನ ಆರಾಧಕರಾದರು. ಅವರ ಸಾಹಿತ್ಯದಲ್ಲಿರುವ ತತ್ತ್ವವನ್ನು ಆಚರಿಸದೆ ಅವರ ಸಾಹಿತ್ಯ ಮೂಲೆ ಗುಂಪಾಯಿತು. ಅದೇ ರೀತಿ ಕನಕದಾಸರದು, ಬಸವೇಶ್ವರರದು ಎಂದರೆ ತಪ್ಪಿಲ್ಲ. ಕಾರಣ ದೇವರ ನಿಜವಾದ ಇರುವನ್ನು ಅರಿವು ಮಾಡಿ ತಿಳಿಸುವ ಬಸವಣ್ಣನವರು, ''ದೇವರು ಜಗದಲ್ಲೆಲ್ಲಾ ಇದ್ದಾನೆ, ಪಾತಾಳದಲ್ಲೆಲ್ಲ'' ಎಂದು ತಮ್ಮ ವಚನದ ಕೊನೆಯಲ್ಲಿ ಕೂಡಲಸಂಗಮದೇವ ನೀನೊಬ್ಬನೆ ಎಂದು ಹೇಳಿದ್ದಾರೆ. ಬಸವಣ್ಣನವರು ಸಹ ಸ್ಥಾವರಲಿಂಗವಾದ ಕೂಡಲಸಂಗಮದಲ್ಲಿರುವ ಸಂಗಮೇಶ್ವರನನ್ನು ಆರಾಧಿಸಿದ್ದಾರೆ ಎಂದು ತಿಳಿದು, ಬಸವಣ್ಣನವರ ದೇವರೆಂದರೆ ಈಶ್ವರ ಪ್ರತೀಕವಾದ ಸಂಗಮೇಶ್ವರ ಎಂದು ಹೇಳುವ ಭಕ್ತರು ಎಷ್ಟು ಮಂದಿ ಇಲ್ಲ ?

ಈ ರೀತಿ ಅವರುಗಳ ಉದ್ದೇಶ ಈಡೇರದೆ ಮತ್ತೆ ಅದೇ ಗುಂಪುಗಳಾಗಿ, ಪಂಥಗಳಾಗಿವೆ. ಅವರು ಹೇಳಿದ ದೇವರ ಸ್ವರೂಪವೇ ಒಂದು, ನಾವು ಆಚರಿಸುತ್ತಿರುವ ದೇವರೆ ಮತ್ತೊಂದು. ಆದುದರಿಂದ ನಿರಾಕಾರ, ನಿರ್ಗುಣ ದೇವರನ್ನು ಸಂಬೋಧಿಸಿ ಅವನ ಇರುವಿಕೆಯನ್ನು ಜನಸಾಮಾನ್ಯರಿಗೆ ತಿಳಿಸುವಾಗ, ಬೇರೆ ಧರ್ಮದಲ್ಲಿರುವಂತೆ ಉದಾ: ಕ್ರಿಶ್ಚಿಯನ್ನರ ಧರ್ಮದಲ್ಲಿ, ದೇವರಿಗೆ ಹೆಸರಿಟ್ಟಿರುವುದು ಯಹೋವ, ಮುಸ್ಲೀಮ್‌ರಲ್ಲಿ ದೇವರಿಗೆ ಅಲ್ಲಾ ಎಂದು ಹೆಸರಿಟ್ಟಿದ್ದಾರೆ. ಆದ್ದರಿಂದ ಹಿಂದಿನ ಮಹಾನುಭಾವರು ಏಕತೆಯ ಸೂಚಿಸುವ ಎಲ್ಲರೂ ಒಪ್ಪುವ ಹೆಸರಿಡದೆ ಪೌರಾಣಿಕ ಕಥೆಗಳಲ್ಲಿ ಬರುವ ಬ್ರಹ್ಮ, ವಿಷ್ಣು, ಮಹೇಶ್ವರ ಇತ್ಯಾದಿ ಸಾವಿರಾರು ದೇವತೆಗಳ ಹೆಸರುಗಳನ್ನು ಅವರವರ ಕಾವ್ಯನಾಮಗಳಾಗಿ, ವಚನ ಮುದ್ರಿಕೆಗಳಾಗಿ ಉಪಯೋಗಿಸಿ ತುಂಬಾ ಅನ್ಯಾಯ ಮಾಡಿಕೊಂಡಿದ್ದಾರೆ. ಮತ್ತು ಸಮಾಜಕ್ಕೂ ಅನ್ಯಾಯವಾಗಿದೆ ಎಂದು ನನ್ನ ಅನಿಸಿಕೆ.

ಒಂದು ವೇಳೆ ಇವರೆಲ್ಲರೂ ಇಸ್ಲಾಂ ಹಾಗೂ ಕ್ರಿಶ್ಚಿಯನ್ ಧರ್ಮಗಳಲ್ಲಿರುವಂತೆ ಅಲ್ಲಾ ಹಾಗೂ ಯಹೋವ ಸರಿಸಮಾನ ಪದ ಉಪಯೋಗಿಸಿ ತಮ್ಮ ಕಾವ್ಯನಾಮಗಳಲ್ಲಿ ಬರೆದಿದ್ದರೆ ನಮ್ಮ ಹಿಂದೂ ಪರಂಪರೆ ಜಗದಗಲಕ್ಕೂ ಹರಿಯುತ್ತಿತ್ತು ಎಂದು ನನ್ನ ಭಾವನೆ. ಈ ನನ್ನ ಭಾವನೆಯನ್ನು ನಿಮ್ಮ ಮುಂದೆ ಇಟ್ಟು ಚಿಂತನೆಯನ್ನು ನಿಮಗೆ ಬಿಟ್ಟಿರುವೆ. ದಯವಿಟ್ಟು ಇದರ ಬಗ್ಗೆ ಚಿಂತನ-ಮಂಥನ ಮಾಡಿ, ಎಲ್ಲರೂ ಒಪ್ಪುವ, ನಿರಾಕಾರ, ಹುಟ್ಟು-ಸಾವಿಲ್ಲದ, ಗಂಡು-ಹೆಣ್ಣು ಅಲ್ಲದ ಸೃಷ್ಟಿಕರ್ತನಿಗೆ ಸೂಕ್ತ ವಚನ ಮುದ್ರಿಕೆಯನ್ನು ಆಯ್ಕೆ ಮಾಡಿರಿ ಎಂದು ಮಾತೆಯವರಲ್ಲಿ ನನ್ನ ವಿನಂತಿ

-ಚಿಂತಕ, ಬೆಂಗಳೂರು

ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು

(ಹಿಂದಿನ ತಿಂಗಳ ಸಂಚಿಕೆಯಿಂದ ಮುಂದುವರೆದಿದೆ)

1. ಅಂಜನಾದೇವಿ ಮತ್ತು ಶಿವಣ್ಣ ಶಿರೂರು (ಅಕ್ಕಮಹಾದೇವಿಯ ಮೂರ್ತಿಗಾಗಿ) — ರೂ. 50,001=00
2. ಸುಮಿತ್ರಾ ಮರಿಬಸಪ್ಪ ದನದಮನಿ, ಧಾರವಾಡ (ಚನ್ನಬಸವಣ್ಣನವರ ಮೂರ್ತಿಗಾಗಿ) — ರೂ. 50,001-00
3. ಶಾಂತಾ ಶಂಕರಗೌಡ ಗೌಡರ, ಧಾರವಾಡ (ಅಕ್ಕನಾಗಲಾಂಬಿಕಾ ಮೂರ್ತಿಗಾಗಿ) — ರೂ. 50,001-00

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ

ಬಸವ ಮಂಟಪ ನಿರ್ಮಾಣಕ್ಕೆ ಧನ ದಾಸೋಹ ಮಾಡಿದವರು

4. ವೀರಣ್ಣ ಚನ್ನಬಸಪ್ಪ ಹಳಿಯಾಳ, ಧಾರವಾಡ — ರೂ. 15001-00
5. ಕಲ್ಲಮ್ಮ ವಿರುಪಾಕ್ಷಗೌಡ ಪೋಲೀಸ್ ಪಾಟೀಲ್ — ರೂ. 15001-00
6. ಶಿವಕುಮಾರ ಕೌದಿಶೆಟ್ಟರು, ಹಾವೇರಿ — ರೂ. 15001-00
7. ವಸಂತ ಶಂಭುಲಿಂಗನಗೌಡ ಪರಪ್ಪನವರು, ಧಾರವಾಡ — ರೂ. 15001-00
8. ಮಹಾಂತಪ್ಪ ಗುರುಲಿಂಗಪ್ಪ ಕೋರಿ, ಧಾರವಾಡ — ರೂ. 15001-00
9. ಗಂಗಮ್ಮ ಕನಸೋಗಿ, ಧಾರವಾಡ — ರೂ. 10001-00
10. ಅಶೋಕ ಎಂ, ನಂದರಗಿ — ರೂ. 5001-00
11. ಗಂಗಮ್ಮ ರಾಜಶೇಖರಪ್ಪ, ಧಾರವಾಡ — ರೂ. 5001-00
12. ಶ್ರೀದೇವಿ ನಾಗಪ್ಪ ಅಂಕಸದೊಡ್ಡಿ, ಧಾರವಾಡ — ರೂ. 5001-00
13. ಡಾ|| ಸುವರ್ಣ ಚನ್ನಶೆಟ್ಟಿ, ಧಾರವಾಡ — ರೂ. 5001-00
14. ನೀಲಾಂಬಿಕಾ ಡಾ|| ಬಸವಪ್ರಭು ದೊಡ್ಡಮನಿ, ಧಾರವಾಡ — ರೂ. 5001-00
15. ಶಂಕರ್ ಲಿಂಗಪ್ಪ ರಾಜಗೊಳಿ, ಧಾರವಾಡ — ರೂ. 5001-00
16. ಬಸವರಾಜ ಬೆಂಡಿಗೇರಿ, ಧಾರವಾಡ — ರೂ. 5001-00
17. ಶಾಂತಾ ಮತ್ತು ಮಲ್ಲೇಶಪ್ಪ ಕುಸುಗಲ್, ಧಾರವಾಡ — ರೂ. 6500
18. ಮಲಪ್ರಭಾ ಬಸವರಾಜ ಹೆಬ್ಬಳ್ಳಿ, ಧಾರವಾಡ — ರೂ. 5001
19. ಸುಧಾ ಕೆಂಪಣ್ಣ ಉಣ್ಣಿ, ಧಾರವಾಡ — ರೂ. 5001
20. ಗಿರಿಜಮ್ಮ ಸುಬ್ಬಣ್ಣ ಮೈಸೂರು, ಧಾರವಾಡ — ರೂ. 5001
21. ನಾಗರತ್ನ ಲಿಂ|| ಶಿವಪ್ಪ ಏಣಗಿ, ಧಾರವಾಡ — ರೂ. 5001
22. ಡಾ|| ಆರ್.ಸಿ. ಧೂಳಪ್ಪನವರು, ಧಾರವಾಡ — ರೂ. 5001
23. ಎಂ.ಯು.ಪಾಟೀಲ್, ಧಾರವಾಡ — ರೂ. 5001
24. ಆರ್.ಡಿ. ಹಿರೇಗೌಡರು, ಧಾರವಾಡ — ರೂ. 5001
25. ಬಿ.ಎಸ್.ದೊಡ್ಡಗೌಡರು, ಧಾರವಾಡ — ರೂ. 5001
26. ಬಿ.ನಾಗರತ್ನಮ್ಮ, ಬಿ.ಬಸವಂತಪ್ಪ ಧಾರವಾಡ — ರೂ. 5001
27. ಐ.ಎಂ.ಚಚಡಿ, ಧಾರವಾಡ — ರೂ. 5001

28. ಅಕ್ಕಮ್ಮ ಶಂಕರ್ ಪರ್ರೀಟ್, ಧಾರವಾಡ — ರೂ. 5001
29. ಶಿವಾನಂದ ಶಿವಮೂರ್ತೆಪ್ಪ ಪೂಜಾರ, ಧಾರವಾಡ — ರೂ. 5001
30. ಶಾರದಾದೇವಿ ಮಡಿವಾಳಪ್ಪ ಸಾಂಬ್ರಾಣಿ, ಧಾರವಾಡ — ರೂ. 5001
31. ಮಂಜುನಾಥ ಗುರುಶಾಂತಪ್ಪ ಅಂಗಡಿ, ಧಾರವಾಡ — ರೂ. 5001-00
32. ಜಗದೀಶ ಬಿ. ಯಾದವಾಡ, ಧಾರವಾಡ — ರೂ. 5001-00
33. ಷಡಕ್ಷರಯ್ಯ ಶಿವಮೂರ್ತಯ್ಯ ಹಿರೇಮಠ — ರೂ. 5001-00
34. ಬಿ.ಪಿ. ಸಿದ್ದನಗೌಡ್ರು, ಧಾರವಾಡ — ರೂ. 5001-00
35. ಯಲ್ಲೂಬಾಯಿ ದೊಡ್ಡಪ್ಪ ಕೊಂಬಳ್ಳಿ, ಧಾರವಾಡ — ರೂ. 5001-00
36. ಶಂಕರಗೌಡ ಎಸ್. ಪಾಟೀಲ್, ಕಿತ್ತೂರು — ರೂ. 5001-00
37. ಶಂಕರ್ ಕರಡಿಗುಡ್ಡ, ನವನಗರ — ರೂ. 2001-00
38. ಕಮಲವ್ವ ವಿರುಪಾಕ್ಷಪ್ಪ ಕಟಗಿ, ಧಾರವಾಡ — ರೂ. 2001-00
39. ಲಲಿತ. ವಿ. ತುಮ್ಮಿನಕಟ್ಟಿ, ಧಾರವಾಡ — ರೂ. 2001-00
40. ಮಡಿವಾಳಪ್ಪ ಯಲ್ಲಪ್ಪ ಭಬ್ಬಿ, ಧಾರವಾಡ — ರೂ. 2001-00
41. ಅಕ್ಕುತಾಯಿ ಶಂಕ್ರಪ್ಪ ಅಂಗಡಿ, ಧಾರವಾಡ — ರೂ. 2001-00
42. ಹೆಚ್.ಹೆಚ್. ಕೆಂಚನಗೌಡರು, ಧಾರವಾಡ — ರೂ. 2100-00
43. ಗೋವಿಂದಪ್ಪ ಹನುಮಂತಪ್ಪ ಇಪ್ಪಿತ್ತಾರ, ಧಾರವಾಡ — ರೂ. 2100-00
44. ಪಾರ್ವತಮ್ಮ ತಲ್ಲೂರು, ಧಾರವಾಡ — ರೂ. 1111-00
45. ಪಾರ್ವತಿ ಸಿದ್ಧರಾಮಗೌಡ ಪಾಟೀಲ, ಧಾರವಾಡ — ರೂ. 1001-00
46. ಗಿರಿಜಮ್ಮ ಮಂಟ್ಯಾಳ, ಧಾರವಾಡ — ರೂ. 1001-00
47. ದೇಮಪ್ಪ ಯಲ್ಲಪ್ಪ ಗಾಳಿ, ಧಾರವಾಡ — ರೂ. 1112-00
48. ಜ್ಯೋತಿ ಪ್ರಕಾಶ ಸಣ್ಣಕ್ಕಿ, ಧಾರವಾಡ — ರೂ. 1001-00
49. ಅನಸೂಯಾ ಅಡಿವೆಪ್ಪ ಪುಡಕಲಕಟ್ಟಿ, ಧಾರವಾಡ — ರೂ. 1001-00
50. ಎಸ್.ಎಂ. ಪಾಟೀಲ, ಧಾರವಾಡ — ರೂ. 1001-00
51. ರಾಮನಗೌಡ ಸಣ್ಣ ಬಸವನಗೌಡ ಪಾಟೀಲ, ಧಾರವಾಡ — ರೂ. 1001-00
52. ಶಿವಪುತ್ರಪ್ಪ ಗಂಗಪ್ಪ ಬನ್ನಿಗಿಡದ, ಹೆಬ್ಬಳ್ಳಿ — ರೂ. 1001-00
53. ಪಾರ್ವತಿ ವಿರುಪಾಕ್ಷಪ್ಪ ಹಾತರಕಿ, ಧಾರವಾಡ — ರೂ. 1001-00
54. ಗುರುಸಿದ್ದಪ್ಪ ನೀಲಕಂಠಪ್ಪ ಕೋಟೂರು, ಧಾರವಾಡ — ರೂ. 1001-00
55. ವಿಜಯಾ ಮಹಾಂತೇಶ ಬಸವರಾಜ ಹೆಗಡೆ, ಧಾರವಾಡ — ರೂ. 1111-00
56. ಶಾರದಾಂಬಾ ಮಲ್ಲಪ್ಪ ಹಳಕಟ್ಟಿ, ಧಾರವಾಡ — ರೂ. 1001-00
57. ಶೇಖರಗೌಡ ಬಸವನಗೌಡ ಪಾಟೀಲ — ರೂ. 1008-00
58. ಸಿ.ಬಿ. ಚಂದ್ರಶೇಖರಪ್ಪ, ಧಾರವಾಡ — ರೂ. 1101-00
59. ವೀರಣ್ಣ ಕೊರ್ಲಹಳ್ಳಿ, ಕೊಪ್ಪಳ

ಗುರು ಕಾಣಿಕೆ. ವಿಶ್ವಕಲ್ಯಾಣ ಮಿಷನ್, ಬೆಂಗಳೂರು — ರೂ. 5001-00

ಶರಣ. ಸಿ.ಬಿ. ಬೇವನೂರು, ಬಿಜಾಪುರ

ಬಸವ ಧರ್ಮ ಪೀಠದ ದಾಸೋಹನಿಧಿಗೆ

1111-00 ರೂ. ಕೊಟ್ಟ ಧನ ದಾಸೋಹಿಗಳು

1. ಗಂಗಮ್ಮ ದೇವಕುಮಾರ ಕಾಪೋಲಕರ, ಧಾರವಾಡ
2. ಶಾಂತವ್ವ ಮಹಾರುದ್ರಪ್ಪ ಇಂಗಳಗಿ, ಧಾರವಾಡ
3. ಶೋಭಾ ಹಣಬರಟ್ಟಿ, ಧಾರವಾಡ
4. ಸರೋಜಾ ಗುರುಸಿದ್ದಪ್ಪ ಬಾಳೀಕಾಯಿ, ಧಾರವಾಡ
5. ಗೀತಾ ವೀರಣ್ಣ ಗುಜಮಾಗಡಿ, ಧಾರವಾಡ
6. ವಿಮಲವ್ವ ಚನ್ನಗೂಡಪ್ಪ ಮೂಗಿ, ಧಾರವಾಡ
7. ಅನಿತಾ ನಾಗಪ್ಪ ಬಿದರಿ, ಧಾರವಾಡ
8. ಚನ್ನಮ್ಮ ಭೀಮನಗೌಡ್ರ ದೊಡ್ಡಗೌಡ್ರ, ಧಾರವಾಡ
9. ಮಹಾದೇವಿ ಮೂಗಬಸಪ್ಪ ನಾಗನೂರು, ಧಾರವಾಡ
10. ಬಸವರಾಜ ಶಂಕ್ರಪ್ಪ ಮುರಗೋಡ, ಧಾರವಾಡ
11. ಚಂದ್ರಶೇಖರ ನಿಂಗಪ್ಪ ಬೇಲೂರು, ಧಾರವಾಡ
12. ಗುರುಸಿದ್ಧಪ್ಪ ನೀಲಪ್ಪಗೌಡ ಕಾಲವಾಡ, ಧಾರವಾಡ
13. ಮಂಜುಳಾ ಬಸವರಾಜ ರುದ್ರಪ್ಪ ಬೆಳಗಾಂವ, ಧಾರವಾಡ
14. ಶೈಲಾ ರುದ್ರಗೌಡ ಪಾಟೀಲ, ಧಾರವಾಡ
15. ಗುರುಸಿದ್ದಪ್ಪ ಶಂಕ್ರಪ್ಪ ಬೆಂಡಿಗೇರಿ, ಧಾರವಾಡ
16. ಲಕ್ಷ್ಮಣ್ ನಾರಾಯಣ ಪೀಸೆ, ಕಾರವಾರ
17. ಗಂಗಾದೇವಿ ರುದ್ರಪ್ಪ ಅಂಚಟಗೇರಿ, ಧಾರವಾಡ
18. ನೀಲಪ್ಪ ಸೋಮಪ್ಪ ಕವಳಿ, ಧಾರವಾಡ
19. ಶಕುಂತಲಾ ರಾಜು ಗಣೂರೆ, ಧಾರವಾಡ
20. ಗದಿಗೆಪ್ಪ ಕುಸುಗಲ್, ಧಾರವಾಡ


ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

-ಮುಂದುವರಿಯುವುದು

★ ಬಸವ ವಚನಾಮೃತ ★

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ತನು ಮನ ಧನವಲಸದಂತೆ ಮಾಡಯ್ಯಾ
ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ
ಮನ ದಾಸೋಹಕ್ಕೆ ಲೀಯವಹಂತೆ ಮಾಡಯ್ಯಾ
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ
ಪರಿಣಾಮಿಸುವಂತೆ ಮಾಡು ಲಿಂಗದೇವಾ.

-ಬ.ವ.ದೀಪ್ತಿ. 456



ಪೂಜ್ಯ ಶ್ರೀ ಮಾತಾಜಿಯವರಿಂದ
ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಶಾಲು ಹೊದ್ದಿಕೆ, ಮಾಲಾರ್ಪಣೆ



ಪೂಜ್ಯ ಶ್ರೀ ಮಾತಾಜಿಯವರಿಂದ ಭಸ್ಮಧಾರಣೆ

ಕಲ್ಯಾಣ ಕಿರಣ CPMG/KA/BGW-50 ಮೇ -2001
R.NO. 19980/70 WPP (W) - 17



ಪಟ್ಟಾರೋಹಣದ ಬಳಿಕ ಪ್ರಥಮ ಮಹಾ ಜಗದ್ಗುರುಗಳಿಂದ
ದ್ವಿತೀಯ ಮಹಾ ಜಗದ್ಗುರುಗಳಿಗೆ ಅಭಿಷೇಕ